
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 41 ಅಕ್ಟೋಬರ್ 09, 2005 ಬೆಲೆ ರೂ. 3.00



ಶ್ರಮಿಕ ವರ್ಗದ ಸಮರ ಘೋಷಣೆ

ಸೆಪ್ಟೆಂಬರ್ 29: ಮುಷ್ಕರದ ಕರೆಗೆ ಅಪೂರ್ವ ಸ್ಪಂದನ



ಕರ್ನಾಟಕ : ಶೈಕ್ಷಣಿಕ ಸಮಸ್ಯೆಗಳ ಆಗರ



- ‘ಪ್ರೀತಿಯ ಮಾಸ್ತ್ರ’ ಕಾಂ. ಪಿ.ಆರ್. ನೆನಪು
- ‘ಮಣ್ಣು ಮಾರಾಟಕ್ಕಿದೆ’
- ಜರ್ಮನಿ ಚುನಾವಣೆ : ಎಡಪಂಥೀಯರ ಬಲವರ್ಧನೆ

ಕರ್ನಾಟಕ: ಶೈಕ್ಷಣಿಕ ಸಮಸ್ಯೆಗಳ ಆಗರ!

ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದಿದ್ದರೂ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ ಶುಲ್ಕಗಳು ಗಗನಕ್ಕೆ ಏರಿಕೆ.... ರೊಚ್ಚಿಗೆದ್ದ ವಿದ್ಯಾರ್ಥಿ ಸಮುದಾಯ ಎಸ್‌ಎಫ್‌ಐ ನೇತೃತ್ವದಲ್ಲಿ ದಣಿವರಿಯದ ಬೃಹತ್ ಹೋರಾಟ.... ಕೊನೆಗೂ ಹೋರಾಟಕ್ಕೆ ಮಣಿದ ಸರ್ಕಾರ. ಸ್ವತಃ ಮುಖ್ಯಮಂತ್ರಿಗಳಿಂದಲೇ ಎಸ್‌ಎಫ್‌ಐ ನಿಯೋಗದೊಂದಿಗೆ ಮಾತುಕತೆಗೆ ಆಹ್ವಾನ!... ಈ ಬಗ್ಗೆ ಓದಿ

ದಿನಾಂಕ 22.9.05ರಂದು ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಗಂಭೀರ ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸಲು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ರಾಜ್ಯ ಮುಖಂಡರೊಂದಿಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭೆ ನಡೆಸಿದರು.


ಸಭೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲಾ- ಕಾಲೇಜುಗಳಿಗೆ ಅಗತ್ಯ ಗ್ರಂಥಾಲಯ, ಉಪನ್ಯಾಸಕರು, ಪ್ರಯೋಗಾಲಯ ಕ್ರೀಡಾಸಾಮಗ್ರಿ ಶೌಚಾಲಯ ಮುಂತಾದ ಮೂಲಭೂತ ಸೌಲಭ್ಯ ಒದಗಿಸಬೇಕು. ಜೆ.ಓ.ಸಿ ಕೋರ್ಸು ರದ್ದುಪಡಿಸಬಾರದು. 10-20 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರನ್ನು ಖಾಯಂ ಮಾಡಬೇಕು, ಜಿಲ್ಲೆಯ ವಾಸ್ತವ ಪರಿಸ್ಥಿತಿ ಆಧಾರದಲ್ಲಿ ಕೋರ್ಸು ಆರಂಭಿಸಿ, ಸ್ವಯಂ ಹಣಕಾಸು ಕೋರ್ಸು ಆರಂಭಿಸುವ ಪ್ರಸ್ತಾಪ ರದ್ದುಪಡಿಸಿ, ರಾಜ್ಯದಲ್ಲಿ ಹಾವೇರಿ ಸೇರಿದಂತೆ ಅಗತ್ಯವಿರುವ ಕಡೆಗಳಲ್ಲಿ ಸರ್ಕಾರಿ ಪದವಿ ಮತ್ತು ಪದವಿ ಪೂರ್ವ ಕಾಲೇಜು ಆರಂಭಿಸಿ, ಬಸ್ ಪಾಸ್ ದರ ಏರಿಕೆ ಕೈಬಿಡಿ, ಪಾಸ್ ವ್ಯಾಪ್ತಿ 40ರಿಂದ 80ಕಿ.ಮೀ ಗೆ ಏರಿಸಿ, ಪಾಸ್ ವಿತರಿಸಲು 25 ವರ್ಷ ವಯೋಮಿತಿ ನಿರ್ಬಂಧ ರದ್ದುಮಾಡಿ, ವಿವಿಗಳಲ್ಲಿ ಭ್ರಷ್ಟತೆ ತಡೆಗಟ್ಟಿ, ಪಾರದರ್ಶಕ ಪರೀಕ್ಷೆ ನಡೆಸಲು ಅಗತ್ಯ ಸೌಲಭ್ಯವೊದಗಿಸಿ, ವಿವಿಗಳಲ್ಲಿ - ಶಿಕ್ಷಣ ಶೈಕ್ಷಣಿಕ ತಜ್ಞರಿಗೆ ಪ್ರಾತಿನಿಧ್ಯ ನೀಡಿ ಹಾಗೂ ಸ್ನಾತಕೋತ್ತರ ಪಿ.ಜಿ ಕೇಂದ್ರಗಳಿಗೆ ಅಗತ್ಯ ಸೌಲಭ್ಯ ನೀಡಿ ಎಸ್.ಸಿ/ಎಸ್.ಟಿ ಮತ್ತು ಬಿ.ಸಿ.ಎಂ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ (ಶಿಷ್ಯವೇತನ) ಬಿಡುಗಡೆಗೊಳಿಸಿ, ರಾಜ್ಯಾದ್ಯಂತ ತಡೆಹಿಡಿದಿರುವ ಶುಲ್ಕ ವಿನಾಯತಿ ಹಣ ಮತ್ತು ಶಿಷ್ಯವೇತನ ವಿದ್ಯಾರ್ಥಿಗಳಿಗೆ ಕೊಡಿ, ಎಸ್.ಸಿ/ಎಸ್.ಟಿ., ಬಿ.ಸಿ.ಎಂ ಹಾಸ್ಟೆಲ್‌ಗೆ ಅಗತ್ಯ ಸೌಲಭ್ಯ ನೀಡಿ ಹಾಸ್ಟೆಲ್ ಪ್ರವೇಶ ಸಾಮರ್ಥ್ಯ(ಅರ್ಜಿಗಳಿಗೆ ತಕ್ಕಂತೆ)ಹೆಚ್ಚಿಸಿ ಅಗತ್ಯವಿರುವ ಕಡೆ ಹಾಸ್ಟೆಲ್ ಕೊಡಿ ಹಾಗೂ ಬೆಲೆ ಏರಿಕೆಗೆ ಅನುಗುಣವಾಗಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಾಸಿಕ ಆಹಾರ ವೆಚ್ಚ ಹೆಚ್ಚಿಸಿ, ಏರಿಸಿರುವ ಎಲ್ಲಾ ಹಂತದ ಶುಲ್ಕ ವಾಪಸ್ ಕೊಡಿ, ಬಿ.ಕಾಂ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಹೆಸರಲ್ಲಿ ಶುಲ್ಕ 2000 ರೂ ವಸೂಲಿ ನಿಲ್ಲಿಸಿ ಮತ್ತು ವಾಪಸ್ ಕೊಡಿ, ಪ್ರತಿವರ್ಷ ಶೇ.10 ಪದವಿ ಶುಲ್ಕ ಏರಿಕೆ ನೀತಿ ಕೈಬಿಡಿ, ರಾಜ್ಯದಲ್ಲಿ ಖಾಲಿ ಇರುವ ಶಿಕ್ಷಕ- ಉಪನ್ಯಾಸಕ ಹುದ್ದೆ ಭರ್ತಿ ಮಾಡಿ, ಡೊನೇಷನ್ ಹಾವಳಿತಡೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಡೊನೇಷನ್ ವಿರೋಧಿ ಸಮಿತಿ ರಚನೆ ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಮೂಲಭೂತ ಸೌಲಭ್ಯ.... ಎಐಸಿಟಿಇ, ಎಂ.ಸಿ.ಐ, ಡಿ.ಸಿ.ಐ. ನಿರ್ದೇಶನ ಉಲ್ಲಂಘಿಸಿದ ಖಾಸಗಿ ತಾಂತ್ರಿಕ, ವೈದ್ಯಕೀಯ ಕಾಲೇಜು ಮಾನ್ಯತೆ ರದ್ದುಪಡಿಸಿ, ಸುಪ್ರಿಂಕೋರ್ಟ್ ತೀರ್ಪಿನಂತೆ ಶಾಲಾ ಕಾಲೇಜು-ವಿವಿಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿ ರಚಿಸಿ ವಿದ್ಯಾರ್ಥಿನಿಯರಿಗೆ ಪಿಡಬ್ಲ್ಯು, ಉಚಿತ ಶಿಕ್ಷಣ ನೀಡಿ, ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಬಜೆಟನಲ್ಲಿ ಶೇ.30 ಮತ್ತು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಶೇ 10 ಮೀಸಲಿಡುವಂತೆ ಮುಂತಾದ ಬೇಡಿಕೆಗಳನ್ನು ಎಸ್‌ಎಫ್‌ಐ ನಿಯೋಗ ಘನ ಸರ್ಕಾರದ ಮುಂದೆ ಇಟ್ಟಿತ್ತು.

ಮುಖ್ಯಮಂತ್ರಿ ಭರವಸೆ

ಬೇಡಿಕೆಗಳನ್ನು 1 ಗಂಟೆಗಳ ಕಾಲ ಆಲಿಸಿದ ಮುಖ್ಯಮಂತ್ರಿ ಎನ್.ಧರ್ಮಸಿಂಗ್ ಮಾತನಾಡಿ, ಪ್ರಜಾಪ್ರಭುತ್ವ ಮೌಲ್ಯ ರಕ್ಷಣೆಯಲ್ಲಿ ಎಸ್‌ಎಫ್‌ಐ ಹಿಂದಿನಿಂದ ಪ್ರಮುಖ ಪಾತ್ರ ವಹಿಸುತ್ತಿದೆ ಹಾಗೂ ಈ ವ್ಯವಸ್ಥೆಯಲ್ಲಿ ನಮಗೆ ಶೈಕ್ಷಣಿಕ ಸಮಸ್ಯೆ ಗಮನಕ್ಕೆ ತಂದಿದ್ದೀರಿ ಎಂದರಲ್ಲದೆ ಸಂಬಂಧಪಟ್ಟ ಸಚಿವರಿಗೆ, ಅಧಿಕಾರಿಗಳಿಗೆ ತಕ್ಷಣ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಅಲ್ಲದೆ ತತ್‌ಕ್ಷಣ ಎಲ್ಲಾ ಉನ್ನತ ಅಧಿಕಾರಿಗಳ ಸಭೆ ನಡೆಸುತ್ತೇನೆ ಅಲ್ಲದೆ ಬಸ್‌ಪಾಸ್ ದರ ಏರಿಕೆ ಮಾಡುವುದಿಲ್ಲ. 40ರಿಂದ 80 ಕಿ.ಮೀ ವ್ಯಾಪ್ತಿಗೆ ವಿಸ್ತರಿಸಲು, 25 ವರ್ಷ ವಯೋಮಿತಿ ನಿರ್ಬಂಧ ತೆಗೆಯಲು, ಹಾವೇರಿ ಸೇರಿದಂತೆ ಅಗತ್ಯ-ಜಿಲ್ಲೆಗಳಲ್ಲಿ ಪದವಿ ಕಾಲೇಜು ತೆರೆಯಲು ಹಾಗೂ 221 ಸರ್ಕಾರಿ ಹಿರಿಯ ಕಾಲೇಜು ತೆರೆಯಲು, ಬಿಕಾಂ ವಿದ್ಯಾರ್ಥಿಗಳ ಕಂಪ್ಯೂಟರ್ ಶುಲ್ಕ 2000ರಿಂದ 1000 ರೂಗಳಿಗೆ ಇಳಿಸಲು ವಸೂಲಿ ಮಾಡಿದ ಹಣ ವಾಪಸ್ ಕೊಡಿಸಲು, ತಡೆಹಿಡಿದಿರುವ ಲಕ್ಷಾಂತರ ಶುಲ್ಕ ವಿನಾಯತಿ ಮತ್ತು ಶಿಷ್ಯವೇತನ ಬಿಡುಗಡೆಗೆ ಕ್ರಮಕೈಗೊಳ್ಳಲು, ಶಿಕ್ಷಕ ಉಪನ್ಯಾಸಕರ ಹುದ್ದೆ ಭರ್ತಿ ಮಾಡಲು, ಸೌಲಭ್ಯವಿಲ್ಲದ, ಖಾಸಗಿ ತಾಂತ್ರಿಕ ವೈದ್ಯಕೀಯ ಕಾಲೇಜು ರದ್ದುಪಡಿಸಲು, ಹಾಸ್ಟೆಲ್‌ಗಳಿಗೆ ಅಗತ್ಯ ಸೌಲಭ್ಯ ಒದಗಿಸಲು ಮತ್ತು ಪ್ರವೇಶ ಹೆಚ್ಚಿಸಲು ಹಾಗೂ ಜೆ.ಓ.ಸಿ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿಗಳು ಒಪ್ಪಿಗೆ ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಕ್ರಮ ಜರುಗಿಸುವಂತೆ ಆದೇಶಿಸಿದರು.

“ಮುಖ್ಯಮಂತ್ರಿ ಕ್ಷೇತ್ರದಲ್ಲೂ ಶಾಲೆಗೆ ಬೋರ್ಡ್ ಎಲ್ಲ”

ಶಾಲಾ ಕಾಲೇಜುಗಳಿಗೆ ಅಗತ್ಯ ಸೌಲಭ್ಯಕ್ಕೆ ಎಸ್‌ಎಫ್‌ಐ ಮುಖಂಡರೂ ಒತ್ತಾಯಿಸಿದಾಗ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಧರ್ಮಸಿಂಗ್- ನನ್ನ 25 ವರ್ಷದ ರಾಜಕೀಯದಲ್ಲಿ ನನ್ನ ಕ್ಷೇತ್ರಕ್ಕೆ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲಾಗಿಲ್ಲ. ಸಮಸ್ಯೆಗಳು ಇದ್ದೇ ಇವೆ ಎಂದಾಗ ಹಲವಾರು ಸಾರಿ ಅವರ ಕ್ಷೇತ್ರದಲ್ಲಿ ಶಾಲೆಗಳಿಗೆ ಬೋರ್ಡ್- ಕೊಠಡಿ, ಶಿಕ್ಷಕರು ಇಲ್ಲದೆ ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ಮಾಡಿದ ನೆನಪು ಎಲ್ಲರನ್ನು ಕಾಡಿತು. ರಾಜ್ಯದ ಶೈಕ್ಷಣಿಕ ಸಮಸ್ಯೆಯನ್ನು ವೈಜ್ಞಾನಿಕವಾಗಿ ತೆರೆದಿಟ್ಟ ಎಸ್.ಎಫ್.ಐ ನಿಯೋಗವನ್ನು ವೀಕ್ಷಿಸುತ್ತಿದ್ದ ವಿಭಾಗ ಅಭಿನಂದಿಸಿತು ಮಾತ್ರವಲ್ಲ, ಮಾತುಕತೆಗೆ ಹೋಗುವ ಮುನ್ನವೇ ಎಲ್ಲ ಪೊಲೀಸ್, ಐಎಎಸ್ ಅಧಿಕಾರಿಗಳು ವಿಶೇಷವಾಗಿ ಸ್ವಾಗತಿಸಿದರು.



ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತಿರುವ ಎಸ್‌ಎಫ್‌ಐ ನಿಯೋಗ

ಚರ್ಚೆಯಲ್ಲಿ ಮುಖ್ಯಮಂತ್ರಿ ಎನ್.ಧರಂಸಿಂಗ್ ಶಿಕ್ಷಣ ಸಚಿವ ರಾಮಲಿಂಗರೆಡ್ಡಿ, ಕಾರ್ಮಿಕ ಸಚಿವ ತನ್ವಿರ್‌ಸೇಠ್, ಸಮಾಜ ಕಲ್ಯಾಣ ಇಲಾಖೆಯ ಸಚಿವ ವೈ.ನಾಗಪ್ಪ, ಮಾಜಿ ಸಚಿವ ಬಿ.ಕೆ.ಚಂದ್ರಶೇಖರ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶೋಭಾನಂಬೀಶನ್, ವೈದ್ಯಕೀಯ ಶಿಕ್ಷಣ ಕಾರ್ಯದರ್ಶಿ, ಡಾ.ಡಿ.ವಿ. ಪ್ರಸಾದ್ ಮುಂತಾದವರು ಹಾಜರಿದ್ದರು.

ಎಸ್‌ಎಫ್‌ಐ ನ ಈ ನಿಯೋಗದಲ್ಲಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಬಿ.ರಾಜಶೇಖರ ಮೂರ್ತಿ, ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್, ರಾಜ್ಯ ಉಪಾಧ್ಯಕ್ಷ ವಿಜಯಕುಮಾರ್ ದೊಡ್ಡಮನಿ, ವಿವಿಧ ಜಿಲ್ಲೆಗಳ ಪರವಾಗಿ ನಾರಾಯಣ ಕಾಳೆ, ಅರುಣ್‌ಕುಮಾರ್, ರಮೇಶ್, ಪ್ರಸಾದ್, ವಿಕ್ರಮ್ ವಿನ್ಸಂಟ್, ಕೆ.ಬಿ.ಮಂಜುನಾಥ್, ಚಿಂದ್ರೂ ಅಕ್ಕಿವಳ್ಳಿ, ಅನಂತ್ ಭಾಗಿಯಾಗಿದ್ದರು.

ಹೋರಾಟದ ಪ್ರತಿಫಲ

ಎಸ್‌ಎಫ್‌ಐ ನೇತೃತ್ವದಲ್ಲಿ ಸ್ಫಳಿಯವಾಗಿ ಜೂನ್, ಜುಲೈ ತಿಂಗಳ ಹೋರಾಟ ಆಗಸ್ಟ್ 25ರಂದು ಶಾಲಾ, ಕಾಲೇಜು ಬಂದ್ ಭಾಗವಾಗಿ ಹತ್ತಾರು ಲಕ್ಷ ವಿದ್ಯಾರ್ಥಿಗಳ ತರಗತಿ ಬಹಿಷ್ಕಾರ ರಾಜ್ಯ ವ್ಯಾಪ್ತಿ ಶಾಲಾ ಕಾಲೇಜು ಬಂದ್ ಯಶಸ್ವಿ ನಂತರ ಸೆಪ್ಟೆಂಬರ್ 14ರಂದು 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ರಾಜ್ಯಮಟ್ಟದ ರ್‍ಯಾಲಿ ನಡೆಸಿದ ಪ್ರತಿಫಲವೇ ಈ ಸಭೆ ಕರೆಯಲು ಕಾರಣವಾಯಿತು.

■ ವಿಜಯಕುಮಾರ್ ದೊಡ್ಡಮನಿ

ಮಾತಿನ ಬಾಣಕ್ಕೆ ಬಾಯ್ ಮುಚ್ಚಿದ ರಾಮಲಿಂಗಾರೆಡ್ಡಿ

ರಾಜ್ಯದ ವಿದ್ಯಾರ್ಥಿಗಳನ್ನು ಪ್ರತಿನಿಧಿಸಿದ ಎಸ್‌ಎಫ್‌ಐನ ಮುಖಂಡರು ಮತ್ತು ಕರ್ನಾಟಕ ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣ ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಉಳಿದ ಅಧಿಕಾರಿಗಳ ನಡುವೆ ಮಾತಿನ ಬಾಣಗಳು ಬಿರುಸಿನಿಂದ ಪ್ರಯೋಗವಾದವು. ಇಲ್ಲಿ ನಡೆದದ್ದು ಯುದ್ಧವಲ್ಲವಾದರೂ ಇದೊಂದು ರೀತಿಯ ಯುದ್ಧವೇ. ಇಲ್ಲಿ ಪ್ರಯೋಗವಾಗಿದ್ದು ಆಯುಧಗಳಲ್ಲ, ಬದಲಾಗಿ ಶಿಕ್ಷಣ ಸಮಸ್ಯೆಗಳ ವಿರುದ್ಧ ಇದ್ದ ಆಕ್ರೋಶಗಳು. ಎಸ್.ಎಫ್.ಐ ಮುಖಂಡರು ಶಿಕ್ಷಣದ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಡಿಸಿಡಲು ಪ್ರಾರಂಭಿಸಿದರು ತಕ್ಷಣ ಶಿಕ್ಷಣ ಸಚಿವರಾದ ರಾಮಲಿಂಗರೆಡ್ಡಿಯವರು ಮಧ್ಯಪ್ರವೇಶ ಮಾಡಿ “ಪಶ್ಚಿಮ ಬಂಗಾಳದಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿದೇರಿ” ಎಂದರು. ತಕ್ಷಣ ಅದರ ಬಗ್ಗೆ ಹೆಚ್ಚು ಗಮನ ಹರಿಸದೆ ಶಿಕ್ಷಣದ ಸಮಸ್ಯೆ ಬಗ್ಗೆ ಎಸ್‌ಎಫ್‌ಐ ಮುಖಂಡರು ಗಮನಹರಿಸಿದರು. ಆದರೂ ಸಚಿವರು ಪದೇ ಪದೇ ಪಶ್ಚಿಮ ಬಂಗಾಳಕ್ಕೆ ಹೋಗುತ್ತಿದ್ದರು. 3 ಬಾರಿ ಈ ವಿಚಾರವನ್ನು ಪ್ರಸ್ತಾಪಿಸಿದ ಮೇಲೆ ಸುಮ್ಮನಿರದ ಎಸ್‌ಎಫ್‌ಐ ಮುಖಂಡರು “ಸ್ವಾಮಿ ನಾವು ಕರ್ನಾಟಕದ ವಿದ್ಯಾರ್ಥಿಗಳನ್ನು ಪ್ರತಿನಿಧಿಸಿ ರಾಜ್ಯದಲ್ಲಿನ ಶಿಕ್ಷಣದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲು ಬಂದಿದ್ದೇವೆ. ಪಶ್ಚಿಮ ಬಂಗಾಳದ ಬಗ್ಗೆ ಚರ್ಚೆ ನಡೆಸಲು ಅಲ್ಲ, ಹಾಗೇನಾದರೂ ಪಶ್ಚಿಮ ಬಂಗಾಳದ ಬಗ್ಗೆ ಚರ್ಚೆ ನಡೆಸುವುದಾದರೆ ಬೇರೆಡೆ ಅದನ್ನು ಚರ್ಚಿಸೋಣ” ಎಂದರು. ಈ ಮಾತನ್ನು ಕೇಳಿದ ರಾಮಲಿಂಗರೆಡ್ಡಿಯವರು ತುಟಿಕ್ ಪಿಟಿಕ್ ಎನ್ನದೆ ಬಾಯ್ ಮುಚ್ಚಿಕೊಂಡು ತಲೆಬಗ್ಗಿಸಿ ಕುಳಿತರು. ಇದು ಇಷ್ಟಕ್ಕೇ ನಿಲ್ಲಲಿಲ್ಲ ಮುಂದುವರಿದು ರಾಜ್ಯದಲ್ಲಿ ಅತ್ಯಂತ ಅಸಮರ್ಪಕವಾಗಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿದ್ದೀರಿ ಇದರಿಂದ ಸಾಕಷ್ಟು ದೋಷಗಳುಂಟಾಗುತ್ತಿವೆ. (ಅಂಕಪಟ್ಟಿ, ಪರೀಕ್ಷೆ ಇತ್ಯಾದಿ) ಇದನ್ನು ಸರಿಪಡಿಸಬೇಕು ಎಂದು ವಿದ್ಯಾರ್ಥಿ ಮುಖಂಡರು ಮಾತನಾಡಿದರೆ, ತಕ್ಷಣ ರಾಮಲಿಂಗಾರೆಡ್ಡಿಯವರು 'ನಾವು ಯಾವುದನ್ನೇ ಮಾಡಿದರೂ ಶಿಕ್ಷಣ ತಜ್ಞರಿಂದಲೇ ಮಾಡಿಸುವುದು' ಎಂದರು. ಇದಕ್ಕೆ ಪ್ರತ್ಯುತ್ತರವಾಗಿ 'ಹೌದು ಸ್ವಾಮಿ ಬೆಂಗಳೂರು ವಿ.ವಿಯ ಸಿಂಡಿಕೇಟ್‌ಗೆ ಕಳೆದ ಬಾರಿ ನೀವು ಎಂತಹ ಶಿಕ್ಷಣ ತಜ್ಞರನ್ನು ನೇಮಕ ಮಾಡಿದ್ದೀರೆಂದು ಇಡೀ ರಾಜ್ಯಕ್ಕೇ ಗೊತ್ತಿದೆ' ಎಂದರು. (ಸಿಂಡಿಕೇಟ್‌ಗೆ ನೇಮಕ ಮಾಡುವಾಗ ಅವರು ಶಿಕ್ಷಣ ತಜ್ಞರಾಗಿರಬೇಕೆಂದು ನಿಯಮಾವಳಿ ಇದ್ದರೂ ಉದ್ದಿಮೆದಾರರನ್ನು ಕಳೆದ ಸಿಂಡಿಕೇಟ್‌ಗೆ ಸರ್ಕಾರದಿಂದ ನಾಮಕರಣ ಮಾಡಿರುವುದನ್ನು ಇಲ್ಲಿ ಗಮನಿಸಬಹುದು)

ಒಟ್ಟಾರೆಯಾಗಿ ಮಾತುಕತೆಯು ಪ್ರಾರಂಭದಿಂದ ಕೊನೆಯವರೆಗೂ ನಿರಂತರವಾಗಿ ಕರ್ನಾಟಕ ರಾಜ್ಯದ ಪರಿಸ್ಥಿತಿಯನ್ನು ಸಮಗ್ರವಾಗಿ ಉದಾಹರಣೆ ಸಮೇತ ವಿವರಿಸಿ ಸರ್ಕಾರದ, ಅಧಿಕಾರಿಗಳ ನಿಜವಾದ ಬಣ್ಣವನ್ನು ಬಯಲು ಮಾಡಲು ನಿಯೋಗ ಯಶಸ್ವಿಯಾಯಿತು.

ಹೆಚ್.ಆರ್.ನವೀನ್ ಕುಮಾರ್

ತಿದ್ದುಪಡಿ

ಪತ್ರಿಕೆಯ ಸಂಚಿಕೆ 37, 38 - 39, 40 ರಲ್ಲಿ ಪುಟ 2 ರಲ್ಲಿ 'ಕೋಮುವಾದದ ಕರಾಳ ಮುಖಗಳು' ಪುಸ್ತಕದಲ್ಲಿನ ಮುಂಬೈ ಗಲಭೆಗಳ ಕುರಿತ ಲೇಖನವನ್ನು ಪ್ರಕಟಿಸಲಾಗಿದೆ. ಕಣ್ತಪ್ಪಿನಿಂದಾಗಿ ಈ ಸಂಬಂಧ ಈ ಕೆಳಗಿನ ಕೆಲವು ಮಾಹಿತಿಗಳು ತಪ್ಪಿಹೋಗಿವೆ.

ಪ್ರಕಾಶಕರು : ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.

ಆಯ್ದ ಲೇಖನದ ಲೇಖಕರು : ಕೆ.ಫಣಿರಾಜ್, ಜೆ.ರಾಜಶೇಖರ್

ಪುಸ್ತಕದ ಬೆಲೆ : 75 ರೂ.

ನವ ಕರ್ನಾಟಕ ಪ್ರಕಾಶನದ ಕೃಪೆಯನ್ನು ಸ್ಮರಿಸಲಾಗಿದೆ.

ಸಾರ್ವತ್ರಿಕ ಮುಷ್ಕರ ಅಪೂರ್ವ ಯಶಸ್ಸು

ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ ಪ್ರತಿಭಟಿಸಿ ಕರೆಗೆ ವ್ಯಾಪಕ ಬೆಂಬಲ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆಯ ಗಂಟೆ

ಕರ್ನಾಟಕ ರಾಜ್ಯದಲ್ಲಿ ಸೆಪ್ಟೆಂಬರ್ 29 ರ ಚಳುವಳಿ ಕಂಡ ಅಪೂರ್ವ ಯಶಸ್ಸು ಹಾಗೂ ಅದರ ರಾಜಕೀಯ ಮಹತ್ವ - ಪರಿಣಾಮಗಳ ಕುರಿತು ಬರೆದಿದ್ದಾರೆ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್

ಜಿ.ಎನ್.ನಾಗರಾಜ್

ಕರ್ನಾಟಕದ ಪ್ರಮುಖ ರಾಜಕೀಯ ಪಕ್ಷಗಳು - ಸಮ್ಮಿಶ್ರ ಸರ್ಕಾರದ ಭಾಗಿದಾರರಾದ ಎರಡು ಆಳುವ ಪಕ್ಷಗಳು ಕಾಂಗ್ರೆಸ್ ಮತ್ತು ಜನತಾದಳ ಹಾಗೂ ಪ್ರಮುಖ ವಿರೋಧಪಕ್ಷವಾದ ಬಿಜೆಪಿ ಪಕ್ಷ ಜನತೆ ಯಾರಿಗೆ ಅವರ ಸಮಸ್ಯೆಗಳನ್ನು ಬಗೆಹರಿಸುವ ಹೊಣೆಯನ್ನು ಹೊರಿಸಿದ್ದರೋ , ಅಧಿಕಾರ ದಾಹ, ಅದರ ಫಲವಾದ ವ್ಯಕ್ತಿಪ್ರತಿಷ್ಠೆ, ಗುಂಪುಗಾರಿಕೆ, ಗೊಂದಲಗಳಲ್ಲಿ ಮುಳುಗಿ ತಮ್ಮ ನಡುವಿನ ಜಗಳಗಳೇ ಗುದ್ದಾಟಗಳೇ ಇಡೀ ರಾಜ್ಯದ ಜನರ ಸಮಸ್ಯೆಗಳು ಎನ್ನುವ ಭ್ರಮಾಲೋಕದಲ್ಲಿ ತಾವು ಮುಳುಗಿರುವುದು ಮಾತ್ರವಲ್ಲ, ಜನರನ್ನೂ ಮುಳುಗಿಸಲು ಯತ್ನಿಸುತ್ತಿರುವಾಗ ಸಿಪಿಐ(ಎಂ) ಪಕ್ಷ ಜನತೆಗೆ ಜವಾಬ್ದಾರರಾಗಿ ಜನರ ಧ್ವನಿಗೆ ದನಿಗೂಡಿಸುವ, ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳಿಗೆ ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸುವ ಏಕಮಾತ್ರ ಪಕ್ಷವೆಂಬುದನ್ನು ನಿರೂಪಿಸಿತು.

ಕಾರ್ಮಿಕವರ್ಗದ ತಕ್ಷಣದ ಸಮಸ್ಯೆಗಳು ಮಾತ್ರವಲ್ಲದೆ ದೇಶದ ವಿವಿಧ ವಿಭಾಗಗಳ ಜನತೆಯ ಸಮಸ್ಯೆಗಳೂ ಸೇರಿದಂತೆ 16 ಪ್ರಮುಖ ಹಕ್ಕೊತ್ತಾಯಗಳನ್ನು ದೇಶದ ಮುಂದಿರಿಸಿ ಸೇ. 29 ರಂದು ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ದೇಶದ ಪ್ರಮುಖ ಕ್ರಾಂತಿಕಾರಿ ಹಾಗೂ ಪ್ರಜಾಸತ್ತಾತ್ಮಕ ಕಾರ್ಮಿಕ ಸಂಘಟನೆಗಳು ಸೇರಿದ ಜೆಸಿಟಿಯು ಕರೆ ನೀಡಿತ್ತು. ಅದರ ಜೊತೆ ಜೊತೆಗೇ ಎಡಪಂಥೀಯ ರೈತ-ಕೂಲಿಕಾರ ಸಂಘಟನೆಗಳು 'ಕೃಷಿಯನ್ನು ರಕ್ಷಿಸಿ - ದೇಶವನ್ನು ರಕ್ಷಿಸಿ' ಎಂಬ ಘೋಷಣೆಯ ಮೇಲೆ ಅಂದೇ ರೈಲ್ ರೋಕೋ - ರಸ್ತಾ ರೋಕೋ ಕರೆಯನ್ನು ನೀಡಿದ್ದವು.



ಸಿಪಿಐ(ಎಂ) ರಾಜ್ಯ ಸಮಿತಿ ಹೋರಾಟದ ಕಣಕ್ಕೆ ಧುಮುಕಿದ ಕಾರ್ಮಿಕ - ರೈತ ವರ್ಗಗಳಿಗೆ ಕ್ರಿಯಾಶೀಲ ಬೆಂಬಲ ನೀಡುವ ಜೊತೆಗೆ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಿರುವ ಇತರ ಜನವಿಭಾಗಗಳನ್ನು ಈ ಹೋರಾಟದಲ್ಲಿ ಮೇಳವಿಸಿಕೊಳ್ಳಲು ಹಾಗೂ ಕರ್ನಾಟಕದ ಎಲ್ಲ ಜನ ವಿಭಾಗಗಳೂ ಪ್ರತಿಭಟಿಸುವಂತೆ ಸ್ವಯಂಪ್ರೇರಿತವಾಗಿ ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ, ಪ್ರತಿಭಟಿಸಿ ಎಂದು ಕರೆ ನೀಡಲು ನಿರ್ಧರಿಸಿತು. ಕರ್ನಾಟಕದ ಇತರ ಪ್ರಗತಿಪರ ಸಂಘಟನೆಗಳನ್ನೂ ಸಂಪರ್ಕಿಸಿ ಜಂಟಿ ಕರೆ ನೀಡಲಾಯಿತು.

ಸಾರ್ವತ್ರಿಕ ಮುಷ್ಕರ ಹಾಗೂ 'ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ' ಕರೆ ಕರ್ನಾಟಕದಲ್ಲಿ ವ್ಯಾಪಕ ಪ್ರತಿಸ್ಪಂದನ ಪಡೆಯಿತು. ಕರ್ನಾಟಕದ ಅನೇಕ ನಗರಗಳಲ್ಲಿ, ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಜನಜೀವನ ಸ್ತಬ್ಧವಾಯಿತು. ಅಂಗಡಿ ಮುಂಗಟ್ಟುಗಳು ಮುಚ್ಚಿದವು.ಬಸ್, ಆಟೋ ಸಂಚಾರ ನಿಂತಿತು. ಶಾಲಾ ಕಾಲೇಜುಗಳು ಈ ಪರಿಸ್ಥಿತಿಯನ್ನು ಊಹಿಸಿಕೊಂಡು ಮುಂಚಿತವಾಗಿಯೇ ರಜಾ ಘೋಷಿಸಿದ್ದವು. ಹೀಗಾಗಿ ಸಾರ್ವತ್ರಿಕ ಮುಷ್ಕರ ಇಡೀ ನಗರ ಅಥವಾ ಪಟ್ಟಣಗಳ ಎಲ್ಲಾ ವಿಭಾಗಗಳ ಜನರ ಪ್ರತಿಭಟನೆಯಾಗಿ ಪರಿವರ್ತಿತವಾಯಿತು. ಕೋಲಾರ, ಗುಲ್ಬರ್ಗ ಜಿಲ್ಲೆ ಇಡೀ ಮಂಗಳೂರು, ಉಡುಪಿ, ಕುಂದಾಪುರ ಮೊದಲಾದ ನಗರಗಳು, ರಾಯಚೂರು ಜಿಲ್ಲೆಯಲ್ಲಿ ರಾಯಚೂರು, ಸಿಂಧನೂರು, ಲಿಂಗಸಗೂರು, ಜೊತೆಗೆ ತುಮಕೂರು, ತಿಪಟೂರು, ಮಳವಳ್ಳಿ ಇತ್ಯಾದಿ ಪಟ್ಟಣಗಳು, ಕೊಪ್ಪಳ ಜಿಲ್ಲೆಯ ಅತ್ಯಂತ ದೊಡ್ಡ ನಗರವಾದ ಗಂಗಾವತಿ ಮತ್ತು ಕುಷ್ಟಗಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಉ.ಕ. ಜಿಲ್ಲೆ ಅನೇಕ ನಗರಗಳು ಪೂರ್ಣ ಸ್ಥಗಿತವಾದರೆ, ಬಿಜಾಪುರ, ಮೈಸೂರು, ಮಂಡ್ಯ, ಬಳ್ಳಾರಿ ನಗರಗಳು ಬಹುತೇಕ ಸಮಯ ಸ್ಥಗಿತವಾಗಿದ್ದವು. 140 ಎಪಿಎಂಸಿಗಳು ಬಂದ್ ಆಗಿದ್ದವು. (ವಿವರಗಳಿಗಾಗಿ ರಾಜ್ಯದ ವಿವಿಧ ವಿಭಾಗಗಳ ವರದಿಗಳನ್ನು ನೋಡಿ). ಬೆಂಗಳೂರು ಸೇರಿದಂತೆ ಕೆಲವು ಮುಖ್ಯ ನಗರಗಳಲ್ಲಿ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿದ್ದರೂ ಸಂಚಾರ, ವ್ಯಾಪಾರಗಳಿಗೆ ವ್ಯತ್ಯಯ ಉಂಟಾಗಲಿಲ್ಲ. ಇದನ್ನು ನಾವೆಲ್ಲರೂ ನಿರೀಕ್ಷಿಸಿದ್ದರೂ ಕೂಡಾ ನಾವೂ ಕೂಡಾ ಬೆಂಗಳೂರನ್ನು ಕರ್ನಾಟಕ ಎಂದು ತಿಳಿದುಕೊಳ್ಳುವುದು ಸರಿಯಲ್ಲ ಎಂದೇ ಈ ಕರೆ ನೀಡಿದೆವು. ಆದರೆ ಬೆಂಗಳೂರು ನಗರ ಬಿಂಬಿಸುವ ಬಹುತೇಕ ದಿನಪತ್ರಿಕೆಗಳು ರಾಜ್ಯದ ವಿವಿಧ ಭಾಗಗಳಲ್ಲಿನ ಈ ಪರಿಸ್ಥಿತಿಯ ವರದಿಗಳನ್ನು ನೀಡಲಿಲ್ಲ. ವಾರ ಪತ್ರಿಕೆಗಳಂತೂ ಸಾರ್ವತ್ರಿಕ ಮುಷ್ಕರ, ಮೊದಲಾದ ಕರೆಗಳು ಇವೆ ಎಂಬುದನ್ನೇ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ದೃಶ್ಯಮಾಧ್ಯಮದಲ್ಲಿ ಒಂದು ವಾಹಿನಿ ಹಾಗೂ ಒಂದುದಿನಪತ್ರಿಕೆ ರಾಜ್ಯದ ಕೆಲವು ಭಾಗಗಳ ವಾಸ್ತವ ವರದಿಯನ್ನಾದರೂ ನೀಡಿ ಪತ್ರಿಕಾಧರ್ಮದ ಮರ್ಯಾದೆಯನ್ನು ಸ್ವಲ್ಪಉಳಿಸಿವೆ.

(ಇದು ಸೇ. 29 ರ ಕರೆಗೆ ಸಂಬಂಧಿಸಿ ಪತ್ರಿಕೆಗಳ ಧೋರಣೆಯ ಪೂರ್ಣವಿಮರ್ಶೆಯಲ್ಲ. ಕೇವಲ ಸೆ. 29 ರ ನಂತರದ ವರದಿಗಳು ಸೇ. 29 ರ ಯಶಸ್ಸಿಗೆ ಮಾಡಿದ ಅನ್ಯಾಯದ ಬಗೆಗಿನ ಅಭಿಪ್ರಾಯ ಮಾತ್ರ)

ರಾಜ್ಯದ ಪತ್ರಿಕೆ-ಮಾಧ್ಯಮಗಳ ವರದಿಗಳು ಈ ಅನ್ಯಾಯವನ್ನು ಎಸಗಿದರೂ ಆಯಾ ಭಾಗದ ಜನತೆಗೆ, ಅಲ್ಲಿ ಜನಜೀವನ ಪೂರ್ಣ ಸ್ಥಗಿತವಾದ ಬಗ್ಗೆ, ಅಲ್ಲಿ ದುಡಿಯುವ ಜನತೆ ಮತ್ತು ಇತರ ಜನವಿಭಾಗಗಳು ನೀಡಿದ ಸ್ವಯಂಪ್ರೇರಿತ ಬೆಂಬಲದ ಬಗ್ಗೆ, ತಮ್ಮ ಸ್ವಂತ ಅನುಭವದಿಂದಲೇ ತಿಳಿದಿದೆ.

ಕರ್ನಾಟಕದ ಜನತೆಯ ಈ ಅಪೂರ್ವ ಭಾಗವಹಿಸುವಿಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಗೆ ಜನ ತಿರಸ್ಕರಿಸಿದ ಆರ್ಥಿಕ ನೀತಿಗಳ ಮುಂದುವರಿಕೆಯನ್ನು ತ್ಯಜಿಸುವಂತೆ ನೀಡಿದ ಎಚ್ಚರಿಕೆಯಾಗಿದೆ. ಅದರಲ್ಲಿಯೂ ಕಾರ್ಮಿಕವರ್ಗದ ಸಾರ್ವತ್ರಿಕ ಮುಷ್ಕರದ ಅಭೂತಪೂರ್ವ ಯಶಸ್ಸು ಬಂಡವಾಳಶಾಹಿ ವರ್ಗವನ್ನು ಆತಂಕಕ್ಕೆ ಈಡು ಮಾಡಿದೆ. ಬಂಡವಾಳಶಾಹಿ ಸಂಘಟನೆಗಳು ಈ ಮುಷ್ಕರಕ್ಕೆ ನೀಡಿದ ಪ್ರತಿಕ್ರಿಯೆಗಳಿಂದ ಇದು ಸ್ಪಷ್ಟವಾಗುತ್ತದೆ.

ಕರ್ನಾಟಕದ ಜನತೆ ನೀಡಿದ ವ್ಯಾಪಕ ಬೆಂಬಲದ ಹಿನ್ನೆಲೆಯೇನು ಮತ್ತು ಅದರಿಂದ ಕಲಿಯಬೇಕಾದ ಪಾಠಗಳೇನು ಎಂಬುದು ನಮಗೆ ಪ್ರಮುಖ ವಿಷಯ.

ಕೋಮುವಾದಿ ಪಕ್ಷದ ನೇತೃತ್ವದ ಕೂಟವನ್ನು ಜನತೆ ಆಡಳಿತದಿಂದ ಕಿತ್ತುಹಾಕಿದ ನಂತರ ದೇಶದ ವಾತಾವರಣದಲ್ಲಿ ಒಂದು ದೊಡ್ಡ ಮಾರ್ಪಾಡಾಗಿದೆ. ಹಿಂದೆ ದೇಶದ ಜನತೆ ತಮ್ಮ ಬದುಕಿನ ಅನೇಕ ಸಂಕಟಗಳಲ್ಲಿ ಬಸವಳಿದಿದ್ದರೂ ಅದನ್ನು ದೇಶದ ಪ್ರಮುಖ ಅಜೆಂಡಾ (ಚರ್ಚೆಯ ವಿಷಯವಾಗಿ) ಆಗಲಿಲ್ಲ, ಏಕೆಂದರೆ ಜನತೆ ಬಿಜೆಪಿ ಕೂಟ ಅಧಿಕಾರಕ್ಕೆ ಬಂದ ದಿನದಿಂದ ರೆಕ್ಕೆ ಪುಕ್ಕ ಸಿಕ್ಕಂತೆ ದೇಶದ ವಿವಿಧ ಭಾಗಗಳಲ್ಲಿ ಸಂಘ ಪರಿವಾರ ಅಲ್ಪಸಂಖ್ಯಾತರ ಮೇಲೆ ನಡೆಸಿದ ಧಾಳಿಗಳು, ದಾಂಧಲೆಗಳು - ಕ್ರೈಸ್ತ ಸನ್ಯಾಸಿನಿಯರ ಮೇಲಿನ ಅತ್ಯಾಚಾರ, ಗಿರಿಜನ ಪ್ರದೇಶಗಳಲ್ಲಿ ಮತಾಂತರ ಹೆಸರಿನಲ್ಲಿ ನಡೆಸಿದಧಾಳಿಗಳು, ಕುಷ್ಠರೋಗ ತಜ್ಞ ಸ್ಟೈನ್ಸ್ ನ ಬರ್ಬರ ಹತ್ಯೆ, ಅಯೋಧ್ಯೆ ರಾಮದೇವಾಲಯದ ಪ್ರಶ್ನೆಯನ್ನು ಮತ್ತೆ ಮತ್ತೆ ಎತ್ತಿದ್ದು, ದೇಶಾದ್ಯಂತ ಅನೇಕ ದರ್ಗಾ, ಮಸೀದಿಗಳ ಮೇಲೆ ದಾಳಿ, ಗೋಧ್ರಾ ಹತ್ಯಾಕಾಂಡ ಮತ್ತು ಗುಜರಾತ್ ಮಾರಣಹೋಮ, ಇತ್ಯಾದಿ ಇತ್ಯಾದಿ ಇಡೀ ದೇಶದಲ್ಲಿ ಇವುಗಳ ಬಗೆಗಿನ ಚರ್ಚೆಯೋ ಚರ್ಚೆ. ಅಲ್ಪಸಂಖ್ಯಾತರು ಜಾತ್ಯತೀತ ಮನೋಭಾವದ ಎಲ್ಲ ಜನತೆಯ ಆತಂಕ ಮುಗಿಲಿಗೇರಿದ ಸ್ಥಿತಿ. ದುಡಿಯುವ ಜನ ತಮ್ಮ ಜೀವ ಮತ್ತು ಜೀವನದ ಮೇಲಿನ ಧಾಳಿ ಇವುಗಳಿಂದ ರಕ್ಷಿಸಿಕೊಳ್ಳುವುದೇ ಮೊದಲ ಹಾಗೂ ಪ್ರಮುಖ ಕರ್ತವ್ಯವಾಗಿತ್ತು ಹಾಗೂ ಇಡೀ ದೇಶದ ಪ್ರಮುಖ ಕಾಳಜಿಯಾಗಿ ಪರಿಣಮಿಸಿತ್ತು. ಇದಕ್ಕೆ ದೇಶದ ಜನರೇ ಚುನಾವಣೆಗಳ ಮೂಲಕ ಕೊಟ್ಟ ದೊಡ್ಡ ಹೊಡೆತ. ಇಂದು ಆಳುವವರ್ಗ ಕೋಮುವಾದವನ್ನುಪಯೋಗಿಸಿಕೊಂಡು ಜನರ ಸಮಸ್ಯೆಗಳನ್ನು ಆಳಕ್ಕೆ ಹೂತುಹಾಕುವ ಅವಕಾಶವನ್ನು ತಪ್ಪಿಸಿದೆ.

ಎಡಪಕ್ಷಗಳ ಪಾತ್ರ

ಅದೇ ಸಮಯದಲ್ಲಿ ದೇಶದ ಜನತೆ ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳಿಗೆ ಕೊಟ್ಟ ಮತಗಳು ಹಾಗೂ ಸ್ವಾತಂತ್ರ್ಯನಂತರದಲ್ಲಿಯೇ ಅತಿಹೆಚ್ಚು ಸ್ಥಾನಗಳನ್ನು ಮತ್ತು ಅವುಗಳ ಬೆಂಬಲದ ಮೇಲೆ ಸರ್ಕಾರ ನಡೆಯಬೇಕಾದ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಜನರ ಸಮಸ್ಯೆಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಸರ್ಕಾರದ ನೀತಿಗಳನ್ನು, ದೇಶದ ಪ್ರಮುಖ ಅಜೆಂಡಾ ಆಗಿಸುವಲ್ಲಿ ಯಶಸ್ವಿಯಾಗಿವೆ. ಇಂದು 15 ವರ್ಷಗಳ ಜಾಗತೀಕರಣ ಪರಿಣಾಮವಾದ ಪ್ರತಿಯೊಂದು ಸಮಸ್ಯೆಯೂ, ಅದಕ್ಕೆ ಪರಿಹಾರದ ಕ್ರಮಗಳು, ಜನರಿಗೆ ಪ್ರತಿಕೂಲವಾದ ಪ್ರತಿಯೊಂದು ನೀತಿ, ಕ್ರಮಗಳೂ ದೇಶದಾದ್ಯಂತ ಜನರ ಗಮನಕ್ಕೆ ಬರುತ್ತಿದೆ. ಚರ್ಚೆಗಳಿಗೆ ಒಳಗಾಗುತ್ತಿದೆ. ಇದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದಾದರೂ, ಪೆಟ್ರೋಲ್, ಡೀಸೆಲ್‌ಗಳ ಮೇಲೆ ಹಾಕಿದ ಎರಡು ಪಟ್ಟು ಮೂರು ಪಟ್ಟು ತೆರಿಗೆಯ ಹೊರೆ ಅನೇಕ ದಶಕಗಳಿಂದಲೇ ಜಾರಿಯಲ್ಲಿದ್ದರೂ ಈಗ ಜನತೆಯ ಗಮನಕ್ಕೆ ವ್ಯಾಪಕವಾಗಿ ಬಂದಿದೆ.

ದೇಶದ ವಾತಾವರಣದಲ್ಲಿ ಆದ ಇಂತಹ ಅಗಾಧ ಬದಲಾವಣೆ ಜನತೆ ತಮ್ಮ ಸಮಸ್ಯೆಗಳತ್ತ

ಪುಟ 9 ಕ್ಕೆ







ಕರ್ನಾಟಕ: ಶೈಕ್ಷಣಿಕ ಸಮಸ್ಯೆಗಳ ಆಗರ!

ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದಿದ್ದರೂ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ ಶುಲ್ಕಗಳು ಗಗನಕ್ಕೆ ಏರಿಕೆ.... ರೊಚ್ಚಿಗೆದ್ದ ವಿದ್ಯಾರ್ಥಿ ಸಮುದಾಯ ಎಸ್‌ಎಫ್‌ಐ ನೇತೃತ್ವದಲ್ಲಿ ದಣಿವರಿಯದ ಬೃಹತ್ ಹೋರಾಟ.... ಕೊನೆಗೂ ಹೋರಾಟಕ್ಕೆ ಮಣಿದ ಸರ್ಕಾರ. ಸ್ವತಃ ಮುಖ್ಯಮಂತ್ರಿಗಳಿಂದಲೇ ಎಸ್‌ಎಫ್‌ಐ ನಿಯೋಗದೊಂದಿಗೆ ಮಾತುಕತೆಗೆ ಆಹ್ವಾನ!... ಈ ಬಗ್ಗೆ ಓದಿ

ದಿನಾಂಕ 22.9.05ರಂದು ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಗಂಭೀರ ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸಲು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ರಾಜ್ಯ ಮುಖಂಡರೊಂದಿಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭೆ ನಡೆಸಿದರು.


ಸಭೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲಾ- ಕಾಲೇಜುಗಳಿಗೆ ಅಗತ್ಯ ಗ್ರಂಥಾಲಯ, ಉಪನ್ಯಾಸಕರು, ಪ್ರಯೋಗಾಲಯ ಕ್ರೀಡಾಸಾಮಗ್ರಿ ಶೌಚಾಲಯ ಮುಂತಾದ ಮೂಲಭೂತ ಸೌಲಭ್ಯ ಒದಗಿಸಬೇಕು. ಜೆ.ಓ.ಸಿ ಕೋರ್ಸು ರದ್ದುಪಡಿಸಬಾರದು. 10-20 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರನ್ನು ಖಾಯಂ ಮಾಡಬೇಕು, ಜಿಲ್ಲೆಯ ವಾಸ್ತವ ಪರಿಸ್ಥಿತಿ ಆಧಾರದಲ್ಲಿ ಕೋರ್ಸು ಆರಂಭಿಸಿ, ಸ್ವಯಂ ಹಣಕಾಸು ಕೋರ್ಸು ಆರಂಭಿಸುವ ಪ್ರಸ್ತಾಪ ರದ್ದುಪಡಿಸಿ, ರಾಜ್ಯದಲ್ಲಿ ಹಾವೇರಿ ಸೇರಿದಂತೆ ಅಗತ್ಯವಿರುವ ಕಡೆಗಳಲ್ಲಿ ಸರ್ಕಾರಿ ಪದವಿ ಮತ್ತು ಪದವಿ ಪೂರ್ವ ಕಾಲೇಜು ಆರಂಭಿಸಿ, ಬಸ್ ಪಾಸ್ ದರ ಏರಿಕೆ ಕೈಬಿಡಿ, ಪಾಸ್ ವ್ಯಾಪ್ತಿ 40ರಿಂದ 80ಕಿ.ಮೀ ಗೆ ಏರಿಸಿ, ಪಾಸ್ ವಿತರಿಸಲು 25 ವರ್ಷ ವಯೋಮಿತಿ ನಿರ್ಬಂಧ ರದ್ದುಮಾಡಿ, ವಿವಿಗಳಲ್ಲಿ ಭ್ರಷ್ಟತೆ ತಡೆಗಟ್ಟಿ, ಪಾರದರ್ಶಕ ಪರೀಕ್ಷೆ ನಡೆಸಲು ಅಗತ್ಯ ಸೌಲಭ್ಯವೊದಗಿಸಿ, ವಿವಿಗಳಲ್ಲಿ - ಶಿಕ್ಷಣ ಶೈಕ್ಷಣಿಕ ತಜ್ಞರಿಗೆ ಪ್ರಾತಿನಿಧ್ಯ ನೀಡಿ ಹಾಗೂ ಸ್ನಾತಕೋತ್ತರ ಪಿ.ಜಿ ಕೇಂದ್ರಗಳಿಗೆ ಅಗತ್ಯ ಸೌಲಭ್ಯ ನೀಡಿ ಎಸ್.ಸಿ/ಎಸ್.ಟಿ ಮತ್ತು ಬಿ.ಸಿ.ಎಂ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ (ಶಿಷ್ಯವೇತನ) ಬಿಡುಗಡೆಗೊಳಿಸಿ, ರಾಜ್ಯಾದ್ಯಂತ ತಡೆಹಿಡಿದಿರುವ ಶುಲ್ಕ ವಿನಾಯತಿ ಹಣ ಮತ್ತು ಶಿಷ್ಯವೇತನ ವಿದ್ಯಾರ್ಥಿಗಳಿಗೆ ಕೊಡಿ, ಎಸ್.ಸಿ/ಎಸ್.ಟಿ., ಬಿ.ಸಿ.ಎಂ ಹಾಸ್ಟೆಲ್‌ಗೆ ಅಗತ್ಯ ಸೌಲಭ್ಯ ನೀಡಿ ಹಾಸ್ಟೆಲ್ ಪ್ರವೇಶ ಸಾಮರ್ಥ್ಯ(ಅರ್ಜಿಗಳಿಗೆ ತಕ್ಕಂತೆ)ಹೆಚ್ಚಿಸಿ ಅಗತ್ಯವಿರುವ ಕಡೆ ಹಾಸ್ಟೆಲ್ ಕೊಡಿ ಹಾಗೂ ಬೆಲೆ ಏರಿಕೆಗೆ ಅನುಗುಣವಾಗಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮಾಸಿಕ ಆಹಾರ ವೆಚ್ಚ ಹೆಚ್ಚಿಸಿ, ಏರಿಸಿರುವ ಎಲ್ಲಾ ಹಂತದ ಶುಲ್ಕ ವಾಪಸ್ ಕೊಡಿ, ಬಿ.ಕಾಂ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಹೆಸರಲ್ಲಿ ಶುಲ್ಕ 2000 ರೂ ವಸೂಲಿ ನಿಲ್ಲಿಸಿ ಮತ್ತು ವಾಪಸ್ ಕೊಡಿ, ಪ್ರತಿವರ್ಷ ಶೇ.10 ಪದವಿ ಶುಲ್ಕ ಏರಿಕೆ ನೀತಿ ಕೈಬಿಡಿ, ರಾಜ್ಯದಲ್ಲಿ ಖಾಲಿ ಇರುವ ಶಿಕ್ಷಕ- ಉಪನ್ಯಾಸಕ ಹುದ್ದೆ ಭರ್ತಿ ಮಾಡಿ, ಡೊನೇಷನ್ ಹಾವಳಿತಡೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಡೊನೇಷನ್ ವಿರೋಧಿ ಸಮಿತಿ ರಚನೆ ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಮೂಲಭೂತ ಸೌಲಭ್ಯ.... ಎಐಸಿಟಿಇ, ಎಂ.ಸಿ.ಐ, ಡಿ.ಸಿ.ಐ. ನಿರ್ದೇಶನ ಉಲ್ಲಂಘಿಸಿದ ಖಾಸಗಿ ತಾಂತ್ರಿಕ, ವೈದ್ಯಕೀಯ ಕಾಲೇಜು ಮಾನ್ಯತೆ ರದ್ದುಪಡಿಸಿ, ಸುಪ್ರಿಂಕೋರ್ಟ್ ತೀರ್ಪಿನಂತೆ ಶಾಲಾ ಕಾಲೇಜು-ವಿವಿಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿ ರಚಿಸಿ ವಿದ್ಯಾರ್ಥಿನಿಯವರಿಗೆ ಪಿಡಬ್ಲ್ಯು, ಉಚಿತ ಶಿಕ್ಷಣ ನೀಡಿ, ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ರಾಜ್ಯ ಬಜೆಟನಲ್ಲಿ ಶೇ.30 ಮತ್ತು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಶೇ 10 ಮೀಸಲಿಡುವಂತೆ ಮುಂತಾದ ಬೇಡಿಕೆಗಳನ್ನು ಎಸ್‌ಎಫ್‌ಐ ನಿಯೋಗ ಘನ ಸರ್ಕಾರದ ಮುಂದೆ ಇಟ್ಟಿತ್ತು.

ಮುಖ್ಯಮಂತ್ರಿ ಭರವಸೆ

ಬೇಡಿಕೆಗಳನ್ನು 1 ಗಂಟೆಗಳ ಕಾಲ ಆಲಿಸಿದ ಮುಖ್ಯಮಂತ್ರಿ ಎನ್.ಧರ್ಮಸಿಂಗ್ ಮಾತನಾಡಿ, ಪ್ರಜಾಪ್ರಭುತ್ವ ಮೌಲ್ಯ ರಕ್ಷಣೆಯಲ್ಲಿ ಎಸ್‌ಎಫ್‌ಐ ಹಿಂದಿನಿಂದ ಪ್ರಮುಖ ಪಾತ್ರ ವಹಿಸುತ್ತಿದೆ ಹಾಗೂ ಈ ವ್ಯವಸ್ಥೆಯಲ್ಲಿ ನಮಗೆ ಶೈಕ್ಷಣಿಕ ಸಮಸ್ಯೆ ಗಮನಕ್ಕೆ ತಂದಿದ್ದೀರಿ ಎಂದರಲ್ಲದೆ ಸಂಬಂಧಪಟ್ಟ ಸಚಿವರಿಗೆ, ಅಧಿಕಾರಿಗಳಿಗೆ ತಕ್ಷಣ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಅಲ್ಲದೆ ತತ್‌ಕ್ಷಣ ಎಲ್ಲಾ ಉನ್ನತ ಅಧಿಕಾರಿಗಳ ಸಭೆ ನಡೆಸುತ್ತೇನೆ ಅಲ್ಲದೆ ಬಸ್‌ಪಾಸ್ ದರ ಏರಿಕೆ ಮಾಡುವುದಿಲ್ಲ. 40ರಿಂದ 80 ಕಿ.ಮೀ ವ್ಯಾಪ್ತಿಗೆ ವಿಸ್ತರಿಸಲು, 25 ವರ್ಷ ವಯೋಮಿತಿ ನಿರ್ಬಂಧ ತೆಗೆಯಲು, ಹಾವೇರಿ ಸೇರಿದಂತೆ ಅಗತ್ಯ-ಜಿಲ್ಲೆಗಳಲ್ಲಿ ಪದವಿ ಕಾಲೇಜು ತೆರೆಯಲು ಹಾಗೂ 221 ಸರ್ಕಾರಿ ಹಿರಿಯ ಕಾಲೇಜು ತೆರೆಯಲು, ಬಿಕಾಂ ವಿದ್ಯಾರ್ಥಿಗಳ ಕಂಪ್ಯೂಟರ್ ಶುಲ್ಕ 2000ರಿಂದ 1000 ರೂಗಳಿಗೆ ಇಳಿಸಲು ವಸೂಲಿ ಮಾಡಿದ ಹಣ ವಾಪಸ್ ಕೊಡಿಸಲು, ತಡೆಹಿಡಿದಿರುವ ಲಕ್ಷಾಂತರ ಶುಲ್ಕ ವಿನಾಯತಿ ಮತ್ತು ಶಿಷ್ಯವೇತನ ಬಿಡುಗಡೆಗೆ ಕ್ರಮಕೈಗೊಳ್ಳಲು, ಶಿಕ್ಷಕ ಉಪನ್ಯಾಸಕರ ಹುದ್ದೆ ಭರ್ತಿ ಮಾಡಲು, ಸೌಲಭ್ಯವಿಲ್ಲದ, ಖಾಸಗಿ ತಾಂತ್ರಿಕ ವೈದ್ಯಕೀಯ ಕಾಲೇಜು ರದ್ದುಪಡಿಸಲು, ಹಾಸ್ಟೆಲ್‌ಗಳಿಗೆ ಅಗತ್ಯ ಸೌಲಭ್ಯ ಒದಗಿಸಲು ಮತ್ತು ಪ್ರವೇಶ ಹೆಚ್ಚಿಸಲು ಹಾಗೂ ಜೆ.ಓ.ಸಿ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿಗಳು ಒಪ್ಪಿಗೆ ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಕ್ರಮ ಜರುಗಿಸುವಂತೆ ಆದೇಶಿಸಿದರು.

"ಮುಖ್ಯಮಂತ್ರಿ ಕ್ಷೇತ್ರದಲ್ಲೂ ಶಾಲೆಗೆ ಬೋರ್ಡ್ ಎಲ್ಲ"

ಶಾಲಾ ಕಾಲೇಜುಗಳಿಗೆ ಅಗತ್ಯ ಸೌಲಭ್ಯಕ್ಕೆ ಎಸ್‌ಎಫ್‌ಐ ಮುಖಂಡರೂ ಒತ್ತಾಯಿಸಿದಾಗ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಧರ್ಮಸಿಂಗ್- ನನ್ನ 25 ವರ್ಷದ ರಾಜಕೀಯದಲ್ಲಿ ನನ್ನ ಕ್ಷೇತ್ರಕ್ಕೆ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲಾಗಿಲ್ಲ. ಸಮಸ್ಯೆಗಳು ಇದ್ದೇ ಇವೆ ಎಂದಾಗ ಹಲವಾರು ಸಾರಿ ಅವರ ಕ್ಷೇತ್ರದಲ್ಲಿ ಶಾಲೆಗಳಿಗೆ ಬೋರ್ಡ್- ಕೊಠಡಿ, ಶಿಕ್ಷಕರು ಇಲ್ಲದೆ ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ಮಾಡಿದ ನೆನಪು ಎಲ್ಲರನ್ನು ಕಾಡಿತು. ರಾಜ್ಯದ ಶೈಕ್ಷಣಿಕ ಸಮಸ್ಯೆಯನ್ನು ವೈಜ್ಞಾನಿಕವಾಗಿ ತೆರದಿಟ್ಟ ಎಸ್.ಎಫ್.ಐ ನಿಯೋಗವನ್ನು ವೀಕ್ಷಿಸುತ್ತಿದ್ದ



ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತಿರುವ ಎಸ್‌ಎಫ್‌ಐ ನಿಯೋಗ

ವಿಭಾಗ ಅಭಿನಂದಿಸಿತು ಮಾತ್ರವಲ್ಲ, ಮಾತುಕತೆಗೆ ಹೋಗುವ ಮುನ್ನವೇ ಎಲ್ಲ ಪೊಲೀಸ್, ಐಎಎಸ್ ಅಧಿಕಾರಿಗಳು ವಿಶೇಷವಾಗಿ ಸ್ವಾಗತಿಸಿದರು.

ಚರ್ಚೆಯಲ್ಲಿ ಮುಖ್ಯಮಂತ್ರಿ ಎನ್.ಧರಂಸಿಂಗ್ ಶಿಕ್ಷಣ ಸಚಿವ ರಾಮಲಿಂಗರೆಡ್ಡಿ, ಕಾರ್ಮಿಕ ಸಚಿವ ತನ್ವೀರ್‌ಸೇಠ್, ಸಮಾಜ ಕಲ್ಯಾಣ ಇಲಾಖೆಯ ಸಚಿವ ವೈ.ನಾಗಪ್ಪ, ಮಾಜಿ ಸಚಿವ ಬಿ.ಕೆ.ಚಂದ್ರಶೇಖರ್ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶೋಭಾನಂಬೀಶನ್, ವೈದ್ಯಕೀಯ ಶಿಕ್ಷಣ ಕಾರ್ಯದರ್ಶಿ, ಡಾ.ಡಿ.ವಿ. ಪ್ರಸಾದ್ ಮುಂತಾದವರು ಹಾಜರಿದ್ದರು.

ಎಸ್‌ಎಫ್‌ಐ ನ ಈ ನಿಯೋಗದಲ್ಲಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಬಿ.ರಾಜಶೇಖರ ಮೂರ್ತಿ, ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್, ರಾಜ್ಯ ಉಪಾಧ್ಯಕ್ಷ ವಿಜಯಕುಮಾರ್ ದೊಡ್ಡಮನಿ, ವಿವಿಧ ಜಿಲ್ಲೆಗಳ ಪರವಾಗಿ ನಾರಾಯಣ ಕಾಳೆ, ಅರುಣ್‌ಕುಮಾರ್, ರಮೇಶ್, ಪ್ರಸಾದ್, ವಿಕ್ರಮ್ ವಿನ್ಸೆಂಟ್, ಕೆ.ಬಿ.ಮಂಜುನಾಥ್, ಚಂದ್ರೂ ಅಕ್ಕಿವಳ್ಳಿ, ಆನಂದ್ ಭಾಗಿಯಾಗಿದ್ದರು.

ಹೋರಾಟದ ಪ್ರತಿಫಲ

ಎಸ್‌ಎಫ್‌ಐ ನೇತೃತ್ವದಲ್ಲಿ ಸ್ಥಳೀಯವಾಗಿ ಜೂನ್, ಜುಲೈ ತಿಂಗಳ ಹೋರಾಟ ಆಗಸ್ಟ್ 25ರಂದು ಶಾಲಾ, ಕಾಲೇಜು ಬಂದ್ ಭಾಗವಾಗಿ ಹತ್ತಾರು ಲಕ್ಷ ವಿದ್ಯಾರ್ಥಿಗಳ ತರಗತಿ ಬಹಿಷ್ಕಾರ ರಾಜ್ಯ ವ್ಯಾಪ್ತಿ ಶಾಲಾ ಕಾಲೇಜು ಬಂದ್ ಯಶಸ್ವಿ ನಂತರ ಸೆಪ್ಟೆಂಬರ್ 14ರಂದು 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ರಾಜ್ಯಮಟ್ಟದ ರ್‍ಯಾಲಿ ನಡೆಸಿದ ಪ್ರತಿಫಲವೇ ಈ ಸಭೆ ಕರೆಯಲು ಕಾರಣವಾಯಿತು.

■ ವಿಜಯಕುಮಾರ್ ದೊಡ್ಡಮನಿ

ಮಾತಿನ ಬಾಣಕ್ಕೆ ಬಾಯ್ ಮುಚ್ಚಿದ ರಾಮಲಿಂಗಾರೆಡ್ಡಿ

ರಾಜ್ಯದ ವಿದ್ಯಾರ್ಥಿಗಳನ್ನು ಪ್ರತಿನಿಧಿಸಿದ ಎಸ್‌ಎಫ್‌ಐನ ಮುಖಂಡರು ಮತ್ತು ಕರ್ನಾಟಕ ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣ ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಉಳಿದ ಅಧಿಕಾರಿಗಳ ನಡುವೆ ಮಾತಿನ ಬಾಣಗಳು ಬಿರುಸಿನಿಂದ ಪ್ರಯೋಗವಾದವು. ಇಲ್ಲಿ ನಡೆದದ್ದು ಯುದ್ಧವಲ್ಲವಾದರೂ ಇದೊಂದು ರೀತಿಯ ಯುದ್ಧವೇ. ಇಲ್ಲಿ ಪ್ರಯೋಗವಾಗಿದ್ದು ಆಯುಧಗಳಲ್ಲ, ಬದಲಾಗಿ ಶಿಕ್ಷಣ ಸಮಸ್ಯೆಗಳ ವಿರುದ್ಧ ಇದ್ದ ಆಕ್ರೋಶಗಳು. ಎಸ್.ಎಫ್.ಐ ಮುಖಂಡರು ಶಿಕ್ಷಣದ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಡಿಸಿಡಲು ಪ್ರಾರಂಭಿಸಿದರು ತಕ್ಷಣ ಶಿಕ್ಷಣ ಸಚಿವರಾದ ರಾಮಲಿಂಗರೆಡ್ಡಿಯವರು ಮಧ್ಯಪ್ರವೇಶ ಮಾಡಿ "ಪಶ್ಚಿಮ ಬಂಗಾಳದಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿದೇರಿ" ಎಂದರು. ತಕ್ಷಣ ಅದರ ಬಗ್ಗೆ ಹೆಚ್ಚು ಗಮನ ಹರಿಸದೆ ಶಿಕ್ಷಣದ ಸಮಸ್ಯೆ ಬಗ್ಗೆ ಎಸ್‌ಎಫ್‌ಐ ಮುಖಂಡರು ಗಮನಹರಿಸಿದರು. ಆದರೂ ಸಚಿವರು ಪದೇ ಪದೇ ಪಶ್ಚಿಮ ಬಂಗಾಳಕ್ಕೆ ಹೋಗುತ್ತಿದ್ದರು. 3 ಬಾರಿ ಈ ವಿಚಾರವನ್ನು ಪ್ರಸ್ತಾಪಿಸಿದ ಮೇಲೆ ಸುಮ್ಮನಿರದ ಎಸ್‌ಎಫ್‌ಐ ಮುಖಂಡರು "ಸ್ವಾಮಿ ನಾವು ಕರ್ನಾಟಕದ ವಿದ್ಯಾರ್ಥಿಗಳನ್ನು ಪ್ರತಿನಿಧಿಸಿ ರಾಜ್ಯದಲ್ಲಿನ ಶಿಕ್ಷಣದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲು ಬಂದಿದ್ದೇವೆ. ಪಶ್ಚಿಮ ಬಂಗಾಳದ ಬಗ್ಗೆ ಚರ್ಚೆ ನಡೆಸಲು ಅಲ್ಲ, ಹಾಗೇನಾದರೂ ಪಶ್ಚಿಮ ಬಂಗಾಳದ ಬಗ್ಗೆ ಚರ್ಚೆ ನಡೆಸುವುದಾದರೆ ಬೇರೆಡೆ ಅದನ್ನು ಚರ್ಚಿಸೋಣ" ಎಂದರು. ಈ ಮಾತನ್ನು ಕೇಳಿದ ರಾಮಲಿಂಗರೆಡ್ಡಿಯವರು ತುಟಿಕ್ ಪಿಟಿಕ್ ಎನ್ನದೆ ಬಾಯ್ ಮುಚ್ಚಿಕೊಂಡು ತಲೆಬಗ್ಗಿಸಿ ಕುಳಿತರು. ಇದು ಇಷ್ಟಕ್ಕೇ ನಿಲ್ಲಲಿಲ್ಲ ಮುಂದುವರಿದು ರಾಜ್ಯದಲ್ಲಿ ಅತ್ಯಂತ ಅಸಮರ್ಪಕವಾಗಿ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿದ್ದೀರಿ ಇದರಿಂದ ಸಾಕಷ್ಟು ದೋಷಗಳುಂಟಾಗುತ್ತಿವೆ. (ಅಂಕಪಟ್ಟಿ, ಪರೀಕ್ಷೆ ಇತ್ಯಾದಿ) ಇದನ್ನು ಸರಿಪಡಿಸಬೇಕು ಎಂದು ವಿದ್ಯಾರ್ಥಿ ಮುಖಂಡರು ಮಾತನಾಡಿದರೆ, ತಕ್ಷಣ ರಾಮಲಿಂಗಾರೆಡ್ಡಿಯವರು 'ನಾವು ಯಾವುದನ್ನೇ ಮಾಡಿದರೂ ಶಿಕ್ಷಣ ತಜ್ಞರಿಂದಲೇ ಮಾಡಿಸುವುದು' ಎಂದರು. ಇದಕ್ಕೆ ಪ್ರತ್ಯುತ್ತರವಾಗಿ 'ಹೌದು ಸ್ವಾಮಿ ಬೆಂಗಳೂರು ವಿ.ವಿಯ ಸಿಂಡಿಕೇಟ್‌ಗೆ ಕಳೆದ ಬಾರಿ ನೀವು ಎಂತಹ ಶಿಕ್ಷಣ ತಜ್ಞರನ್ನು ನೇಮಕ ಮಾಡಿದ್ದೀರೆಂದು ಇಡೀ ರಾಜ್ಯಕ್ಕೇ ಗೊತ್ತಿದೆ' ಎಂದರು. (ಸಿಂಡಿಕೇಟ್‌ಗೆ ನೇಮಕ ಮಾಡುವಾಗ ಅವರು ಶಿಕ್ಷಣ ತಜ್ಞರಾಗಿರಬೇಕೆಂದು ನಿಯಮಾವಳಿ ಇದ್ದರೂ ಉದ್ದಿಮೆದಾರರನ್ನು ಕಳೆದ ಸಿಂಡಿಕೇಟ್‌ಗೆ ಸರ್ಕಾರದಿಂದ ನಾಮಕರಣ ಮಾಡಿರುವುದನ್ನು ಇಲ್ಲಿ ಗಮನಿಸಬಹುದು)

ಒಟ್ಟಾರೆಯಾಗಿ ಮಾತುಕತೆಯು ಪ್ರಾರಂಭದಿಂದ ಕೊನೆಯವರೆಗೂ ನಿರಂತರವಾಗಿ ಕರ್ನಾಟಕ ರಾಜ್ಯದ ಪರಿಸ್ಥಿತಿಯನ್ನು ಸಮಗ್ರವಾಗಿ ಉದಾಹರಣೆ ಸಮೇತ ವಿವರಿಸಿ ಸರ್ಕಾರದ, ಅಧಿಕಾರಿಗಳ ನಿಜವಾದ ಬಣ್ಣವನ್ನು ಬಯಲು ಮಾಡಲು ನಿಯೋಗ ಯಶಸ್ವಿಯಾಯಿತು.

ಹೆಚ್.ಆರ್.ನವೀನ್ ಕುಮಾರ್

ತಿದ್ದುಪಡಿ

ಪತ್ರಿಕೆಯ ಸಂಚಿಕೆ 37, 38 - 39, 40 ರಲ್ಲಿ ಪುಟ 2 ರಲ್ಲಿ 'ಕೋಮುವಾದದ ಕರಾಳ ಮುಖಗಳು' ಪುಸ್ತಕದಲ್ಲಿನ ಮುಂಬೈ ಗಲಭೆಗಳ ಕುರಿತ ಲೇಖನವನ್ನು ಪ್ರಕಟಿಸಲಾಗಿದೆ. ಕಣ್ತಪ್ಪಿನಿಂದಾಗಿ ಈ ಸಂಬಂಧ ಈ ಕೆಳಗಿನ ಕೆಲವು ಮಾಹಿತಿಗಳು ತಪ್ಪಿಹೋಗಿವೆ.
ಪ್ರಕಾಶಕರು : ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.
ಆಯ್ದು ಲೇಖನದ ಲೇಖಕರು : ಕೆ.ಫಣಿರಾಜ್, ಜೆ.ರಾಜಶೇಖರ್
ಪುಸ್ತಕದ ಬೆಲೆ : 75 ರೂ.
ನವ ಕರ್ನಾಟಕ ಪ್ರಕಾಶನದ ಕೃಪೆಯನ್ನು ಸ್ಮರಿಸಲಾಗಿದೆ.

ಸಾರ್ವತ್ರಿಕ ಮುಷ್ಕರ ಅಪೂರ್ವ ಯಶಸ್ಸು

ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ ಪ್ರತಿಭಟಿಸಿ ಕರೆಗೆ ವ್ಯಾಪಕ ಬೆಂಬಲ
ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆಯ ಗಂಟೆ

ಕರ್ನಾಟಕ ರಾಜ್ಯದಲ್ಲಿ ಸೆಪ್ಟೆಂಬರ್ 29 ರ ಚಳುವಳಿ ಕಂಡ ಅಪೂರ್ವ ಯಶಸ್ಸು ಹಾಗೂ ಅದರ ರಾಜಕೀಯ ಮಹತ್ವ - ಪರಿಣಾಮಗಳ ಕುರಿತು ಬರೆದಿದ್ದಾರೆ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್

ಜಿ.ಎನ್.ನಾಗರಾಜ್

ಕರ್ನಾಟಕದ ಪ್ರಮುಖ ರಾಜಕೀಯ ಪಕ್ಷಗಳು - ಸಮ್ಮಿಶ್ರ ಸರ್ಕಾರದ ಭಾಗಿದಾರರಾದ ಎರಡು ಆಳುವ ಪಕ್ಷಗಳು ಕಾಂಗ್ರೆಸ್ ಮತ್ತು ಜನತಾದಳ ಹಾಗೂ ಪ್ರಮುಖ ವಿರೋಧಪಕ್ಷವಾದ ಬಿಜೆಪಿ ಪಕ್ಷ ಜನತೆ ಯಾರಿಗೆ ಅವರ ಸಮಸ್ಯೆಗಳನ್ನು ಬಗೆಹರಿಸುವ ಹೊಣೆಯನ್ನು ಹೊರಿಸಿದ್ದರೋ , ಅಧಿಕಾರ ದಾಹ, ಅದರ ಫಲವಾದ ವ್ಯಕ್ತಿಪ್ರತಿಷ್ಠೆ, ಗುಂಪುಗಾರಿಕೆ, ಗೊಂದಲಗಳಲ್ಲಿ ಮುಳುಗಿ ತಮ್ಮ ನಡುವಿನ ಜಗಳಗಳೇ ಗುದ್ದಾಟಗಳೇ ಇಡೀ ರಾಜ್ಯದ ಜನರ ಸಮಸ್ಯೆಗಳು ಎನ್ನುವ ಭ್ರಮಾಲೋಕದಲ್ಲಿ ತಾವು ಮುಳುಗಿರುವುದು ಮಾತ್ರವಲ್ಲ, ಜನರನ್ನೂ ಮುಳುಗಿಸಲು ಯತ್ನಿಸುತ್ತಿರುವಾಗ ಸಿಪಿಐ(ಎಂ) ಪಕ್ಷ ಜನತೆಗೆ ಜವಾಬ್ದಾರರಾಗಿ ಜನರ ಧ್ವನಿಗೆ ದನಿಗೂಡಿಸುವ, ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳಿಗೆ ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸುವ ಏಕಮಾತ್ರ ಪಕ್ಷವೆಂಬುದನ್ನು ನಿರೂಪಿಸಿತು.

ಕಾರ್ಮಿಕವರ್ಗದ ತಕ್ಷಣದ ಸಮಸ್ಯೆಗಳು ಮಾತ್ರವಲ್ಲದೆ ದೇಶದ ವಿವಿಧ ವಿಭಾಗಗಳ ಜನತೆಯ ಸಮಸ್ಯೆಗಳೂ ಸೇರಿದಂತೆ 16 ಪ್ರಮುಖ ಹಕ್ಕೊತ್ತಾಯಗಳನ್ನು ದೇಶದ ಮುಂದಿರಿಸಿ ಸೇ. 29 ರಂದು ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ದೇಶದ ಪ್ರಮುಖ ಕ್ರಾಂತಿಕಾರಿ ಹಾಗೂ ಪ್ರಜಾಸತ್ತಾತ್ಮಕ ಕಾರ್ಮಿಕ ಸಂಘಟನೆಗಳು ಸೇರಿದ ಜೆಸಿಟಿಯು ಕರೆ ನೀಡಿತ್ತು. ಅದರ ಜೊತೆ ಜೊತೆಗೇ ಎಡಪಂಥೀಯ ರೈತ-ಕೂಲಿಕಾರ ಸಂಘಟನೆಗಳು 'ಕೃಷಿಯನ್ನು ರಕ್ಷಿಸಿ - ದೇಶವನ್ನು ರಕ್ಷಿಸಿ' ಎಂಬ ಘೋಷಣೆಯ ಮೇಲೆ ಅಂದೇ ರೈಲ್ ರೋಖೋ - ರಸ್ತಾ ರೋಖೋ ಕರೆಯನ್ನು ನೀಡಿದ್ದವು.



ಸಿಪಿಐ(ಎಂ) ರಾಜ್ಯ ಸಮಿತಿ ಹೋರಾಟದ ಕಣಕ್ಕೆ ಧುಮುಕಿದ ಕಾರ್ಮಿಕ - ರೈತ ವರ್ಗಗಳಿಗೆ ಕ್ರಿಯಾಶೀಲ ಬೆಂಬಲ ನೀಡುವ ಜೊತೆಗೆ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಿರುವ ಇತರ ಜನವಿಭಾಗಗಳನ್ನು ಈ ಹೋರಾಟದಲ್ಲಿ ಮೇಳವಿಸಿಕೊಳ್ಳಲು ಹಾಗೂ ಕರ್ನಾಟಕದ ಎಲ್ಲ ಜನ ವಿಭಾಗಗಳೂ ಪ್ರತಿಭಟಿಸುವಂತೆ ಸ್ವಯಂಪ್ರೇರಿತವಾಗಿ ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ, ಪ್ರತಿಭಟಿಸಿ ಎಂದು ಕರೆ ನೀಡಲು ನಿರ್ಧರಿಸಿತು. ಕರ್ನಾಟಕದ ಇತರ ಪ್ರಗತಿಪರ ಸಂಘಟನೆಗಳನ್ನೂ ಸಂಪರ್ಕಿಸಿ ಜಂಟಿ ಕರೆ ನೀಡಲಾಯಿತು.

ಸಾರ್ವತ್ರಿಕ ಮುಷ್ಕರ ಹಾಗೂ 'ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ' ಕರೆ ಕರ್ನಾಟಕದಲ್ಲಿ ವ್ಯಾಪಕ ಪ್ರತಿಸ್ಪಂದನ ಪಡೆಯಿತು. ಕರ್ನಾಟಕದ ಅನೇಕ ನಗರಗಳಲ್ಲಿ, ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಜನಜೀವನ ಸ್ತಬ್ಧವಾಯಿತು. ಅಂಗಡಿ ಮುಂಗಟ್ಟುಗಳು ಮುಚ್ಚಿದವು.ಬಸ್, ಆಟೋ ಸಂಚಾರ ನಿಂತಿತು. ಶಾಲಾ ಕಾಲೇಜುಗಳು ಈ ಪರಿಸ್ಥಿತಿಯನ್ನು ಊಹಿಸಿಕೊಂಡು ಮುಂಚಿತವಾಗಿಯೇ ರಜಾ ಘೋಷಿಸಿದ್ದವು. ಹೀಗಾಗಿ ಸಾರ್ವತ್ರಿಕ ಮುಷ್ಕರ ಇಡೀ ನಗರ ಅಥವಾ ಪಟ್ಟಣಗಳ ಎಲ್ಲಾ ವಿಭಾಗಗಳ ಜನರ ಪ್ರತಿಭಟನೆಯಾಗಿ ಪರಿವರ್ತಿತವಾಯಿತು. ಕೋಲಾರ, ಗುಲ್ಬರ್ಗ ಜಿಲ್ಲೆ ಇಡೀ ಮಂಗಳೂರು, ಉಡುಪಿ, ಕುಂದಾಪುರ ಮೊದಲಾದ ನಗರಗಳು, ರಾಯಚೂರು ಜಿಲ್ಲೆಯಲ್ಲಿ ರಾಯಚೂರು, ಸಿಂಧನೂರು, - ಲಿಂಗಸಗೂರು, ಜೊತೆಗೆ ತುಮಕೂರು, ತಿಪಟೂರು, ಮಳವಳ್ಳಿ ಇತ್ಯಾದಿ ಪಟ್ಟಣಗಳು, ಕೊಪ್ಪಳ ಜಿಲ್ಲೆಯ ಅತ್ಯಂತ ದೊಡ್ಡ ನಗರವಾದ ಗಂಗಾವತಿ ಮತ್ತು ಕುಷ್ಟಗಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಉ.ಕ. ಜಿಲ್ಲೆ ಅನೇಕ ನಗರಗಳು ಪೂರ್ಣ ಸ್ಥಗಿತವಾದರೆ, ಬಿಜಾಪುರ, ಮೈಸೂರು, ಮಂಡ್ಯ, ಬಳ್ಳಾರಿ ನಗರಗಳು ಬಹುತೇಕ ಸಮಯ ಸ್ಥಗಿತವಾಗಿದ್ದವು. 140 ಎಪಿಎಂಸಿಗಳು ಬಂದ್ ಆಗಿದ್ದವು. (ವಿವರಗಳಿಗಾಗಿ ರಾಜ್ಯದ ವಿವಿಧ ವಿಭಾಗಗಳ ವರದಿಗಳನ್ನು ನೋಡಿ). ಬೆಂಗಳೂರು ಸೇರಿದಂತೆ ಕೆಲವು ಮುಖ್ಯ ನಗರಗಳಲ್ಲಿ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿದ್ದರೂ ಸಂಚಾರ, ವ್ಯಾಪಾರಗಳಿಗೆ ವ್ಯತ್ಯಯ ಉಂಟಾಗಲಿಲ್ಲ. ಇದನ್ನು ನಾವೆಲ್ಲರೂ ನಿರೀಕ್ಷಿಸಿದ್ದರೂ ಕೂಡಾ ನಾವೂ ಕೂಡಾ ಬೆಂಗಳೂರನ್ನು ಕರ್ನಾಟಕ ಎಂದು ತಿಳಿದುಕೊಳ್ಳುವುದು ಸರಿಯಲ್ಲ ಎಂದೇ ಈ ಕರೆ ನೀಡಿದೆವು. ಆದರೆ ಬೆಂಗಳೂರು ನಗರ ಬಿಂಬಿಸುವ ಬಹುತೇಕ ದಿನಪತ್ರಿಕೆಗಳು ರಾಜ್ಯದ ವಿವಿಧ ಭಾಗಗಳಲ್ಲಿನ ಈ ಪರಿಸ್ಥಿತಿಯ ವರದಿಗಳನ್ನು ನೀಡಲಿಲ್ಲ. ವಾರ ಪತ್ರಿಕೆಗಳಂತೂ ಸಾರ್ವತ್ರಿಕ ಮುಷ್ಕರ, ಮೊದಲಾದ ಕರೆಗಳು ಇವೆ ಎಂಬುದನ್ನೇ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ದೃಶ್ಯಮಾಧ್ಯಮದಲ್ಲಿ ಒಂದು ವಾಹಿನಿ ಹಾಗೂ ಒಂದುದಿನಪತ್ರಿಕೆ ರಾಜ್ಯದ ಕೆಲವು ಭಾಗಗಳ ವಾಸ್ತವ ವರದಿಯನ್ನಾದರೂ ನೀಡಿ ಪತ್ರಿಕಾಧರ್ಮದ ಮರ್ಯಾದೆಯನ್ನು ಸ್ವಲ್ಪಉಳಿಸಿವೆ.

(ಇದು ಸೇ. 29 ರ ಕರೆಗೆ ಸಂಬಂಧಿಸಿ ಪತ್ರಿಕೆಗಳ ಧೋರಣೆಯ ಪೂರ್ಣವಿಮರ್ಶೆಯಲ್ಲ. ಕೇವಲ ಸೆ. 29 ರ ನಂತರದ ವರದಿಗಳು ಸೇ. 29 ರ ಯಶಸ್ಸಿಗೆ ಮಾಡಿದ ಅನ್ಯಾಯದ ಬಗೆಗಿನ ಅಭಿಪ್ರಾಯ ಮಾತ್ರ)

ರಾಜ್ಯದ ಪತ್ರಿಕೆ-ಮಾಧ್ಯಮಗಳ ವರದಿಗಳು ಈ ಅನ್ಯಾಯವನ್ನು ಎಸಗಿದರೂ ಆಯಾ ಭಾಗದ ಜನತೆಗೆ, ಅಲ್ಲಿ ಜನಜೀವನ ಪೂರ್ಣ ಸ್ಥಗಿತವಾದ ಬಗ್ಗೆ, ಅಲ್ಲಿ ದುಡಿಯುವ ಜನತೆ ಮತ್ತು ಇತರ ಜನವಿಭಾಗಗಳು ನೀಡಿದ ಸ್ವಯಂಪ್ರೇರಿತ ಬೆಂಬಲದ ಬಗ್ಗೆ, ತಮ್ಮ ಸ್ವಂತ ಅನುಭವದಿಂದಲೇ ತಿಳಿದಿದೆ.

ಕರ್ನಾಟಕದ ಜನತೆಯ ಈ ಅಪೂರ್ವ ಭಾಗವಹಿಸುವಿಕೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಗೆ ಜನ ತಿರಸ್ಕರಿಸಿದ ಆರ್ಥಿಕ ನೀತಿಗಳ ಮುಂದುವರಿಕೆಯನ್ನು ತ್ಯಜಿಸುವಂತೆ ನೀಡಿದ ಎಚ್ಚರಿಕೆಯಾಗಿದೆ. ಅದರಲ್ಲಿಯೂ ಕಾರ್ಮಿಕವರ್ಗದ ಸಾರ್ವತ್ರಿಕ ಮುಷ್ಕರದ ಅಭೂತಪೂರ್ವ ಯಶಸ್ಸು ಬಂಡವಾಳಶಾಹಿ ವರ್ಗವನ್ನು ಆತಂಕಕ್ಕೆ ಈಡು ಮಾಡಿದೆ. ಬಂಡವಾಳಶಾಹಿ ಸಂಘಟನೆಗಳು ಈ ಮುಷ್ಕರಕ್ಕೆ ನೀಡಿದ ಪ್ರತಿಕ್ರಿಯೆಗಳಿಂದ ಇದು ಸ್ಪಷ್ಟವಾಗುತ್ತದೆ.

ಕರ್ನಾಟಕದ ಜನತೆ ನೀಡಿದ ವ್ಯಾಪಕ ಬೆಂಬಲದ ಹಿನ್ನೆಲೆಯೇನು ಮತ್ತು ಅದರಿಂದ ಕಲಿಯಬೇಕಾದ ಪಾಠಗಳೇನು ಎಂಬುದು ನಮಗೆ ಪ್ರಮುಖ ವಿಷಯ.

ಕೋಮುವಾದಿ ಪಕ್ಷದ ನೇತೃತ್ವದ ಕೂಟವನ್ನು ಜನತೆ ಆಡಳಿತದಿಂದ ಕಿತ್ತುಹಾಕಿದ ನಂತರ ದೇಶದ ವಾತಾವರಣದಲ್ಲಿ ಒಂದು ದೊಡ್ಡ ಮಾರ್ಪಾಡಾಗಿದೆ. ಹಿಂದೆ ದೇಶದ ಜನತೆ ತಮ್ಮ ಬದುಕಿನ ಅನೇಕ ಸಂಕಟಗಳಲ್ಲಿ ಬಸವಳಿದಿದ್ದರೂ ಅದನ್ನು ದೇಶದ ಪ್ರಮುಖ ಅಜೆಂಡಾ (ಚರ್ಚೆಯ ವಿಷಯವಾಗಿ) ಆಗಲಿಲ್ಲ. ಏಕೆಂದರೆ ಜನತೆ ಬಿಜೆಪಿ ಕೂಟ ಅಧಿಕಾರಕ್ಕೆ ಬಂದ ದಿನದಿಂದ ರೆಕ್ಕೆ ಪುಕ್ಕ ಸಿಕ್ಕಂತೆ ದೇಶದ ವಿವಿಧ ಭಾಗಗಳಲ್ಲಿ ಸಂಘ ಪರಿವಾರ ಅಲ್ಪಸಂಖ್ಯಾತರ ಮೇಲೆ ನಡೆಸಿದ ಧಾಳಿಗಳು, ದಾಂಧಲೆಗಳು - ಕ್ರೈಸ್ತ ಸನ್ಯಾಸಿನಿಯರ ಮೇಲಿನ ಅತ್ಯಾಚಾರ, ಗಿರಿಜನ ಪ್ರದೇಶಗಳಲ್ಲಿ ಮತಾಂತರ ಹೆಸರಿನಲ್ಲಿ ನಡೆಸಿದಧಾಳಿಗಳು, ಕುಷ್ಟರೋಗ ತಜ್ಞ ಸ್ಟೈನ್ಸ್ ನ ಬರ್ಬರ ಹತ್ಯೆ, ಅಯೋಧ್ಯೆ ರಾಮದೇವಾಲಯದ ಪ್ರಶ್ನೆಯನ್ನು ಮತ್ತೆ ಮತ್ತೆ ಎತ್ತಿದ್ದು, ದೇಶಾದ್ಯಂತ ಅನೇಕ ದರ್ಗಾ, ಮಸೀದಿಗಳ ಮೇಲೆ ದಾಳಿ, ಗೋಧ್ರಾ ಹತ್ಯಾಕಾಂಡ ಮತ್ತು ಗುಜರಾತ್ ಮಾರಣಹೋಮ, ಇತ್ಯಾದಿ ಇತ್ಯಾದಿ ಇಡೀ ದೇಶದಲ್ಲಿ ಇವುಗಳ ಬಗೆಗಿನ ಚರ್ಚೆಯೋ ಚರ್ಚೆ. ಅಲ್ಪಸಂಖ್ಯಾತರು ಜಾತ್ಯತೀತ ಮನೋಭಾವದ ಎಲ್ಲ ಜನತೆಯ ಆತಂಕ ಮುಗಿಲಿಗೇರಿದ ಸ್ಥಿತಿ. ದುಡಿಯುವ ಜನ ತಮ್ಮ ಜೀವ ಮತ್ತು ಜೀವನದ ಮೇಲಿನ ಧಾಳಿ ಇವುಗಳಿಂದ ರಕ್ಷಿಸಿಕೊಳ್ಳುವುದೇ ಮೊದಲ ಹಾಗೂ ಪ್ರಮುಖ ಕರ್ತವ್ಯವಾಗಿತ್ತು ಹಾಗೂ ಇಡೀ ದೇಶದ ಪ್ರಮುಖ ಕಾಳಜಿಯಾಗಿ ಪರಿಣಮಿಸಿತ್ತು. ಇದಕ್ಕೆ ದೇಶದ ಜನರೇ ಚುನಾವಣೆಗಳ ಮೂಲಕ ಕೊಟ್ಟ ದೊಡ್ಡ ಹೊಡೆತ. ಇಂದು ಆಳುವವರ್ಗ ಕೋಮುವಾದವನ್ನುಪಯೋಗಿಸಿಕೊಂಡು ಜನರ ಸಮಸ್ಯೆಗಳನ್ನು ಆಳಕ್ಕೆ ಹೂತುಹಾಕುವ ಅವಕಾಶವನ್ನು ತಪ್ಪಿಸಿದೆ.


ಎಡಪಕ್ಷಗಳ ಪಾತ್ರ

ಅದೇ ಸಮಯದಲ್ಲಿ ದೇಶದ ಜನತೆ ಸಿಪಿಐ(ಎಂ) ನೇತೃತ್ವದ ಎಡಪಕ್ಷಗಳಿಗೆ ಕೊಟ್ಟ ಮತಗಳು ಹಾಗೂ ಸ್ವಾತಂತ್ರ್ಯನಂತರದಲ್ಲಿಯೇ ಅತಿಹೆಚ್ಚು ಸ್ಥಾನಗಳನ್ನು ಮತ್ತು ಅವುಗಳ ಬೆಂಬಲದ ಮೇಲೆ ಸರ್ಕಾರ ನಡೆಯಬೇಕಾದ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಜನರ ಸಮಸ್ಯೆಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದ ಸರ್ಕಾರದ ನೀತಿಗಳನ್ನು, ದೇಶದ ಪ್ರಮುಖ ಅಜೆಂಡಾ ಆಗಿಸುವಲ್ಲಿ ಯಶಸ್ವಿಯಾಗಿವೆ. ಇಂದು 15 ವರ್ಷಗಳ ಜಾಗತೀಕರಣ ಪರಿಣಾಮವಾದ ಪ್ರತಿಯೊಂದು ಸಮಸ್ಯೆಯೂ, ಅದಕ್ಕೆ ಪರಿಹಾರದ ಕ್ರಮಗಳು, ಜನರಿಗೆ ಪ್ರತಿಕೂಲವಾದ ಪ್ರತಿಯೊಂದು ನೀತಿ, ಕ್ರಮಗಳೂ ದೇಶದಾದ್ಯಂತ ಜನರ ಗಮನಕ್ಕೆ ಬರುತ್ತಿದೆ. ಚರ್ಚೆಗಳಿಗೆ ಒಳಗಾಗುತ್ತಿದೆ. ಇದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದಾದರೂ, ಪೆಟ್ರೋಲ್, ಡೀಸೆಲ್‌ಗಳ ಮೇಲೆ ಹಾಕಿದ ಎರಡು ಪಟ್ಟು ಮೂರು ಪಟ್ಟು ತೆರಿಗೆಯ ಹೊರೆ ಅನೇಕ ದಶಕಗಳಿಂದಲೇ ಜಾರಿಯಲ್ಲಿದ್ದರೂ ಈಗ ಜನತೆಯ ಗಮನಕ್ಕೆ ವ್ಯಾಪಕವಾಗಿ ಬಂದಿದೆ.

ದೇಶದ ವಾತಾವರಣದಲ್ಲಿ ಆದ ಇಂತಹ ಅಗಾಧ ಬದಲಾವಣೆ ಜನತೆ ತಮ್ಮ ಸಮಸ್ಯೆಗಳತ್ತ

ಪುಟ 9 ←







ದುಡಿವ ವರ್ಗದ ಸಮರ ಘೋಷಣೆ

ಸೆಪ್ಟೆಂಬರ್ 29, 2005. ದೇಶದ ದುಡಿಯುವ ವರ್ಗದ ಚಳುವಳಿಯ ಮುನ್ನಡೆಯಲ್ಲಿ ಮತ್ತೊಂದು ಮೈಲುಗಲ್ಲು. ಭಾರತದ ದೇಶದ ಬಹುಸಂಖ್ಯಾತ ಕಾರ್ಮಿಕರು, ನೌಕರರು, ರೈತರು, ಕೂಲಿಕಾರರು ಸಣ್ಣ ವ್ಯಾಪಾರಿಗಳು.... ಹೀಗೆ ಜನಸಾಮಾನ್ಯರನ್ನು ಬಾಧಿಸುವ ಕೇಂದ್ರದ ಯುಪಿಎ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಕೋಟಿಗಟ್ಟಲೆ ಜನರು ಮಹಾ ಮುಷ್ಕರಕ್ಕಿಳಿದ ದಿನ. ತಮಿಳುನಾಡಿನ ಕಲ್ಪಾಕಂ ಅಣುಶಕ್ತಿಕೇಂದ್ರದ ನೌಕರರಿಂದ ಅತ್ತ ಹಿಮಾಲಯ ತಪ್ಪಲಿನ ಹಿಮಾಚಲ ಪ್ರದೇಶ, ಜಮ್ಮುಕಾಶ್ಮೀರಗಳಲ್ಲಿನ ಜಲ ವಿದ್ಯುತ್ ಸ್ಥಾವರಗಳ ನಿರ್ಮಾಣ ಕಾರ್ಮಿಕರವರೆಗೆ ಪಶ್ಚಿಮದ ರಾಜಸ್ಥಾನ-ಪಂಜಾಬ್-ಹರ್ಯಾಣದಿಂದ ಅತ್ತ ಅಸ್ಸಾಂ, ನಾಗಾಲ್ಯಾಂಡ್ ತ್ರಿಪುರದವರೆಗೆ ಹರಡಿಕೊಂಡ ಈ ಐತಿಹಾಸಿಕ ಚಳುವಳಿಯಲ್ಲಿ ನೇರವಾಗಿ ಸುಮಾರು 6 ಕೋಟಿ - ಕಾರ್ಮಿಕರು, ನೌಕರರು ಪಾಲ್ಗೊಂಡಿದ್ದಾರೆಂದು ಅಂದಾಜಿಸಲಾಗಿದೆ. ಸೈಕಲ್ ತಯಾರಿಸುವ ಕಾರ್ಮಿಕರಿಂದ ಆರಂಭಿಸಿ ವಿಮಾನ ನಡೆಸುವ ಪೈಲಟ್‌ಗಳವರೆಗೆ, ಪೌರ ಕಾರ್ಮಿಕರಿಂದ ಆರಂಭಿಸಿ ರಕ್ಷಣಾ ಉದ್ದಿಮೆಯ ಕಾರ್ಖಾನೆ ಕಾರ್ಮಿಕರವರೆಗೆ ಸಾರ್ವಜನಿಕ ಮತ್ತು ಖಾಸಗಿ, ಸಂಘಟಿತ-ಅಸಂಘಟಿತರು ಕೇಂದ್ರ ಸರ್ಕಾರದ ನೌಕರರು, ರಾಜ್ಯ ಸರ್ಕಾರಿ ನೌಕರರು, ಇತ್ಯಾದಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ಕರೆಯನ್ವಯ ಈ ಬೃಹತ್ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ. ಖಾಸಗೀಕರಣ -ಉದಾರೀಕರಣ ನೀತಿಗಳು ಹಾಗೂ ದುಡಿಯುವ ವರ್ಗದ ಜನರ ಬದುಕನ್ನು ಅಭದ್ರಗೊಳಿಸುವ ಕಾರ್ಮಿಕ ಕಾಯ್ದೆ ತಿದ್ದುಪಡಿಗಳ ವಿರುದ್ಧ ತೀವ್ರವಾಗಿ ಪ್ರತಿಭಟಿಸಿದ್ದಾರೆ.

ದೇಶದ ಕೃಷಿಯನ್ನು ನಾಶಗೈಯುವ ಬೀಜ ಕಾಯ್ದೆ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ ಇತ್ಯಾದಿಗಳ ವಿರುದ್ಧ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ನೀಡುವ ನೀತಿಗಳ ವಿರುದ್ಧ ರಾಷ್ಟ್ರಾದ್ಯಂತ ರೈತರು, ಕೃಷಿ ಕೂಲಿಕಾರರು, ವರ್ತಕರೂ ಈ ಹೋರಾಟದಲ್ಲಿ ಕೈಜೋಡಿಸಿರುವುದು ಈ ಹೋರಾಟದ ಪ್ರಖರತೆಯನ್ನು ಮತ್ತಷ್ಟು ತೀವ್ರಗೊಳಿಸಿದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಜನಪರ ನೀತಿಗಳ ಜಾರಿಗಾಗಿ ಒತ್ತಾಯಿಸಿ, ಮಹಿಳೆಯರು, ವಿದ್ಯಾರ್ಥಿ ಯುವಜನರು ಬೀದಿಗಿಳಿದದ್ದು ಚಳುವಳಿಗೆ ಮತ್ತಷ್ಟು ಬಲ ತುಂಬಿದೆ.

ಒಟ್ಟಾರೆ ರಾಷ್ಟ್ರದ ದುಡಿಯುವ ವರ್ಗ ಆಳುವ ಸರ್ಕಾರಗಳಿಗೆ ನೀಡುತ್ತಿರುವ ಸಂದೇಶ ಸ್ಪಷ್ಟವಾಗಿದೆ. 'ಜಾಗತೀಕರಣ ಪ್ರೇರಿತ ಆರ್ಥಿಕ ನೀತಿಯನ್ನು ಕೈಬಿಟ್ಟು ಜನಪರ ನೀತಿಗಳನ್ನು ಜಾರಿ ಮಾಡದಿದ್ದರೆ ನಿಮಗೆ ಉಳಿಗಾಲವಿಲ್ಲ. ದೇಶದಲ್ಲಿ ದುಡಿಯುವ ವರ್ಗ ಈ ನಿಟ್ಟಿನಲ್ಲಿ ಶೋಷಕ ವರ್ಗಗಳ ವಿರುದ್ಧ ಮತ್ತು ಅವರ ಬಾಲಬಡುಕ ಸರ್ಕಾರಗಳ ವಿರುದ್ಧ ಸಮರ ಘೋಷಿಸಿದೆ' ಎಂಬುದು ಆ ಸಂದೇಶ.

ಸೆಪ್ಟೆಂಬರ್ 29, 2005ರ ಮಹಾ ಮುಷ್ಕರದ ಯಶಸ್ಸಿನ ಘೋಷಣೆ ಎಲ್ಲೆಡೆ ಮಾರ್ದನಿಸುತ್ತಿದೆ. ದೇಶದ ದುಡಿಯುವ ವರ್ಗ ಕೊಟ್ಟ ಎಚ್ಚರಿಕೆಗೆ ಸರ್ಕಾರಗಳು ಬೆಚ್ಚಿ ಬಿದ್ದಿವೆ. ಈ ರಾಷ್ಟ್ರದ 'ಅಧಿಕೃತ' ವಿರೋಧ ಪಕ್ಷವಾದ ಬಿಜೆಪಿ ದುಡಿಯುವ ವರ್ಗದ ಈ ಕಾರ್ಯಾಚರಣೆಯನ್ನು ಹಾಸ್ಯಾಸ್ಪದ ಎಂದಿದೆ. 'ಮುಷ್ಕರ ನಡೆಸುವುದು ಈ ದೇಶದ ಕಾನೂನಿಗೆ ವಿರುದ್ಧ, ಕಾರ್ಮಿಕ ಸಂಘಟನೆಗಳ ಮೇಲೆ ಸರ್ಕಾರ ಕ್ರಮ ಜರುಗಿಸಬೇಕು' ಎಂದೂ ಅದು ಒತ್ತಾಯಿಸಿ ಅಧಿಕಾರದಲ್ಲಿದ್ದಾಗ ದೇಶದ್ರೋಹಿ-ಜಾಗತೀಕರಣ ನೀತಿಗಳನ್ನು, ಸಹಿಸಲಸಾಧ್ಯವಾದ ಸಂಕಟಗಳನ್ನು ಜನಗಳ ಮೇಲೆ ಹೇರಿದ ಬಿಜೆಪಿಗೆ ಜನತೆ ಕೊಟ್ಟ ಮರ್ಮಾಘಾತ ಇನ್ನೂ ಅರ್ಥ ಆಗಿಲ್ಲವೆಂದು ತೋರುತ್ತಿದೆ ಅಥವಾ ಅರ್ಥವಾಗಿಲ್ಲವೆಂಬಂತೆ ಅದು ನಟಿಸುತ್ತಿದೆ.

ಜನಪರ ಸರ್ಕಾರ ನೀಡುವುದಿರಲಿ ಜನರ ಸಂಕಟಗಳು - ಬವಣೆಗಳ ಆಧಾರದಲ್ಲಿ ರಚನಾತ್ಮಕ ವಿರೋಧ ಪಕ್ಷವಾಗಿಯೂ ಕೆಲಸ ಮಾಡುವುದರಲ್ಲಿ ದಯನೀಯವಾಗಿ ವಿಫಲಗೊಂಡು ದಿಕ್ಕು ಕಾಣದೇ ಕುಳಿತಿರುವ ಬಿಜೆಪಿ - ಪಾಪ ಇನ್ನೇನು ತಾನೇ ಹೇಳಿತು.




ಬೋಪಾಲ್‌ನಲ್ಲಿ

ಕೇಂದ್ರಮಟ್ಟದಲ್ಲಿ ಕಾರ್ಮಿಕರ ಸಂಘಟನೆಗಳ ಜಂಟಿ ಸಮಿತಿ ಕರೆ ನೀಡಿದ ಮತ್ತು ಎಡಪಕ್ಷಗಳು ಬೆಂಬಲಿಸಿದ ಈ ಮಹಾಮುಷ್ಕರವು ಪಶ್ಚಿಮ ಬಂಗಾಳ, ಕೇರಳ, ತ್ರಿಪುರ, ರಾಜ್ಯಗಳಲ್ಲಿ ಜನಬೆಂಬಲದಿಂದಾಗಿ ಅಕ್ಷರಶಃ ಬಂದ್ ಆಗಿ ಮಾರ್ಪಟ್ಟಿತ್ತು. ಅಸ್ಸಾಂ, ಹರ್ಯಾಣ, ಒರಿಸ್ಸಾ, ಜಾರ್ಖಂಡ್ ಮುಂತಾದ ರಾಜ್ಯಗಳಲ್ಲಿ ಬಹುತೇಕ ಬಂದ್‌ನಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಪಂಜಾಬ್, ರಾಜಸ್ತಾನ, ಹಿಮಾಚಲ ಪ್ರದೇಶ, ಚಂಡಿಗಢಗಳಲ್ಲಿ ಮುಷ್ಕರ ತೀವ್ರತೆಗೆ ಸಾರಿಗೆಸಂಪರ್ಕ ತೀವ್ರವಾಗಿ ಪರಿಣಾಮಕ್ಕೆ ಗುರಿಯಾಗಿತ್ತು. ಆಂದ್ರ ಕರ್ನಾಟಕ ರಾಜ್ಯಗಳಂತೆ ಭಾಗಶಃ ಅಂದರೆ ಅಲ್ಲಲ್ಲಿ ಪ್ರಾದೇಶಿಕವಾಗಿ ಬಂದ್‌ನಂತಹ ಪರಿಸ್ಥಿತಿ ನಿರ್ಮಾಣಗೊಂಡಂತಹ ಹೋರಾಟಗಳು ದೇಶಾದ್ಯಂತ ಹಲವಾರು ಇವೆ.

ಪಶ್ಚಿಮ ಬಂಗಾಳ

ಕಾರ್ಮಿಕ ಸಂಘಟನೆಗಳು ಮತ್ತು ಬಂಗಾಳ ಸಾಮೂಹಿಕ ಸಂಘಟನೆಗಳ ವೇದಿಕೆ (ಬಿಪಿಎನ್‌ಓ) ಕರೆ ನೀಡಿದ ಮುಷ್ಕರ ಎಂದಿನಂತೆ ಸಂಪೂರ್ಣ ಬಂದ್ ಆಗಿ ಪರಿವರ್ತಿತವಾಗಿತ್ತು. ಕಾರ್ಮಿಕ ವಿದ್ಯಾರ್ಥಿ ಯುವಜನ, ಮಹಿಳೆಯರು ರೈತ ಕೃಷಿ ಕೂಲಿಕಾರರು ಲಕ್ಷಾಂತರ ಸಂಖ್ಯೆಯಲ್ಲಿ ರಾಜ್ಯವ್ಯಾಪಿ ಬೀದಿಗಿಳಿದರು. ಟೀ ತೋಟಗಳಿಂದ ಹಿಡಿದು ಕಲ್ಲಿದ್ದಲು ಗಣಿಗಳವರೆಗೆ ರಾಜ್ಯಾದ್ಯಂತ ಉತ್ಪಾದನೆ ಕೆಲಸ, ಚಟುವಟಿಕೆಗಳು ಸಂಪೂರ್ಣ ಸ್ಥಗಿತವಾಗಿದ್ದವು. 'ಕಾರ್ಮಿಕ ವರ್ಗ ಮೊಸಳೆಗಣ್ಣೀರು ಎಂದು ಮುಷ್ಕರವನ್ನು ಕುರಿತು ದೊಡ್ಡ ಮಾಧ್ಯಮಗಳು ಜರೆದರೂ, ದೊಡ್ಡ ಅಪಪ್ರಚಾರ ನಡೆಸಿದರೂ ಸಹ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಯನ್ನು ಇಡೀ ಬಂಗಾಳದ ಜನತೆ ತೀವ್ರವಾಗಿ ವಿರೋಧಿಸಿತು.



ಪಂಜಾಬ್: ಜಲಂಧರ್, ಲೂದಿಯಾನ, ಮಂಡಿಗೋವಿಂದಗರ್, ಹೋಷಿಯಾರ್‌ಪುರ ಅಮೃತಸರ ಮುಂತಾದ ಕೈಗಾರಿಕಾ ಕೇಂದ್ರಗಳ ಕಾರ್ಮಿಕರು ಅದರಲ್ಲಿಯೂ ಟೆಕ್ಸ್‌ಟೈಲ್ ಕಾರ್ಮಿಕರು ಮುಷ್ಕರದಲ್ಲಿ ಸಾಮೂಹಿಕವಾಗಿ ಪಾಲ್ಗೊಂಡಿದ್ದಾರೆ. ಚಂಡೀಗಢ ಸೇರಿದಂತೆ ಪ್ರತಿ ಕೈಗಾರಿಕಾ ಕೇಂದ್ರಗಳಲ್ಲಿಯೂ ಹತ್ತು ಸಾವಿರಕ್ಕಿಂತ ದೊಡ್ಡ ಸಂಖ್ಯೆಯ ಕಾರ್ಮಿಕರ ಪ್ರತಿಭಟನೆಗಳು ನಡೆದಿವೆ. ಅಮೃತಸರದಲ್ಲಿ ಮುಷ್ಕರ ಸಂಪೂರ್ಣ ಬಂದ್ ಆಗಿ ಪರಿವರ್ತಿತವಾಗಿದೆ. ಎಫ್‌ಸಿಐ ಪಲ್ಲೇದಾರರು ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡರು. ರಸ್ತೆ ಸಾರಿಗೆ ರಾಜ್ಯಾದ್ಯಂತ ಅಸ್ತವ್ಯಸ್ತಗೊಂಡಿತ್ತು. ಇಟ್ಟಿಗೆ ಕಾರ್ಮಿಕರು ರಾಜ್ಯಾದ್ಯಂತ ಮುಷ್ಕರದ ಕರೆಗೆ ದೊಡ್ಡ ರೀತಿಯಲ್ಲಿ ಸ್ಪಂದಿಸಿ ಪಾಲ್ಗೊಂಡಿದ್ದಾರೆ. ರಾಜ್ಯ ಸರ್ಕಾರಿ ನೌಕರರು, ಕೇಂದ್ರಾಡಳಿತದ ನೌಕರರು ಪೌರಕಾರ್ಮಿಕರು ಮುಷ್ಕರದಲ್ಲಿ ಪೂರ್ಣವಾಗಿ ಪಾಲ್ಗೊಂಡಿದ್ದಾರೆ.

ರಾಜ್ಯದಲ್ಲಿ ರೈತರು-ಕೃಷಿಕೂಲಿಕಾರ ಸಂಘಟನೆಗಳಿಂದ ರೈಲುತಡೆಯು ಅಮೃತಸರ, ಮಾನ್ಸ್, ಫಿಲ್ಲೌರ್, ಮುಖೇರೀನ್, ಬಟಾಲಾ, ಧುರಿ, ಗರ್‌ಶಾಂತರ್ ರಸ್ತೆತಡೆ 30 ಪ್ರದೇಶಗಳಲ್ಲಿ ನಡೆದಿದೆ.

ಮುಷ್ಕರ ಹಿಂದೆಂದೂ ಕಾಣದ ಯಶಸ್ಸನ್ನು ಕಂಡಿದೆ. ರಾಜ್ಯ 50 ಕ್ಕೂ ಹೆಚ್ಚು ಕಾರ್ಮಿಕ ಮತ್ತು ನೌಕರರ ಸಂಘಟನೆಗಳು ಮುಷ್ಕರಕ್ಕೆ ಕರೆ ನೀಡಿದ್ದವು. ರಾಜ್ಯದಲ್ಲಿ ಎನ್‌ಪಿಎಂಓ ಕರೆಯ ಮೇರೆಗೆ ವಿದ್ಯುತ್ ಇಲಾಖೆ ನೌಕರರು, ಎಫ್‌ಸಿಐ, ಅರಣ್ಯ, ಸಾರಿಗೆ ಮುಂತಾದ ಇಲಾಖೆಗಳ ನೌಕರರು ಬ್ಯಾಂಕ್, ವಿಮಾ ಸಂಸ್ಥೆ, ಎನ್‌ಟಿಸಿ, ಬಿಎಸ್‌ಎನ್‌ಎಲ್, ಅಂಗನವಾಡಿ ಔಷಧ ಪ್ರತಿನಿಧಿಗಳು, ಇಟ್ಟಿಗೆ ಕಾರ್ಮಿಕರು ಇತ್ಯಾದಿ 5 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಮತ್ತು ಯಶಸ್ವಿ ಚಕ್ಕಾಜಾಮ್ ಸಹ ಸಂಘಟಿಸಿದರು.

ಇದಲ್ಲದೆ ಸಾವಿರಾರು ಕೃಷಿಕೂಲಿಕಾರರು, ರೈತರು, ವಿದ್ಯಾರ್ಥಿಗಳು, ಮಹಿಳೆಯರು, ಪ್ರತಿಭಟನಾ ರ್‍ಯಾಲಿಗಳನ್ನು ರಾಸ್ತಾ ರೋಖೋ-ರೈಲು ರೋಖೊ ನಡೆಸಿದರು. ಲೂದಿಯಾನ, ಸಂಗ್ರೂರ್, ಚಂಢಿಗಡ, ನವಾನ್ ಷಹರ್, ಪಟಿಯಾಲ, ಜಲಂಧರ್, ಹೋಷಿಯಾರ್‌ಪುರ್, ಅಮೃತಪುರ, ಬಟಿಂಡ ಮುಂತಾದ ಕಡೆಗಳಲ್ಲಿ ಈ ಪ್ರತಿಭಟನೆಗಳು ನಡೆದಿವೆ.

ಲೂದಿಯಾನದಲ್ಲಿ ಸೈಕಲ್ ಕೈಗಾರಿಕೆಯ ಹದಿನೈದು ಸಾವಿರ ಕಾರ್ಮಿಕರ ಪ್ರತಿಭಟನಾ ರ್‍ಯಾಲಿ ನಡೆದಿದೆ.

ಆಂಧ್ರ: ಕೇಂದ್ರ ಹಾಗೂ ರಾಜ್ಯಸರ್ಕಾರಿ ನೌಕರರು, ಪೌರಕಾರ್ಮಿಕರು, ಪಂಚಾಯತ್ ನೌಕರರು, ಬ್ಯಾಂಕು, ವಿಮಾ, ಟೆಲಿಕಾಂ, ಹೈದರಾಬಾದ್ ಮತ್ತು ವಿಶಾಖ ಪಟ್ಟಣಗಳ ಬಹುತೇಕ ಕಾರ್ಖಾನೆಗಳಲ್ಲಿ ಮುಷ್ಕರ ಬಹುತೇಕ ಸಂಪೂರ್ಣವಾಗಿತ್ತು. ಹೈದರಾಬಾದ್‌ನಲ್ಲಿ ಇ.ಸಿ.ಐ.ಎಲ್, ಹೆಚ್.ಸಿ.ಎಲ್, ಬಿ.ಡಿ.ಇ.ಎಲ್ ಮುಂತಾದ ಸಾರ್ವಜನಿಕ ಉದ್ದಿಮೆಗಳಲ್ಲಿ ಮತ್ತು ರಾಜ್ಯ ಸರ್ಕಾರದ ಒಡೆತನದ ಕೈಗಾರಿಕೆಗಳಲ್ಲಿ ಬಂದ್ ಸಂಪೂರ್ಣವಾಗಿತ್ತು. ಇತರ ಕೈಗಾರಿಕೆಗಳಲ್ಲಿ ಭಾಗಶಃ ಮುಷ್ಕರ ನಡೆದಿದೆ. ಸಾರಿಗೆ ಮುಷ್ಕರ ಶೇ.60ರಷ್ಟು ಯಶಸ್ಸು ಕಂಡಿದೆ. ಸಿಂಗಾರೇನಿ ಕೊಲ್ಲೇರಿಯಲ್ಲಿ ಐಎನ್‌ಟಿಯುಸಿ ಸಂಘದ ಪ್ರಾಬಲ್ಯವಿದ್ದರೂ ಮುಷ್ಕರ ಶೇ.75 ಯಶಸ್ವಿಯಾಗಿದೆ. ಅಸಂಘಟಿತ ವಲಯದ ಬೀಡಿ, ಲೋಡಿಂಗ್- ಕಾರ್ಮಿಕರು, ಅಕ್ಕಿಗಿರಣಿ, ಕಟ್ಟಡ-ನಿರ್ಮಾಣ ಕಾಮಗಾರಿ ಕಾರ್ಮಿಕರು, ಖಾಸಗಿ ಸಾರಿಗೆ ಸಂಸ್ಥೆ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಈ ಕಾರ್ಮಿಕರು ರಾಜ್ಯದಲ್ಲಿ 100ಕ್ಕೂ ಹೆಚ್ಚು ಸ್ಥಳಗಳಲ್ಲಿ ರಸ್ತೆ ತಡೆ ನಡೆಸಿದ್ದಾರೆ. ಹೈದರಾಬಾದ್ ಮತ್ತು ಗೋದಾವರಿ ಖಾನಿಗಳಲ್ಲಿ ನೂರಾರು ಕಾರ್ಮಿಕರನ್ನು ಪೊಲೀಸರು ಬಂದಿಸಿದ್ದಾರೆ.

ರಾಜ್ಯಾದ್ಯಂತ ರೈತರು ಹಾಗೂ ಕೃಷಿ ಕೂಲಿಕಾರರಿಂದ 30 ಸ್ಥಳಗಳಲ್ಲಿ ರಸ್ತೆ ತಡೆ ನಡೆದಿದೆ. ಶ್ರೀಕಾಕುಳಂ, ಪ್ರಕಾಶಂ, ವಾರಂಗಲ್, ಕರೀಂನಗರ, ಅನಂತಪುರ, ನಲ್ಗೊಂಡ ಜಿಲ್ಲೆಗಳಲ್ಲಿ ಬಂಡವಾಸಿಯಲ್ಲಿ ಪೊಲೀಸ್ ಲಾಠಿ ಪ್ರಹಾರ ನಡೆದು ಕಾಂ.ಗಣಪತಿ ಮತ್ತಿತರ ರೈತ ಕೃಷಿ ಕೂಲಿಕಾರರ ಸಂಘಟನೆಯ ಮುಖಂಡರಿಗೆ ಗಾಯವಾಗಿದೆ.

ತ್ರಿಪುರ: ಕಾರ್ಮಿಕ ಸಂಘಟನೆಗಳ ಪ್ರಾಯೋಜಕ ಸಮಿತಿ ಕರೆ ನೀಡಿದ ಬಂದ್‌ಗೆ ತ್ರಿಪುರ ರಾಜ್ಯದಲ್ಲಿ ಅಮೋಘ ಪ್ರತಿಕ್ರಿಯೆ ಕಂಡುಬಂದಿತು. ಶಾಲಾ ಕಾಲೇಜುಗಳು ಸರ್ಕಾರದ ಮತ್ತು ಖಾಸಗಿ ಕಛೇರಿಗಳು, ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳು ಅಂಗಡಿ ಮುಂಗಟ್ಟು - ಸಾರಿಗೆ ಸಂಚಾರ ಎಲ್ಲವೂ ಸ್ಥಗಿತವಾಗಿದ್ದವು. ಚಹ ಮತ್ತು ರಬ್ಬರ್ ತೋಟಗಳಲ್ಲಿ ಸಹ ಕೆಲಸ ಸ್ಥಗಿತವಾಗಿತ್ತು. ಆಸ್ಪತ್ರೆ, ಹಾಲು ವಿದ್ಯುತ್ ಸರಬರಾಜು ಮುಂತಾದ ಅವಶ್ಯಕ ಸೇವೆಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು.

ತಮಿಳುನಾಡು : ರಾಜ್ಯಾದ್ಯಂತ 150 ಸ್ಥಳಗಳಲ್ಲಿ ನಡೆದ ಪ್ರತಿಭಟನೆಗಳಲ್ಲಿ 75 ಸಾವಿರ ಜನರು ಬಂಧನಕ್ಕೊಳಗಾಗಿದ್ದಾರೆ.

ತಮಿಳು ನಾಡಿನಲ್ಲಿ ರಾಜ್ಯ ಸರ್ಕಾರಿ ನೌಕರರು (ಟಿ.ಎನ್.ಜಿ.ಇ.ಎ ಮತ್ತು ಟಿಎನ್‌ಜಿಇಯು) ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಆದಾಯ ತೆರಿಗೆ ಎಕ್ಸೈಸ್, ಕಷ್ಟಮ್, ಆಡಿಟ್, ಅಕೌಂಟ್ ಇತ್ಯಾದಿ ವಿವಿಧ ಇಲಾಖೆಗಳ ನೌಕರರು, ಆದಾಯ ಇಲಾಖೆ ಬಿ ಗುಂಪಿನ ಅಧಿಕಾರಿಗಳೂ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಬ್ಯಾಂಕುಗಳು, ವಿಮಾ ಮುಂತಾದ ಹಣಕಾಸು ಸಂಸ್ಥೆಗಳು, ಇಂಡಿಯನ್ ಆಯಿಲ್ ಮತ್ತಿತರ ಕೆಲ ಸಂಸ್ಥೆಗಳ ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಟೆಲಿಕಾಂ ಎರಡೂ ಸಂಘಗಳು ಮುಷ್ಕರಕ್ಕೆ ಕರೆ ನೀಡಿದ್ದರಿಂದ ಮುಷ್ಕರ ಬಹುತೇಕ ಪೂರ್ಣವಾಗಿತ್ತು. ಕಲ್ಪಕಂ ಅಣುಶಕ್ತಿ ಕೇಂದ್ರದ ನೌಕರರೂ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಅಂಗನವಾಡಿ ಮತ್ತು ಮಧ್ಯಾಹ್ನದ ಊಟದ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಚೆನ್ನೈ ಸುತ್ತಮುತ್ತಲ ಬೃಹತ್ ಉದ್ದಿಮೆಗಳಾದ ಅಶೋಕ ಲೈಲಾಂಡ್, ಎನ್ನೋರ್ ಫೌಂಡ್ರೀಸ್, ಎಂಆರ್‌ಎಫ್, ಎಸ್‌ಆರ್‌ಎಸ್, ವಿಮ್ಕೊ, ಕಾರ್ಬೊರಂಡ್ರವಲ್, ಸಿನ್ಟೋ ಕೆಮಿಕಲ್ಸ್, ಬಲ್‌ಮೇರ್, ಯೂನಿವರ್ಸಲ್, ಎವರ್‌ರೆಡಿ ಇಂಡಸ್ಟ್ರೀಸ್, ಆಸ್ಟ್ರೋಂ, ಎಲ್‌ಟಿಎಂ ಕಾರ್ಖಾನೆಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ತಿರುಪ್ಪುರ್‌ನ ಹೊಸೈರಿ ಕೇಂದ್ರ ಸಂಪೂರ್ಣ ಬಂದ್ ಆಗಿತ್ತು. ಸಾರಿಗೆ - ವಿದ್ಯುತ್, ರೈಸ್ ಮಿಲ್, ನಾಗರಿಕ ಸರಬರಾಜು ಗೋದಾಮು ನೌಕರರು ಮುಷ್ಕರದಲ್ಲಿ ರಾಜ್ಯದಾದ್ಯಂತ ಪಾಲ್ಗೊಂಡಿದ್ದರು.

ಕೇಂದ್ರೀಯ ಸಾರ್ವಜನಿಕ ಉದ್ದಿಮೆಗಳಲ್ಲಿ ಬಿಹೆಚ್‌ಇಎಲ್, ನೈವೇಲಿ ಲಿಗ್ನೈಟ್, ಸಲೇಂ ಸ್ಟೀಲ್, ಹಿಂದೂಸ್ತಾನ್ ಫೋಟೋ ಫಿಲಂಸ್ ಮುಂತಾದಡೆಗಳಲ್ಲಿ ಭಾಗಶಃ ಮುಷ್ಕರ ನಡೆದಿದೆ. ಚೆನ್ನೈ ಮತ್ತು ಟೂಟುಕುರಿನ್ ಬಂದರಿನಲ್ಲಿ ಮುಷ್ಕರ ಭಾಗಶಃ ಆಗಿದೆ.

Printed & Published by Communist Party of India(Marxist), Karnataka State ...

ಚೆನ್ನೈನ ಕೈಗಾರಿಕಾ ಪ್ರದೇಶಗಳಾದ ಅಂಬತ್ತೂರ್, ಗುಂಡಿ, ತಿರುವನ್ ಮಯೂರ್, ಹೊಸೂರಿನಲ್ಲಿ SIPCOT ಮುಂತಾದ ಕಡೆಗಳಲ್ಲಿ, ಕೊಯಮತ್ತೂರಿನ ಇಂಜಿನಿಯರಿಂಗ್ ಕೈಗಾರಿಕೆಯಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ಕನ್ಯಾಕುಮಾರಿಯಲ್ಲಿ, ಕೊಯಮತ್ತೂರಿನ ನೀಲಗಿರಿಗಳಲ್ಲಿ ಸಹ ರಬ್ಬರ್ ತೋಟಗಳ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಚೆನ್ನೈ ಮತ್ತಿತರ ನಗರಗಳಲ್ಲಿ ಆಟೋ ಚಾಲಕರು ಮುಷ್ಕರದಲ್ಲಿಪಾಲ್ಗೊಂಡಿದ್ದಾರೆ. ಬೀಡಿ, ಕಟ್ಟಡ ಕಾರ್ಮಿಕರು, ಕೈಮಗ್ಗ, ಹಮಾಲಿ ಮುಂತಾದ ಅಸಂಘಟಿತರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಾಜ್ಯದ 300 ಕ್ಕೂ ಹೆಚ್ಚು ಕೇಂದ್ರಗಳಲ್ಲಿ ರಸ್ತೆ ತಡೆ ನಡೆಸಿದ ಸಾವಿರಾರು ವಿದ್ಯಾರ್ಥಿ-ಯುವಜನ-ಮಹಿಳೆಯರು, ರೈತ ಕೃಷಿಕೂಲಿಕಾರರನ್ನು ಬಂಧಿಸಲಾಗಿದೆ. ಚೆನ್ನೈ ಒಂದರಲ್ಲೇ 14 ಕಡೆ ಬಂಧನಗಳಾಗಿವೆ. ಪೆರಂಬೂರಿನಲ್ಲಿ ರೈಲು ತಡೆ ನಡೆದಿದೆ. ಮದುರೈನಲ್ಲಿ 400 ಜನ ಮಹಿಳೆಯರು ಸೇರಿದಂತೆ 1700 ಜನರನ್ನು ಬಂಧಿಸಲಾಗಿದೆ. ಕೊಯಮತ್ತೂರಿನಲ್ಲಿ 3000, ಕನ್ಯಾಕುಮಾರಿಯಲ್ಲಿ 5000 ಜನರನ್ನು ಬಂಧಿಸಲಾಗಿದೆ.

ರಾಜಸ್ತಾನ: ಮುಷ್ಕರದಲ್ಲಿ ರಾಜ್ಯ ಸರ್ಕಾರಿ ನೌಕರರು ಮತ್ತು ರಸ್ತೆ ಸಾರಿಗೆ ನೌಕರರು ಉತ್ತಮವಾಗಿ ಪಾಲ್ಗೊಂಡಿದ್ದಾರೆ. ಜೈಪುರ, ಕೋಟ, ಗಂಗಾನಗರ, ಜುನಜ್ಹುನ್ ಮುಂತಾದ ಕೈಗಾರಿಕಾ ಪ್ರದೇಶಗಳ ಕಾರ್ಮಿಕರು ದೊಡ್ಡಸಂಖ್ಯೆಯಲ್ಲಿ ಮುಷ್ಕರಗಳಲ್ಲಿ ಪಾಲ್ಗೊಂಡಿದ್ದಾರೆ. ಖೇತ್ರಿ ಕಾರ್ಪೊರೇಷನ್ ಕಾಂಪ್ಲೆಕ್ಸ್ ಮತ್ತು ಜೆಕೆ ಟೈರ್ಸ್ ಗಳಲ್ಲಿ ಮುಷ್ಕರ ಉತ್ತಮವಾಗಿತ್ತು. ಮಂಡಿ ಹಮಾಲರು ಮುಷ್ಕರ ಮಾಡಿದರು. ರಾಜ್ಯ ಸರ್ಕಾರಿ ನೌಕರರು ಒಂದು ದಿನದ ಧರಣಿ ನಡೆಸಿದರು. ಜೈಪುರದಲ್ಲಿ ಪೊಲೀಸರು ಅಮಾನುಷ ಲಾಠಿ ಪ್ರಹಾರ ಮಾಡಿ ಹಲವರಿಗೆ ಗಾಯಗಳಾಗಿವೆ. 25 ಜನರನ್ನು ಬಂಧಿಸಿದ್ದಾರೆ. ಸಿಕಾರ್, ಜುನ್‌ಜ್ಹುನು, ನಾಗೌರ್, ಚುರು, ಶ್ರೀಗಂಗಾನಗರ ಮತ್ತು ಹನುಮಾನ ನಗರ್ ಮುಂತಾದ ಕಡೆಗಳಲ್ಲಿ ರಸ್ತೆ ತಡೆ, ರೈಲು ತಡೆ ನಡೆದಿದೆ.

ಒರಿಸ್ಸಾ : ಜೀವವಿಮಾ, ಸಾಮಾನ್ಯ ವಿಮಾ, ಬಿಎಸ್‌ಎನ್‌ಎಲ್, ಬ್ಯಾಂಕ್‌ಗಳು, ಎಫ್‌ಸಿಐ, ಅಂಚೆ-ಆರ್‌ಎಂಎಸ್, ಸರ್ವೆ ಇಲಾಖೆ, ಸಮೀಕ್ಷೆ, ಆದಾಯ ತೆರಿಗೆ, ಎಕ್ಸೈಸ್, ಸರ್ಕಾರಿ ಮುದ್ರಣಾಲಯ ಮುಂತಾದ ಕಡೆಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ರೈಲು-ವಿಮಾನ ಸೇರಿದಂತೆ ಸಂಪೂರ್ಣ ರಾಜ್ಯದಲ್ಲಿ ಬಹುತೇಕ ಸ್ಥಗಿತವಾಗಿತ್ತು. ಸುಂದರಗಢ ಮತ್ತು ಕಿಯಂಜಾರ್ ಜಿಲ್ಲೆಗಳಲ್ಲಿ ಕಬ್ಬಿಣ ಗಣಿಗಳಲ್ಲಿ ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ರಾಜ್ಯದ ಬಹುತೇಕ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಸ್ಥಗಿತಗೊಂಡಿದ್ದವು. ರೂರ್‌ಕೆಲಾದ ಉಕ್ಕು ಕೈಗಾರಿಕೆಯ ಶೇ 20 ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡರು. ಉಳಿದಂತೆ ಬಾಲಸೋರ್, ಭದ್ರಕ್, ಕಟಕ್, ಭುವನೇಶ್ವರ್, ಜೈಪುರ ರಸ್ತೆ ಬೆಹ್ರಾಮ್‌ಪುರ್ ಗಳ ಕೈಗಾರಿಕೆಗಳು ಬಹುತೇಕ ಬಂದ್ ಆಗಿದ್ದವು. ಭುವನೇಶ್ವರ, ರೂರ್‌ಕೆಲಾ, ಪರಲಖೇಮುಂಡಿ, ಭದ್ರಕ್ ಜಿಲ್ಲೆಗಳಲ್ಲಿ ಮತ್ತು ಹಲವಾರು ಪಟ್ಟಣಗಳಲ್ಲಿ ಸಂಪೂರ್ಣ ಬಂದ್‌ನಂತಹ ವಾತಾವರಣ ಕಂಡುಬರುತ್ತಿತ್ತು.

ಒರಿಸ್ಸಾ ರೈತ-ಕೂಲಿಕಾರರ ಸಂಘಟನೆಗಳು, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ರಾಜ್ಯವ್ಯಾಪಿ ರಸ್ತರೋಕೋ, ರೈಲ್ ರೋಕೋಗಳಲ್ಲಿ ಪಾಲ್ಗೊಂಡಿದ್ದರು. 15 ಸಾವಿರಕ್ಕೂ ಹೆಚ್ಚು ಮುಖಂಡರು - ಕಾರ್ಯಕರ್ತರು ಪೊಲೀಸರಿಂದ ಬಂಧನಕ್ಕೊಳಗಾಗಿದ್ದಾರೆ.

ಬಿಹಾರ : ಸರ್ಕಾರಿ ನೌಕರರ ಮುಷ್ಕರ ಪೂರ್ಣವಾಗಿತ್ತು. ಅವರು ಪಾಟ್ನಾದಲ್ಲಿ ಸಚಿವಾಲಯ ಕಛೇರಿ ಮುತ್ತಿಗೆ ಹಾಕಿದರು. ಬೀಡಿ, ಬೀದಿಬದಿ ವ್ಯಾಪಾರಿಗಳು ಮತ್ತು ಸಣ್ಣ ಉದ್ದಿಮೆಗಳ ಕಾರ್ಮಿಕರು ಮುಷ್ಕರದಲ್ಲಿ ದೊಡ್ಡ ರೀತಿಯಲ್ಲಿ ಪಾಲ್ಗೊಂಡಿದ್ದಾರೆ.ಬಗಾರಿಯಾ, ಕಿಷನ್ ಗಂಜ್, ಭಗಲ್‌ಪುರ್, ಬೆಗುಸರಾಯ್ ಗಳಲ್ಲಿ ರೈಲು ತಡೆ ನಡೆದಿದೆ. ದರ್ಭಾಂಗ, ಸಮಸ್ತಪುರ, ಚಾಪ್ರಾ, ಪಾಟ್ನಾ, ಮೋತಿಹಾರಿಗಳಲ್ಲಿ ರಸ್ತೆ ತಡೆ ನಡೆದಿದೆ.

ಹರ್ಯಾಣ: ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಂಪೂರ್ಣವಾದ ಮುಷ್ಕರ ಮತ್ತು ಖಾಸಗಿ ಸಾರಿಗೆ ಸಂಸ್ಥೆಗಳ ಭಾಗಶಃ ಮುಷ್ಕರದಿಂದಾಗಿ ಹರ್ಯಾಣ ರಾಜ್ಯದಲ್ಲಿ ಬಂದ್‌ನಂತಹ ಸ್ಥಿತಿ ನಿರ್ಮಾಣವಾಗಿತ್ತು. ವಿದ್ಯುತ್, ಲೋಕೋಪಯೋಗಿ ಇಲಾಖೆ ನೌಕರರು, ಪೌರ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಕುರುಕ್ಷೇತ್ರ ಮತ್ತು ಯಮುನಾನಗರಗಳಲ್ಲಿ ಪ್ರತಿಭಟನಾ ನಿರತ ನೂರಾರು ಕಾರ್ಮಿಕರನ್ನು ಬಂಧಿಸಲಾಗಿದೆ. ಗುರುಗಾಂವ್ ಮತ್ತು ಧಾರುಹೇರಾ ಪ್ರದೇಶಗಳಲ್ಲಿ ಹೋಂಡಾ ಕಾರ್ಖಾನೆ ಸೇರಿದಂತೆ ಎಲ್ಲೆಡೆ ಮುಷ್ಕರ ಯಶಸ್ವಿಯಾಗಿದೆ. ಗುರುಗಾಂವ್‌ನಲ್ಲಿ 10 ಸಾವಿರ ಕಾರ್ಮಿಕರು ಪಾಲ್ಗೊಂಡ ಬೃಹತ್ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ ನಡೆದಿದೆ. ಪಾಣಿಪಡ್, ಸೋನಾಪತ್, ಕರ್ನಲ್, ರೋಹ್ಟಕ್ ಮುಂತಾದ ಕೈಗಾರಿಕಾ ಕೇಂದ್ರಗಳಲ್ಲಿ ಅಕ್ಷರಶಃ ಬಂದ್ ಆಗಿದೆ. ಪತೇಬಾದ್, ಜಿಂದ್ಸ್ ಮತ್ತು ಹಿಸ್ಸಾರ್‌ಗಳಲ್ಲಿ ರಸ್ತೆ ತಡೆ ನಡೆದಿದೆ.

ಉತ್ತರ ಪ್ರದೇಶ: ಸಹರಾನ್ ಪುರ, ಕಾನ್‌ಪುರ, ಮೀರತ್, ಬುಲನ್‌ಂದ್ಸಹರ್, ಬರೇಲಿ, ವಾರಣಾಸಿ, ಲಕ್ನೋ, ಘಾಸಿಯಾಬಾದ್, ನೊಯ್ಡಾ ಮುಂತಾದ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕರ ಬೃಹತ್ ಕಾರ್ಯಾಚರಣೆಗಳು ನಡೆದಿವೆ. ಸರ್ಕಾರಿ ನೌಕರರು ದೊಡ್ಡ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಅಲಹಾಬಾದ್, ಈಟ್ವಾ ಮುಂತಾದ ಸ್ಥಳಗಳಲ್ಲಿ ಕಾರ್ಮಿಕರು - ರೈತರೂ



ಪಂಜಾಬ್‌ನಲ್ಲಿ

ಜೊತೆಗೂಡಿ ರೈಲು ರೋಖೋ ನಡೆಸಿದ್ದಾರೆ.

ರೈತರು ಹಾಗೂ ಕೃಷಿ ಕೂಲಿಕಾರರು ರಾಜ್ಯದಲ್ಲಿ ಮೆಜಾ ರಸ್ತೆ(ಅಲಹಾಬಾದ್) ಅಲಹಾಬಾದ್‌ನ ಮುವೈಮಾಗುರ್‌ಪುರ್, ವಾರಣಾಸಿ, ಚಂಡೌಲಿ ಮುಂತಾದ ಕಡೆ ರಾಜಧಾನಿ ಎಕ್ಸ್‌ಪ್ರೆಸ್ ರೈಲು ತಡೆ ನಡೆದಿದೆ. ರಸ್ತೆ ತಡೆಯು ಬುಲಂದ್ ಷಹರ್, ಬರೇಲಿ, ಡಯೋರಿಯಾ, ಮಿರ್ಜಪುರ, ಸುಲ್ತಾನ್‌ಪುರ್ ಮುಂತಾದ ಕಡೆ ನಡೆದಿದೆ.

ಪಾಂಡಿಚೇರಿ: ಹಿಂದೂಸ್ತಾನ್ ಲಿವರ್, ಇಂಡಿಯನ್ ಆಯಿಲ್, ಬಾಟಲಿಂಗ್ ಪ್ಲಾಂಟ್, ಎಲ್‌ಪಿಜಿ ವಿತರಣಾ ಕೇಂದ್ರಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು.

ಮಧ್ಯಪ್ರದೇಶ : ಬ್ಯಾಂಕ್-ವಿಮಾ ಸಂಸ್ಥೆ, ಅಂಚೆ ಇಲಾಖೆ, ಟೆಲಿಕಾಂ, ಸರ್ಕಾರಿ ನೌಕರರ ಸಂಪೂರ್ಣ ಮುಷ್ಕರವಲ್ಲದೆ, ಭೋಪಾಲ್ ಸಮೀಪದ ಮಂಡಿಡಪ್, ಗೋವಿಂದಪುರ, ಗ್ವಾಲಿಯಾರ್, ಇಂದೋರ್, ಜಬಲಪುರ್, ಬಿನಾ, ಗುನಾ ಮುಂತಾದ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ಸಾಮೂಹಿಕವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಬೀಡಿ, ಸರಕು ಸಾಗಾಣೆ, ಅಕ್ಕಿಗಿರಣಿ, ಅಂಗನವಾಡಿ ಮುಂತಾದ ಅಸಂಘಟಿತ ಕಾರ್ಮಿಕರು ಸಹ ದೊಡ್ಡ ಸಂಖ್ಯೆಯಲ್ಲಿ ಮುಷ್ಕರ ದಲ್ಲಿ ಪಾಲ್ಗೊಂಡಿ ದ್ದರು.

ಗ್ವಾಲಿಯರ್, ಷಹದೋಲ್, ರ್‍ಯಾಟ್ಲಂ ಮುಂತಾದ ಕಡೆ ರೈಲು ತಡೆ ಬಿಂದ್ ಮತ್ತು ಮೊರೇನಾ ಮುಂತಾದ ಕಡೆ ರಸ್ತೆ ತಡೆಗಳು ನಡೆದಿವೆ.



ಅಸ್ಸಾಂ: ಶಾಲಾ ಕಾಲೇಜುಗಳು ಬಂದ್ ಆಗಿದ್ದವು. ರಾಜ್ಯದಲ್ಲಿ ಬಂದ್‌ನಂತಹ ಸ್ಥಿತಿ ಇತ್ತು. ಬ್ಯಾಂಕ್, ವಿಮಾ ಸಂಸ್ಥೆ, ಬಿಎಸ್‌ಎನ್‌ಎಲ್ ಅಲ್ಲದೆ ಸರ್ಕಾರಿ ಕಚೇರಿಗಳು, ಎಣ್ಣೆ ಗಿರಣಿಗಳು, ಕಾಗದ ಕಾರ್ಖಾನೆಗಳು, ಖಾಸಗಿ ಸಾರಿಗೆ ಸಂಸ್ಥೆಗಳು, ಸಣ್ಣ ಕೈಗಾರಿಕೆಗಳು ಸಂಪೂರ್ಣ ಬಂದ್ ಆಗಿದ್ದವು. ಮಾರ್ಗರಿಟ್ ಮತ್ತು ಲಾಡೋರ್ಲಿಗಳ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ ಪೊಲೀಸರು ಹಾಗೂ ಗೂಂಡಾಗಳ ಧಾಳಿ ನಡೆದರೂ ಬಂದ್ ಸಂಪೂರ್ಣ ಯಶಸ್ವಿಯಾಗಿದೆ. ಟೀ ತೋಟಗಳ ಬಂದ್ ಶೇ 60 ರಷ್ಟಿತ್ತು. ರಾಜ್ಯವ್ಯಾಪಿ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ. ಎಐಟಿಯುಸಿ, ಸಿಐಟಿಯು, ಯುಟಿಯುಸಿ-ಎಲ್‌ಎಸ್, ಎಐಸಿಸಿಟಿಯು ಮುಂತಾದ ಸಂಘಟನೆಗಳ ಜಂಟಿ ರ್‍ಯಾಲಿಗಳು ನಡೆದಿವೆ. ಬೊಂಗೈಗಾನ್‌ನಲ್ಲಿ ಪೊಲೀಸರು ನಡೆಸಿದ ಲಾಠಿ ಪ್ರಹಾರದಲ್ಲಿ ಮಹಿಳೆಯರು ಸೇರಿದಂತೆ ಹಲವರು ಗಾಯಗೊಂಡಿದ್ದಾರೆ.

ಸೊನಿತ್ ಪುರ, ಕಾಮರೂಪ್, ಬಾರ್ ಪೇಟಾ, ಕಾಚರ್ ಮುಂತಾದಕಡೆಗಳಲ್ಲಿ ರಸ್ತೆ ತಡೆಗಳು ನಡೆದಿವೆ.

ಹಿಮಾಚಲ ಪ್ರದೇಶ: ಬೃಹತ್ ಜನ ವಿದ್ಯುತ್ ಯೋಜನೆಯ ಕಾರ್ಮಿಕರೆಲ್ಲರೂ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಸಾರಿಗೆ ನೌಕರರು ದೊಡ್ಡ ರೀತಿಯಲ್ಲಿ ಮುಷ್ಕರದಲ್ಲಿ ಪಾಲ್ಗೊಂಡರು. ಸಲೋನ್ ಪರವಾನೋ, ಬಡ್ಡಿ ಬೆರೋಟಿವಾಲ, ಸಿರ್‌ಮೊರ್, ಹಮಿಪುರ್ ಮುಂತಾದ ಕೈಗಾರಿಕಾ ಕೇಂದ್ರಗಳಲ್ಲಿ ಮುಷ್ಕರಕ್ಕೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ಶಿಮ್ಲಾದಲ್ಲಿ ಹೊಟೆಲ್ ಕಾರ್ಮಿಕರು ಸಂಪೂರ್ಣವಾಗಿ ಮುಷ್ಕರ ನಡೆಸಿದ್ದಾರೆ. ಕೇಂದ್ರ ಸರ್ಕಾರಿ ನೌಕರರು, ಬ್ಯಾಂಕುಗಳು, ವಿಮಾ ಸಂಸ್ಥೆ, ಟೆಲಿಕಾಂ ಕಚೇರಿಗಳು ಸಂಪೂರ್ಣ ಬಂದ್ ಆಗಿದ್ದವು.

ದೆಹಲಿ: ಕೈಗಾರಿಕಾ ಪ್ರದೇಶವಾದ ಒಕ್ಲಾ 1-2, ವಾಜಿರ್ ಪುರ, ಮಂಗೋಲ್‌ಪುರಿ, ಜಿಲ್‌ಮಿಲ್, ಮಾಯಾಪುರಿ, ಕೀರ್ತಿನಗರ್, ಪಟ್ಪರ್ ಗಂಜ್ ಮುಂತಾದ ಕಡೆಗಳಲ್ಲಿ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಮುಷ್ಕರ ನಡೆಸಿದ್ದಾರೆ. ಜಹಾನುಗುರಿ, ಮಂಗೋಲ್ ಪುರಿ, ವಾಜಿರ್‌ಪುರ್ ಫ್ಲೈ ಓವರ್‌ಗಳಲ್ಲಿ ನಡೆದ ಕಾರ್ಮಿಕರ ಬೃಹತ್ ಪ್ರತಿಭಟನಾ ಮೆರವಣಿಗೆ ಸಂಚಾರ ತಡೆಯಾಗಿದೆ. ದೆಹಲಿ ವಿಶ್ವವಿದ್ಯಾಲಯದ ಶಿಕ್ಷಕರು, ನೌಕರರು ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ.

ಜಾರ್ಖಂಡ್ : ಕಲ್ಲಿದ್ದಲು ಉದ್ದಿಮೆಯಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ರಾಂಚಿ; ಹಜಾರಿಬಾಗ್, ದುರವ, ಧನಬಾದ್, ಝರಿಯ ಮುಂತಾದ ಪ್ರದೇಶಗಳಲ್ಲಿ ಬೃಹತ್ ರ್‍ಯಾಲಿ ಮತ್ತು ಪ್ರದರ್ಶನಗಳು ನಡೆದು ಸಂಚಾರ ಬಂದ್ ಆಗಿದೆ. ರಾಜಧಾನಿ ಎಕ್ಸ್‌ಪ್ರೆಸ್ ಮತ್ತು ಇತರ ಮುಖ್ಯ ರೈಲುಗಳನ್ನು ಕುಮಾರ್ ದುಬಿಯಲ್ಲಿ ತಡೆಯಲಾಗಿದೆ. ರಾಂಚಿಯಲ್ಲಿ 6 ಗಂಟೆಗಳ ರಸ್ತೆ ತಡೆ ನಡೆಸಲಾಯಿತು. ರಾಂಚಿ, ಧನಾಬಾದ್‌ಗಳಲ್ಲಿ ಮಾತ್ರವೇ ಒಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು ಬಂಧಿಸಲಾಗಿದೆ. ಸಾರಿಗೆ ನೌಕರರ ಮುಷ್ಕರದಿಂದ ರಾಜ್ಯಾದ್ಯಂತ ಸಾರಿಗೆ ಸಂಚಾರ ಬಹುತೇಕ ಸ್ಥಗಿತವಾಗಿತ್ತು.

ಜಮ್ಮು ಕಾಶ್ಮೀರ : ಬಾಗ್ಲಿಹಾರ್, ಸೇವಾ ಮತ್ತು ಎನ್‌ಹೆಚ್‌ಪಿಸಿ ಮುಂತಾದ ಜಲವಿದ್ಯುತ್ ಯೋಜನೆಗಳ ಕಾರ್ಮಿಕರು ಸಾಮೂಹಿಕವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಶ್ರೀನಗರದಲ್ಲಿ ಹೆಚ್‌ಎಂಟಿ ಕಾರ್ಮಿಕರು, ಸಂತೂರ್ ಹೋಟೆಲ್ ಕಾರ್ಮಿಕರು, ಐಟಿಐ ಮತ್ತು ಎಎನ್‌ಡಿ ನಿರ್ಮಾಣ ಯೋಜನೆಯ ಕಾರ್ಮಿಕರು ಸಾಮೂಹಿಕ ಪ್ರತಿಭಟನೆಯನ್ನು ನಡೆಸಿದ್ದಾರೆ.

ಉತ್ತರಾಂಚಲ್: ಜಲನಿಗಮ, ಗಡ್‌ವಾಲ್ ವಿಕಾಸ ನಿಗಮ ಮತ್ತು ಸಣ್ಣ ಕೈಗಾರಿಕೆಗಳ ಕಾರ್ಮಿಕರು, ಮಸೌರಿಯ ಹೋಟೆಲ್ ಕಾರ್ಮಿಕರು ಮುಷ್ಕರ ನಡೆಸಿದ್ದಾರೆ. ಟಿಹೆಚ್‌ಡಿಸಿ ಯಲ್ಲಿ ಮುಷ್ಕರ ಭಾಗಶಃ ಆಗಿದೆ. ವಿಮಾ, ಬ್ಯಾಂಕ್, ಬಿಎಸ್‌ಎನ್‌ಎಲ್‌ಗಳಲ್ಲಿ ಸಂಪೂರ್ಣ ಮುಷ್ಕರ, ಬಿಹೆಚ್‌ಇಎಲ್‌ನಲ್ಲಿ ಭಾಗಶಃ ಮುಷ್ಕರ ನಡೆದಿದೆ. ಅಂಗನವಾಡಿ ನೌಕರರು, ಹರಿದ್ವಾರದಲ್ಲಿ ಪೌರ ಕಾರ್ಮಿಕರು ಸಂಪೂರ್ಣವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಸಂಪೂರ್ಣ ರಸ್ತೆ ತಡೆಗಳು, ಪೌರಿ, ಉತ್ತರಕಾಶಿ, ಡೆಹರಡೂನ್, ಉದಮ್ ಸಿಂಗ್ ನಗರಗಳಲ್ಲಿ ನಡೆದಿದೆ.

ಮಹಾರಾಷ್ಟ್ರ: ರಸ್ತೆತಡೆ, ರೈಲು ತಡೆ 80 ಕಡೆಗಳಲ್ಲಿ. ನಾಸಿಕ್, ಥಾಣೆ, ನಂದುರ್‌ಬಾರ್, ನಾಂದೇಡ್, ಬೀಡ್, ಪರ್‌ಭಾನಿ, ವಾರ್ಧಾ, ಯವತ್‌ಮಲ್, ಹೈಂಗೊಲಿ ಮತ್ತು ಕೊಲ್ಲಾಪುರ, ನವಿ-ಮುಂಬೈ, ಥಾಣೆ, ಪೂನಾ, ಸೊಲ್ಲಾಪುರ, ಇಚ್ಛಾಲಕರಂಜಿ, ನಾಗಪುರ, ಔರಂಗಬಾದ್ ಮುಂತಾದ ಕೈಗಾರಿಕಾ ಕೇಂದ್ರಗಳಲ್ಲಿ ಮುಷ್ಕರದಕರೆಗೆ ಸರ್ಕಾರಿ-ಖಾಸಗಿ, ಸಂಘಟಿತ, ಅಸಂಘಟಿತ ಎಲ್ಲಾ ವಿಭಾಗಗಳ ಕಾರ್ಮಿಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ಖಾಸಗಿ ಸಾರಿಗೆ ಸಂಸ್ಥೆ ವಾಹನಗಳು, ಆಟೋರಿಕ್ಷಾಗಳು ರಾಜ್ಯದಲ್ಲಿ ಬಹುತೇಕ ರಸ್ತೆಗಿಳಿಯಲಿಲ್ಲ. ಮುಂಬೈನಲ್ಲಿ ರಾಜ್ಯ ಸರ್ಕಾರಿ ನೌಕರರ ಪೌರ ಕಾರ್ಮಿಕರ ಸಂಪೂರ್ಣ ಮುಷ್ಕರ ನಡೆದಿದೆ. ವಿಮೆ - ಬ್ಯಾಂಕ್, ಕೇಂದ್ರ ಸರ್ಕಾರದ ಇಲಾಖೆಗಳು, ಖಾಸಗಿ ಕಾರ್ಖಾನೆಗಳ ಕಾರ್ಮಿಕರಿಂದಲೂ ಮುಷ್ಕರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬಂದರು ಗಳಲ್ಲಿ ಮುಷ್ಕರ ಭಾಗಶಃ ಇತ್ತು. ರಾಜ್ಯದ ನಾನಾ ಭಾಗಗಳಲ್ಲಿ ಕಾರ್ಮಿಕರು, ವಿದ್ಯಾರ್ಥಿ-ಯುವಜನ-ಮಹಿಳೆಯು, ರೈತ-ಕೃಷಿಕೂಲಿಕಾರರ ಬೃಹತ್ ರಸ್ತಾರೋಖೋಗಳು ನಡೆದಿವೆ.

ಛತ್ತೀಸ್ ಗಡ: ಕಲ್ಲಿದ್ದಲು ಗಣಿಗಳಲ್ಲಿ ಶೇ 75 ರಷ್ಟು ಮುಷ್ಕರ ಯಶಸ್ವಿಯಾಗಿದೆ. ಈಗ ಖಾಸಗೀಕರಣಗೊಂಡಿರುವ ಬಾಲ್ಕೊದಲ್ಲಿ ಶೇ 100 ರಷ್ಟು ಮುಷ್ಕರ ಯಶಸ್ವಿಯಾಗಿದೆ. ಕಬ್ಬಿಣದ ಅದಿರು ಗಣಿ 'ದಲ್ಲಿ ರಜಾರ'ದಲ್ಲಿ ಶೇ 90 ಭಾಗ ಮುಷ್ಕರವಾಗಿದೆ. ರಾಜನಂದ್ ಗೋನ್ ಮತ್ತು ದಮ್ತರಿ ಮಾರುಕಟ್ಟೆಗಳು ಮುಚ್ಚಿದವು. ರಾಜ್ಯದ 112 'ವೇರ್ ಹೌಸ್‌ಗಳು' ಬಂದ್ ಆಗಿದ್ದವು. ಬೀಡಿ ಕಾರ್ಮಿಕರು, ಅಂಗನವಾಡಿ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ರಾಯ್ ಪುರ್ ಪುರಸಭೆಯ ಸಫಾಯಿ ಕಾರ್ಮಿಕರು ಸಂಪೂರ್ಣವಾಗಿ ಬಂದ್‌ನಲ್ಲಿ ಭಾಗವಹಿಸಿದ್ದರು. ಈಶಾನ್ಯ ರಾಜ್ಯಗಳಲ್ಲಿ ಸಹ ಈ ಮುಷ್ಕರದ ಕರೆಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ ಎಂದು ವರದಿಯಾಗಿದೆ. ○

ರಾಜ್ಯಾದ್ಯಂತ ಕಾರ್ಮಿಕ ವರ್ಗದ ನೇತೃತ್ವದ

ಬೆಂಗಳೂರು

ರಾಜ್ಯದ ರಾಜಧಾನಿಯಲ್ಲಿ ಮುಷ್ಕರ ಮತ್ತು ಬಂದ್‌ಗಳಂತಹ ಚಳುವಳಿ ಯಶಸ್ವಿಯಾಗುವುದು ಸಾಮಾನ್ಯ ಪ್ರಯತ್ನಗಳಿಂದ ಆಗುವುದಿಲ್ಲ. ಅದಕ್ಕೆ ವಿಶೇಷ ಪ್ರಯತ್ನಗಳು ಬೇಕು. ಆದರೆ ಜನರ ಮನಸ್ಸಿನೊಳಗಣ ಬೇಗುದಿ ಮುಷ್ಕರ ಬೆಂಬಲದ ರೂಪದಲ್ಲಿ ಕಂಡುಬಂತು. ಮುಷ್ಕರವನ್ನು ವಿಫಲಗೊಳಿಸುವ ಆಡಳಿತಯಂತ್ರದ ಧೋರಣೆಯ ಭಾಗವಾಗಿ ಬಸ್ಸುಗಳು ಸಂಚರಿಸುತ್ತಿದ್ದರೂ ಸಹ ಅವುಗಳಲ್ಲಿ ಜನ ಸಂಚಾರ ಎಂದಿನಂತಿರಲಿಲ್ಲ. ಬೆಂಗಳೂರಿನಲ್ಲಿ ಆಟೋ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಮೆರವಣಿಗೆ ರಸ್ತೆ ತಡೆಯಿಂದಾಗಿ ಸಂಚಾರ ನಿಲುಗಡೆಯಾಗಿ ವಾಹನ ಮಾರ್ಗಗಳ ದಿಕ್ಕು ಬದಲಿಸಿದರೂ ಜನರು ಆ ಬಗ್ಗೆ ಸಿಟ್ಟು ಮಾಡಲಿಲ್ಲ. ಸಹಾನುಭೂತಿಯಿಂದ ಮಾತನಾಡುತ್ತಿದ್ದುದು ಕಂಡುಬಂತು.

ಜೀವವಿಮಾ ಸಂಸ್ಥೆ, ಸಾಮಾನ್ಯ ವಿಮಾ ಸಂಸ್ಥೆ ಬ್ಯಾಂಕುಗಳಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ಬೆಂಗಳೂರಿನ ಬಿ.ಇ.ಎಲ್, ಬಿ.ಇ.ಎಂ.ಎಲ್, ಬಿ.ಹೆಚ್.ಇ.ಎಲ್, ಹೆಚ್.ಎ.ಎಲ್, ಐ.ಟಿ.ಐ, ಬಿ.ಎಸ್.ಎನ್.ಎಲ್ ಮುಂತಾದ ಸಾರ್ವಜನಿಕ ಕಾರ್ಖಾನೆಗಳಲ್ಲಿ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿತ್ತು.

ಬೆಂಗಳೂರಿನ ಪ್ರಮುಖ ಕೈಗಾರಿಕಾ ಕೇಂದ್ರಗಳಾದ ಪೀಣ್ಯ, ದಾಸರಹಳ್ಳಿ, ಕೆ.ಆರ್.ಪುರ, ಕೋರಮಂಗಲ ಹೊಸೂರು ರಸ್ತೆ, ಜಿಗಣಿ, ಬೊಮ್ಮಸಂದ್ರ ವೀರಸಂದ್ರ, ಎಲೆಕ್ಟ್ರಾನಿಕ್ ಸಿಟಿ, ಕುಂಬಳಗೋಡು ಪ್ರದೇಶ, ರಾಜಾಜಿನಗರ, ಕಾಮಾಕ್ಷಿ ಪಾಳ್ಯಗಳಲ್ಲಿ ಬಹುತೇಕ ಬಂದ್ ಆಚರಿಸಲಾಗಿದೆ.

ಬೆಂಗಳೂರಿನ ಯಶವಂತಪುರದ ಸಗಟು ಮಾರುಕಟ್ಟೆ ಕೇಂದ್ರವೂ ಬಂದ್ ಆಗಿತ್ತು.

ನಗರ ಕೇಂದ್ರದಲ್ಲಿ ಮೈಸೂರು ಬ್ಯಾಂಕ್ ವೃತ್ತದಿಂದ ಆರಂಭವಾದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಜೆಸಿಟಿಯುಗೆ ಸೇರಿದ ಕಾರ್ಮಿಕ ಸಂಘಟನೆಗಳು ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ಬನಪ್ಪ ಪಾರ್ಕ್‌ನಲ್ಲಿ ನಡೆದ ಸಭೆಯಲ್ಲಿ ಎಐಟಿಯುಸಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಅನಂತ ಸುಬ್ಬರಾವ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ, ವಿ.ಜೆ.ಕೆ.ನಾಯರ್, ಟಿ.ಯು.ಸಿ.ಸಿ ಪರವಾಗಿ ಶಿವಶಂಕರ್, ಹೆಚ್.ಎಂ.ಎಸ್ ಪರವಾಗಿ ಶ್ರೀನಿವಾಸ್ ಯುಟಿಯುಸಿ(ಎಲ್‌ಎಸ್) ಪರವಾಗಿ ರಾಧಾಕೃಷ್ಣ, ಎಐಐಇಎ ಪರವಾಗಿ ನಾಗರಾಜ್, ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ಒಕ್ಕೂಟದ ಪರವಾಗಿ ಶಾಂತರಾಜು ರೈತ ಚಳುವಳಿಯ ಪರವಾಗಿ ಜಿ.ಸಿ.ಬಯ್ಯಾರೆಡ್ಡಿ ಮುಂತಾದವರು ಮಾತನಾಡಿದರು.

ಕುಂಬಳಗೋಡು ಪ್ರದೇಶದಲ್ಲಿ 1500 ಜನರ ರಸ್ತೆ ತಡೆ ನಡೆದಿದೆ. ಕೆಂಗೇರಿಯಲ್ಲಿ ಬಂದ್ ಆಗಿದೆ. ನೆಲಮಂಗಲದಲ್ಲಿ 200 ಜನರಿಂದ 1 ಗಂಟೆ ರಸ್ತೆ ತಡೆ, ಅಂಗಡಿಗಳು ಸ್ವಯಂ ಪ್ರೇರಣೆಯಿಂದ ಬಂದ್ ಆಗಿದ್ದವು. ಕೆ.ಆರ್.ಪುರ ಪ್ರದೇಶದಲ್ಲಿ ಪೂರ್ಣವಾಗಿ ವ್ಯಾಪಾರ ವಹಿವಾಟು ಬಂದ್ ಆಗಿತ್ತು. ಒಂದು ಗಂಟೆ ರಸ್ತೆ ತಡೆ ನಡೆಸಲಾಗಿದೆ. 8 ಜನರನ್ನು ಪೊಲೀಸರು ಬಂಧಿಸಿ ಬಿಡುಗಡೆ ಮಾಡಿದ್ದಾರೆ. ಈ ಪ್ರದೇಶದಲ್ಲಿ ಹಲವಾರು ಕಡೆ ರಸ್ತೆ ತಡೆಗಳು ನಡೆದಿವೆ. ತುಮಕೂರು ರಸ್ತೆ ಜಾಲಹಳ್ಳಿ ಕ್ರಾಸ್‌ನಲ್ಲಿ 500 ಜನರು ಸೇರಿ ಅರ್ಧ ಗಂಟೆಗಳ ಕಾಲ ರಸ್ತೆ ತಡೆ ನಡೆದಿದೆ. ಕನಕಪುರದಲ್ಲಿ ಒಂದು ಗಂಟೆ ರಸ್ತೆ ನಡೆದಿದೆ. ನಾಲ್ಕು ನೂರು ಜನ ಭಾಗವಹಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ಕೈಗಾರಿಕಾ ಪ್ರದೇಶ ಸೇರಿದಂತೆ ಸಂಪೂರ್ಣ ಜನ ಜೀವನ ಸ್ಥಗಿತವಾಗಿತ್ತು. ಸುಮಾರು 3000 ಸಾವಿರ ಜನರು 3 ಗಂಟೆಗಳ ಕಾಲ ರಸ್ತೆ ತಡೆ ನಡೆಸಿದ್ದಾರೆ. ಹಿಂಡಿಗನಾಳದಲ್ಲಿ 1 ಗಂಟೆ ರಸ್ತೆ ತಡೆ ನಡೆದಿದೆ.

ಆನೇಕಲ್‌ನಲ್ಲಿ ಮುಷ್ಕರ ಸಂಪೂರ್ಣ ಬಂದ್ ಆಗಿ ಪರಿವರ್ತನೆಯಾಗಿದೆ. 400 ಜನರ ಮೆರವಣಿಗೆ ಸಭೆ 12 ಗಂಟೆಯವರೆಗೆ ಬಸ್ ಡಿಪೋ ಸಹ ಬಂದ್ ಆಗಿತ್ತು.

ದೊಡ್ಡ ಬಳ್ಳಾಪುರದಲ್ಲಿ 400 ಜನರ ಮೆರವಣಿಗೆ ಬಸ್ ನಿಲ್ದಾಣದಲ್ಲಿ ಬಹಿರಂಗ ಸಭೆ, ತಾಲ್ಲೂಕು ಕಛೇರಿ ಬಳಿ ರಸ್ತೆತಡೆ, ಬೆಳವಂಗಲ ರಸ್ತೆಯಲ್ಲಿ ನೂರು ಜನರಿಂದ 1 ಗಂಟೆ ರಸ್ತೆ ತಡೆ ನಡೆದಿದೆ. ನೆಲಮಂಗಲದಲ್ಲಿ 200 ಜನರಿಂದ 1 ಗಂಟೆ ರಸ್ತೆ



ತಡೆ ನಡೆದಿದೆ. ಅಂಗಡಿ ವ್ಯಾಪಾರ ವಹಿವಾಟು ಸ್ವಯಂ ಬಂದ್ ಮಾಡಿ ಜನತೆ ಮುಷ್ಕರಕ್ಕೆ ಬೆಂಬಲ ಸೂಚಿಸಿದ್ದಾರೆ. ಹೊಸೂರು ರಸ್ತೆ ಕೂಡ್ಲು ಗೇಟ್‌ನಲ್ಲಿ 300 ಜನರಿಂದ ಅರ್ಧ ಗಂಟೆ ರಸ್ತೆ ತಡೆ ನಡೆದಿದೆ. ಕೈಗಾರಿಕೆಗಳಲ್ಲಿ ಸಹ ಮುಷ್ಕರ ಯಶಸ್ವಿಯಾಗಿದೆ. ಮೆರವಣಿಗೆ ಸಭೆಗಳು ನಡೆದಿದೆ. ಅತ್ತಿಬೆಲೆಯಲ್ಲಿ ಸಹ ಜನರು ಪಾಲ್ಗೊಂಡು ರಸ್ತೆತಡೆ ನಡೆದಿದೆ.

ದಕ್ಷಿಣ ಕನ್ನಡ

ದಕ್ಷಿಣಕನ್ನಡ ಜಿಲ್ಲೆಯ ದುಡಿಯುವ ವರ್ಗದ ಇತಿಹಾಸದಲ್ಲಿ ಸೆಪ್ಟೆಂಬರ್ 29, 2005 ಒಂದು ಹೊಸ ಅಧ್ಯಾಯವನ್ನು ತೆರೆಯಿತು. ಮುಷ್ಕರದ ಯಶಸ್ಸಿಗಾಗಿ ಎರಡು ತಿಂಗಳುಗಳಿಂದ ವ್ಯಾಪಕ ಸಿದ್ಧತೆಗಳು ನಡೆಯುತ್ತಿದ್ದಾಗಲೇ ಕಾರ್ಮಿಕ ವರ್ಗದ ಮತ್ತು ಜನಸಾಮಾನ್ಯರ ಪ್ರತಿಕ್ರಿಯೆ ಪ್ರೋತ್ಸಾಹದಾಯಕ ವಾಗಿತ್ತು. ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಜನರ ಸಮಸ್ಯೆಗಳ ಬಗ್ಗೆ ಅಸಡ್ಡೆ, ಕಾರ್ಮಿಕ ವರ್ಗದ ಅಸ್ತಿತ್ವವನ್ನೇ ಕಡೆಗಣಿಸುವ ದುರಹಂಕಾರಿ ಧೋರಣೆ, ಎಡಪಕ್ಷಗಳು ಮುಂದಿಟ್ಟ ಪರ್ಯಾಯ ಮಾರ್ಗೋಪಾಯಗಳನ್ನು ಮೂಲೆಗೆ ತಳ್ಳಿ ಪೆಟ್ರೋಲ್, ಡೀಸೆಲ್ ಬೆಲೆಗಳ ವಿವೇಚನಾರಹಿತ ಏರಿಕೆ, ಇತ್ಯಾದಿಗಳಿಂದ ಬೇಸತ್ತ ಕಾರ್ಮಿಕ ವರ್ಗ ಮತ್ತು



**ಸೆಪ್ಟೆಂಬರ್ 29,2005 ದೇಶದ ಇತಿಹಾಸದ ಸಂಘಟಿತ ಹೋರಾಟದ
ಕರ್ನಾಟಕ ರಾಜ್ಯದಲ್ಲಿ ಸೆಪ್ಟೆಂಬರ್ 29ರ ಮುಷ್ಕರ ಮತ್ತು ಪ್ರತಿಭಟನೆಗ
ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ (ಜೆಸಿಟಿಯು) ಜನಸಮ
ಸಂಬಂಧಿಸಿದ ಪ್ರಶ್ನೆಗಳ ಆಧಾರದಲ್ಲಿ 16 ಬೇಡಿಕೆಗಳನ್ನು ರೂಪಿಸಿ ನೀಡಿ
ಮಾಡಲು ರಾಜ್ಯದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ),
ಕರ್ನಾಟಕ, ಪ್ರಾಂತ ರೈತ ಸಂಘ ಅಲ್ಲದೆ 'ಕರ್ನಾಟಕ ರಾಜ್ಯ ರೈತ ಸಂಘ
ಎಪಿಎಂಸಿ ಜಂಟಿ ಕ್ರಿಯಾ ಸಮಿತಿ, ವಿವಿಧ ಧಾನ್ಯ ವರ್ತಕರ ಸಂಘಗಳು
ನಿಲುಗಡೆಗೆ ಕರೆ ನೀಡಿದ್ದವು. ರಾಜ್ಯಾದ್ಯಂತ ಹಲವಾರು ಪ್ರಮುಖ ಕೇಂ
ನಿಂತು ಪ್ರತಿಭಟನೆಗಳು ನಡೆದವು. ಲಕ್ಷಾಂತರ ಜನರು ಮುಷ್ಕರದಲ್ಲಿ
ಕೇಂದ್ರಗಳಲ್ಲಿ ನಡೆದ ಪ್ರತಿಭಟನಾ ರ್‍ಯಾಲಿ, ರಸ್ತೆತಡೆ ಕಾರ್ಯಕ್ರಮಗಳಲ್ಲಿ
ಕಾರ್ಮಿಕರು, ರೈತರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಭಾಗವ**

ಆಳುವ ಸರ್ಕಾರಗಳ

ಜನಸಾಮಾನ್ಯರು ತಮ್ಮ ಆಕ್ರೋಶಕ್ಕೆ ಅಭಿವ್ಯಕ್ತಿ ನೀಡಲು ಒಂದು ಅವಕಾಶಕ್ಕಾಗಿ ಕಾದಿದ್ದರು.

ವಿಶ್ವಸಂಸ್ಥೆಯ ವೇದಿಕೆಯಲ್ಲಿ ಇರಾನಿನ ವಿರುದ್ಧ ಮತ ಚಲಾಯಿಸಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕುರುಡು ಹಿಂಬಾಲಕನಾಗಿ ವರ್ತಿಸುವ ಮೂಲಕ ಭಾರತದ ಅಲಿಪ್ತ ನೀತಿಯನ್ನು ಕೈಬಿಡುವುದರೊಂದಿಗೆ ರಾಷ್ಟ್ರೀಯ ಹಿತವನ್ನು ಅಪಾಯಕ್ಕೆ ಗುರಿಪಡಿಸಿದ ಕೇಂದ್ರದ ಇತ್ತೀಚಿನ ಕ್ರಮವು ಜನರನ್ನು ಕೆರಳಿಸಿತ್ತು. ವಿದ್ಯುಚ್ಛಕ್ತಿಗೆ ಸಂಬಂಧಿಸಿ ಗ್ರಾಮಾಂತರ ಮತ್ತು ನಗರ ಎಂಬ ವಿಭಜನೆ ಸಲ್ಲದು ಎಂಬ ಬೇಡಿಕೆಯನ್ನೂ ಒಳಗೊಂಡ 16 ಬೇಡಿಕೆಗಳ ಆಧಾರದಲ್ಲಿ 29ರ ಮುಷ್ಕರಕ್ಕೆ ಅಂತಿಮ ಸಿದ್ಧತೆ ನಡೆಯುತ್ತಿದ್ದಾಗಲೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ದರ ನಿಗದಿಯಲ್ಲಿ ರಾಜ್ಯದ 6 ನಗರಗಳಿಗೆ ಹೆಚ್ಚಿನ ದರ ನಿಗದಿ ಮಾಡಿ ಗ್ರಾಮಾಂತರ ನಗರ ಭೇದಗಳನ್ನು ಆರಂಭಿಸುವ ಮೂಲಕ ಜನರ ಭಾವನೆಗಳ ಮೇಲೆ ಆಕ್ರಮಣ ಮಾಡಿತು. ರಾಜ್ಯ ಸರಕಾರದ ಅಸಮರ್ಥ ಆಡಳಿತದಿಂದಾಗಿ ರೈತರು, ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ಅತೃಪ್ತಿ ಕುದಿಯುತ್ತಿತ್ತು. ಚಿಲ್ಲರೆ ವ್ಯಾಪಾರವನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ತೆರೆದಿಡುವ ಸರಕಾರದ ನಿರ್ಧಾರದಿಂದಾಗಿ ವರ್ತಕ ಸಮುದಾಯ ಆಕ್ರೋಶಗೊಂಡಿತ್ತು. ವಿದೇಶಿ ವಿಮಾ ಕಂಪನಿಗಳ ಸ್ಪರ್ಧೆಯಿಂದಾಗಿ ದಾವೆಗಳ ಪ್ರಮಾಣ (claim ratio) ವಿಪರೀತ ಏರಿದ ಹಿನ್ನೆಲೆಯಲ್ಲಿ ಬಸ್ಸುಗಳಿಗೆ ವಿಮಾ ಸೌಲಭ್ಯ ಒದಗಿಸಲು ಸಾರ್ವಜನಿಕ ಕ್ಷೇತ್ರದ ವಿಮಾ ಕಂಪನಿಗಳು ನಿರಾಕರಿಸುತ್ತಿರುವುದರಿಂದ ಖಾಸಗಿ ಬಸ್ ಮಾಲಕರು ಆಕ್ರೋಶಗೊಂಡಿದ್ದರು.

ಈ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 29ರ ಮಹಾ ಪ್ರತಿಭಟನೆಯು ಕಾಲವೇ ಕೊಟ್ಟ ಕರೆಯಾಗಿತ್ತು.

ಜಿಲ್ಲೆಯ ಪ್ರಮುಖ ಸಾರಿಗೆ ವ್ಯವಸ್ಥೆಯಾದ ಖಾಸಗಿ ಬಸ್ಸುಗಳ ಓಡಾಟವು 29ರಂದು ಬೆಳಿಗ್ಗೆಯೇ ಸಂಪೂರ್ಣ ಸ್ಥಗಿತಗೊಂಡಿತ್ತು. ಹಿಂದಿನ ದಿನಗಳಲ್ಲಿ ಜೆಸಿಟಿಯು ಮೂಲಕ ಮತ್ತು ಸಿಪಿಐ(ಎಂ) ಮೂಲಕ ನಡೆದ ವ್ಯಾಪಕ ಪ್ರಚಾರಗಳಿಂದಾಗಿ 29ರಂದು ಜನರು ಬಸ್ ಇಲ್ಲವೆಂದು ಪರಿತಪಿಸುವ ಪ್ರಮೇಯವೇ ಇರಲಿಲ್ಲ. ಯಾಕೆಂದರೆ ಅಂದು ಜನರು ಹೊರಡಲೇ ಇಲ್ಲ. ಕೆಲವು ಕೆಎಸ್‌ಆರ್‌ಟಿಸಿ ಬಸ್ಸುಗಳು ಓಡಾಡಿದರೂ ಅವುಗಳಲ್ಲಿ ಪ್ರಯಾಣಿಕರಿರಲಿಲ್ಲ. ದಿನಾಲೂ ಕೋಟಿಗಟ್ಟಲೆ ರೂಪಾಯಿಗಳ ವ್ಯವಹಾರ ನಡೆಯುವ ಹಳೇ ಬಂದರು ಪೂರ್ತಿಯಾಗಿ ನಿರ್ಜನವಾಗಿತ್ತು. ನಗರದಲ್ಲಿ ಕೆಲವೇ ಕೆಲವು ಅಂಗಡಿಗಳು ಬೆಳಿಗ್ಗೆ ಬಾಗಿಲು ತೆರೆದರೂ, ಗಿರಾಕಿಗಳಿಲ್ಲದ್ದನ್ನು ನೋಡಿ ಬೇಗನೇ ಮುಚ್ಚಿದವು. ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲೂ ಖಾಸಗಿ ಬಸ್ಸು ಸಂಚಾರ ಸ್ಥಗಿತಗೊಂಡ ಕಾರಣ ಪೇಟೆಗಳು ಜನರಿಲ್ಲದೆ ಬಿಕೋ ಅನ್ನುತ್ತಿದ್ದವು.

ಕಾರ್ಮಿಕ ಸಂಘಗಳ ಜಂಟಿ ಸಮಿತಿಯ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರದರ್ಶನ ನಡೆಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಜಂಟಿ ಸಮಿತಿಯ ಸಂಚಾಲಕ ಬಿ.ಮಾಧವ, ಸಿಐಟಿಯು ಜಿಲ್ಲಾಧ್ಯಕ್ಷ ಕೆ.ಆರ್.ಶ್ರೀಯಾನ್, ಪ್ರಧಾನ ಕಾರ್ಯದರ್ಶಿ



ವಸಂತ ಆಚಾರಿ, ವಿಮಾನೌಕರರ ಮುಂದಾಳು ಎಚ್.ಕೆ.ರಾಘವೇಂದ್ರರಾವ್ ಮಾತನಾಡಿದರು. ತಮ್ಮ ತಮ್ಮ ಸಂಸ್ಥೆಗಳ ಮುಂದೆ ಸುದೀರ್ಘ ಪ್ರದರ್ಶನಗಳನ್ನು ನಡೆಸಿದ ಕಾರಣ ತಡವಾಗಿ ತಲುಪಿದ ಬಿಎಸ್‌ಎನ್‌ಎಲ್ ನೌಕರರರು ಅಂಚೆ ನೌಕರರು, ಮೆಡಿಕಲ್ ರೆಪ್ರೆಸೆಂಟೇಟಿವ್ಸ್ ಅಸೋಸಿಯೇಶನ್, ಅಖಿಲ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಸದಸ್ಯರು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನಡೆಸಿದ ಪ್ರದರ್ಶನಗಳನ್ನು ಉದ್ದೇಶಿಸಿ ಬಿ.ಮಾಧವ ಅವರು

Printed & Published by Communist Party of India(Marxist), Karnataka

...ೈತರ ಸಖ್ಯತೆಯೊಂದಿಗೆ ಬೃಹತ್ ಹೋರಾಟ

...ೃಲಿಗಲ್ಲಾಗಿ ದಾಖಲಾಗಲಿದೆ. ... ಬೆಂಬಲ ದೊರಕಿದೆ. ...ವಿಧ ವಿಭಾಗಗಳ ಬದುಕಿಗೆ ...ಷ್ಕರದ ಕರೆಯನ್ನು ಯಶಸ್ವಿ ...ಘಟಣಗಳು, ಸರ್ವೋದಯ ... ಬಣಗಳೊಂದಿಗೆ, ..., ಸಂಚಾರ, ವ್ಯಾಪಾರ ...ಪಾರ ವಹಿವಾಟುಗಳು ...ದ್ದರೆ. ಸುಮಾರು 200 ... ಸಂಖ್ಯೆಯಲ್ಲಿ ಜನರು, ...ದಿಗಳು ಬಂದಿವೆ.

ಎಚ್ಚರಿಕೆ

...ತನಾಡಿದರು. ಬ್ಯಾಂಕ್ ನೌಕರರು ...ಬ್ಯಾಂಕ್ ಆಫ್ ಇಂಡಿಯಾದ ಮುಂದೆ ...ಸಿದ ಬೃಹತ್ ಪ್ರದರ್ಶನವನ್ನು ...ದ್ದೇಶಿಸಿ ಪಿ.ಆರ್.ಕಾರಂತ, ...ಎಂ.ಮಾಧವ, ಟಿ.ಆರ್.ಭಟ್ ...ದಲಾದವರು ಮಾತನಾಡಿದರು.

...ಬ್ಯಾಂಕ್. ಎಲ್ಐಸಿ, ಅಂಚೆ, ...ಸ್‌ಎನ್‌ಎಲ್, ಔಷಧ ಮಾರಾಟ ...ನಿಧಿಗಳು, ಇಂಜಿನಿಯರಿಂಗ್, ಸಾರಿಗೆ, ...ಡಿ, ಹಂಚು, ಗೇರುಬೀಜ, ...ಟೋರಿಕ್ಷಾ, ಪಂಚಾಯತ್, ...ಗನವಾಡಿ, ಬಿಸಿಯೂಟ, ಕಟ್ಟಡ ...ರ್ಮಾಣ ಇತ್ಯಾದಿ ಕಾರ್ಮಿಕರು ...ಸ್ಫೂರ್ತಿದಾಯಕವಾಗಿ ಭಾಗವಹಿಸಿದ 29ರ ...ಮುಷ್ಕರಕ್ಕೆ ಪೂರಕವಾಗಿ ಡಿವೈಎಫ್ಐ, ...ಎಫ್ಐ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ ...ತ್ತು ರಾಜ್ಯ ರೈತ ಸಂಘದ ಕಾರ್ಯಕರ್ತರು ಅನೇಕ ...ಗಳಲ್ಲಿ ರಸ್ತೆ ತಡೆ ನಡೆಸಿದರು.

ಉಡುಪಿ

...ದುಡಿಯುವ ಎಲ್ಲಾ ವಿಭಾಗಗಳ ಬೇಡಿಕೆಗಳನ್ನು ಒತ್ತಾಯಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ಹಾಗೂ ಜನಸಾಮಾನ್ಯರ ವಿರೋಧಿ ನೀತಿಯನ್ನು ಬದಲಾಯಿಸಲು ಒತ್ತಾಯಿಸಿ, ಸಪ್ಟೆಂಬರ್ 29ರಂದು ನಡೆದ "ಸಾರ್ವತ್ರಿಕ ಮುಷ್ಕರ"ಕ್ಕೆ ಎಲ್ಲಾ ವಿಭಾಗದ ಜನರು ಬೆಂಬಲ ನೀಡಿದ ಕಾರಣ ಉಡುಪಿ ಜಿಲ್ಲೆ "ಬಂದ್"ಆಗಿ ಪರಿವರ್ತನೆಗೊಂಡಿತು. ಉಡುಪಿ ಜಿಲ್ಲಾದ್ಯಂತ ವಿದ್ಯಾರ್ಥಿಗಳು 'ತರಗತಿ ಬಹಿಷ್ಕಾರ' ಮಾಡಿ ಶಾಲೆ ಮತ್ತು ಕಾಲೇಜುಗಳು ಬಂದ್ ಆದವು.

...ಜಿಲ್ಲೆಯ ಹಂಚು ಕಾರ್ಮಿಕರು, ಬೀಡಿ ...ರ್ಮಿಕರು, ಗೋಡಂಬಿ ಕಾರ್ಮಿಕರು, ...ಟೋರಿಕ್ಷಾ ಚಾಲಕರು, ಬ್ಯಾಂಕ್ ಮತ್ತು ...ಲ್.ಐ.ಸಿ. ನೌಕರರು, ಬಸ್ ನೌಕರರು, ...ಗನವಾಡಿ ಕಾರ್ಯಕರ್ತೆಯರು, ಕಟ್ಟಡ ...ರ್ಮಿಕರು, ಸಾಣೆಕಲ್ಲು ಕಾರ್ಮಿಕರು, ...ರದಾಸೋಹ ಮತ್ತು ಬಿ.ಎಸ್.ಎನ್.ಎಲ್. ...ರ್ಮಿಕರು ಮುಷ್ಕರದಲ್ಲಿ ಪಾಲುಗೊಂಡಿರುತ್ತಾರೆ. ...ದ ಒಂದು ವಾರದಿಂದ ನಿರಂತರ ಪ್ರಚಾರ ಮಾಡಿ ...ರ್ವತ್ರಿಕ ಮುಷ್ಕರವನ್ನು ಬೆಂಬಲಿಸಬೇಕು ಎಂದು ವಿನಂತಿಸಿಕೊಂಡಂತೆ ವ್ಯಾಪಾರಸ್ಥರು, ಬಸ್ ಮಾಲಕರು, ಹೋಟೆಲ್ ಮಾಲಕರು, ಟ್ಯಾಕ್ಸಿ ಮತ್ತು ಕಾರು ಚಾಲಕರು ಹಾಗೂ ಎಲ್ಲಾ ವಿಭಾಗದ ಜನರು ಸ್ವಯಂ ಇಚ್ಛೆಯಿಂದ ಜನಜೀವನ ಸ್ಥಗಿತಗೊಳಿಸಿರುತ್ತಾರೆ. ರೈತರು, ಯುವಜನರು, ವಿದ್ಯಾರ್ಥಿಗಳು, ಸಾರಿಗೆ ಸಂಸ್ಥೆ ಮತ್ತು ವಾಣಿಜ್ಯ ಸಂಸ್ತೆಗಳ ನೌಕರರು ಬೆಂಬಲಿಸಿರುತ್ತಾರೆ.

ಎಲ್ಲಾ ವಿಭಾಗದ ಜನತೆಯೂ ಕೇಂದ್ರದ ಯು.ಪಿ.ಎ. ಸರಕಾರದ ವಿದೇಶಿ ಹಾಗೂ ದೇಶಿ ದೊಡ್ಡ ಬಂಡವಾಳಗಾರರ ಪರ, ಜನವಿರೋಧಿ ನೀತಿಗಳ ವಿರುದ್ಧ ಅದೇ ಹಾದಿಯನ್ನು ತುಳಿಯುತ್ತಿರುವ ಕರ್ನಾಟಕ ಸಮ್ಮಿಶ್ರ ಸರಕಾರದ ನೀತಿಗಳ ವಿರುದ್ಧ, ತಮ್ಮ ಅತೃಪ್ತಿಯನ್ನು ಎತ್ತಿ ತೋರಿಸಿದ್ದಾರೆ. ಕಾರ್ಮಿಕರು, ರೈತರು, ದಲಿತರು, ಹಿಂದುಳಿದವರು, ಯುವಕರು, ವಿದ್ಯಾರ್ಥಿಗಳು, ಮಹಳೆಯರು, ವರ್ತಕರು ಇಂದು ಚಳುವಳಿಗೆ ಧುಮುಕಲು ಆರಂಭಿಸಿರುತ್ತಾರೆ. ಜಿಲ್ಲೆಯ ಹೆಚ್ಚಿನ ಪ್ರದೇಶಗಳಲ್ಲಿ ಕೆಲಸ, ಸಂಚಾರ, ವ್ಯಾಪಾರ ನಿಲ್ಲಿಸಿ, ಜನರು ಪ್ರತಿಭಟಿಸಲು ಮುಂದಾಗಿರುತ್ತಾರೆ.

ಉಡುಪಿ ಜಿಲ್ಲೆಯ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ನೇತೃತ್ವದಲ್ಲಿ ಜಿಲ್ಲಾದ್ಯಂತ ಪ್ರಚಾರ ನಡೆದು, ಮನೆ, ಅಂಗಡಿ, ಹೊಟೇಲು, ಸಾರಿಗೆ ಸಂಸ್ಥೆಗಳಿಗೆ ಕರಪತ್ರ ಹಂಚುವುದರೊಂದಿಗೆ, ಕಾರಿನಲ್ಲಿ ಮೈಕ್ ಕಟ್ಟಿ ಮುಖ್ಯ ಪ್ರದೇಶಗಳಲ್ಲಿ ಪ್ರಚಾರ ಮಾಡಿ, ಎಲ್ಲಾ ವಿಭಾಗದವರ ಬೆಂಬಲ ಕೋರಲಾಗಿತ್ತು.



ಮಂಗಳೂರು ಬಂದ್

ಸಪ್ಟೆಂಬರ್ 29ರಂದು ಬೆಳಿಗ್ಗೆ ಸುಮಾರು 10 ಗಂಟೆಗೆ ಸರಿಯಾಗಿ ಉಡುಪಿಯ ಎಲ್.ಐ.ಸಿ.ಯ ಪ್ರಾದೇಶಿಕ ಕಛೇರಿಯಿಂದ ವಿವಿಧ ಸಂಘಟನೆಗಳು ಭಗವಹಿಸಿದ್ದ ಮೆರವಣಿಗೆ ಹೊರಟು, ಕಾರ್ಪೊರೇಶನ್ ಬ್ಯಾಂಕ್‌ನ ಆವರಣದಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು.

ಜಂಟಿ ಸಮಿತಿಯ ಸಂಚಾಲಕರಾದ ಶ್ರೀ ಡೆರಿಕ್ ರೆಬೆಲ್ಲೊ, ಸಿ.ಐ.ಟಿ.ಯು.ವಿ.ನ ಜಿಲ್ಲಾ ಕಾರ್ಯದರ್ಶಿಯರಾದ ಪಿ.ವಿಶ್ವನಾಥ ರೈ, ಬ್ಯಾಂಕ್ ನೌಕರರ ಸಂಘದ ಯು.ಶಿವರಾಮ ಇವರು ಸಭೆಯನ್ನುದ್ದೇಶಿಸಿ, ಭಾಷಣ ಮಾಡಿದರು. ಮೆರವಣಿಗೆಯ ನೇತೃತ್ವವನ್ನು ಶ್ರೀ ಅದಮಾರು ಶ್ರೀಪತಿ ಆಚಾರ್ಯ, ಪ್ರಭಾಕರ, ದಿವಾಕರ ಎಂ. ಸಾಲ್ಯಾನ್, ಗುರುದತ್, ಸಾಧು ಅಮೀನ್ ಮತ್ತು ಕೃಷ್ಣ ಅಮೀನ್‌ರವರು ವಹಿಸಿದರು. ಸುಮಾರು 400 ಮಂದಿ ಮೆರವಣಿಗೆಯಲ್ಲಿ ಪಾಲುಗೊಂಡಿರುತ್ತಾರೆ.

ಉಡುಪಿಯ ಅಂಬಾಗಿಲಿನಲ್ಲಿ ಸುಮಾರು 200 ಮಂದಿ ರಸ್ತೆ ತಡೆ ಕಾರ್ಯಕ್ರಮ ನಡೆಸಿರುತ್ತಾರೆ. ಹಂಚು ಮತ್ತು ಬೀಡಿ ಕಾರ್ಮಿಕರು ಭಾಗವಹಿಸಿರುತ್ತಾರೆ. ಕಾಂ. ಡೇವಿಡ್ ಎ.ಕರ್ಕಡ, ಸಂಜೀವ ನಾಯ್ಕ, ಸತೀಶ್ ಶೆಟ್ಟಿಯವರು ನೇತೃತ್ವ ನೀಡಿರುತ್ತಾರೆ.

ಬ್ರಹ್ಮಾವರದಲ್ಲಿ ಆಟೋರಿಕ್ಷಾ ಚಾಲಕರು, ಬೀಡಿ ಕಾರ್ಮಿಕರು, ಬಡ ರೈತ ಕೃಷಿ ಕೂಲಿಗಾರರು ರಸ್ತೆ



ಗುಲ್ಬರ್ಗಾ...

ತಡೆ ಮಾಡಿದರು. ಸುಮಾರು 200 ಮಂದಿ ಭಗವಹಿಸಿರುತ್ತಾರೆ. ಕಾಂ. ಎಚ್.ವಿಠ್ಠಲ್, ಗೊಡ್ವಿನ್ ಫೆರ್ನಾಂಡಿಸ್ ಮತ್ತು ಸದಾಶಿವ ಪೂಜಾರಿಯವರು ನೇತೃತ್ವ ವಹಿಸಿರುತ್ತಾರೆ.

ಸಾಸ್ತಾನದಲ್ಲಿ ಸುಮಾರು 75 ಮಂದಿ ಸಾಣೆಕಲ್ಲು ಕಾರ್ಮಿಕರು, ಆಟೋರಿಕ್ಷಾ ಚಾಲಕರು ರಸ್ತೆ ತಡೆ ಮಾಡಿರುತ್ತಾರೆ. ಕಾಂ. ಬಾಬು ಮತ್ತು ನರಸಿಂಹನವರು ನೇತೃತ್ವ ವಹಿಸಿದರು.

ಉಡುಪಿಯ ಕೊಡವೂರಿನಲ್ಲಿ ಸುಮಾರು 150 ಮಂದಿ ರಸ್ತೆ ತಡೆ ಮಾಡಿರುತ್ತಾರೆ. ಕಾಂ. ದೋಗು ಸುವರ್ಣ, ಕೃಷ್ಣ ಅಮೀನ್ ಮತ್ತು ಉಮೇಶ್ ಕುಂದರ್‌ರವರು ನೇತೃತ್ವ ವಹಿಸಿರುತ್ತಾರೆ. ಬೀಡಿ ಕಾರ್ಮಿಕರು, ಬಡರೈತ ಕೃಷಿಕೂಲಿಗಾರರು ಭಾಗವಹಿಸಿರುತ್ತಾರೆ.

ಕುಂದಾಪುರದಲ್ಲಿ ಎಲ್ಲಾ ವ್ಯವಹಾರವೂ ಸ್ಥಗಿತವಾಗಿತ್ತು. ಸುಮಾರು 1000ಕ್ಕೂ ಮಿಕ್ಕಿ ಕಾರ್ಯಕರ್ತರ ಬೃಹತ್ ಮೆರವಣಿಗೆ ಶಾಸ್ತ್ರಿ ಸರ್ಕಲಿನಿಂದ ಬೆಳಿಗ್ಗೆ 9 ಗಂಟೆಗೆ ಹೊರಟಿತು, ಬಳಿಕ ಅಲ್ಲಲ್ಲಿ ಸ್ಥಳೀಯ ಯುವಕರು, ವಿದ್ಯಾರ್ಥಿಗಳು ಸೇರಿಕೊಂಡರು, ಕೆಲವು ಸರಕಾರಿ ಬಸ್ಸುಗಳು ಹಾಗೂ ಲಾರಿಗಳು ಬರುವುದ್ನು ರಸ್ತೆಯಲ್ಲಿ ತಡೆದು ನಿಲ್ಲಿಸಲಾಯಿತು. ರಸ್ತೆ ತಡೆ ಕರ್ಯಕ್ರಮ ನಡೆದ ಬಳಿಕೆ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕಾಂ. ಕೆ.ಶಂಕರ್‌ರವರು ಮಾತನಾಡಿ "ಸಾರ್ವತ್ರಿಕ ಮುಷ್ಕರ" ಯಶಸ್ವಿಗೊಳಿಸಲು ಸಹಕರಿಸಿದ ಎಲ್ಲಾ ವಿಭಾಗಗಳ ಜನರನ್ನು ಅಭಿನಂದಿಸಿದರು.


ತಲ್ಲೂರಿನಲ್ಲಿ ಸುಮಾರು 500 ಮಂದಿ ಹಂಚು ಕಾರ್ಮಿಕರು ಹಾಗೂ ಸ್ಥಳೀಯ ಆಟೋರಿಕ್ಷಾ ಚಾಲಕರು ಹಾಗೂ ಯುವಕ ವಿದ್ಯಾರ್ಥಿಗಳು ರಸ್ತೆ ತಡೆ ಕಾರ್ಯಕ್ರಮದಲ್ಲಿ ಪಾಲುಗೊಂಡರು. ಕಾಂ. ಮುತ್ತಯ್ಯ ಕನ್ನಾನ ರಾಜೀವ ಶೆಟ್ಟಿ, ನಾರಾಯಣ, ಡಿ.ಲಕ್ಷ್ಮಣ ಮುಂತಾದವರು ನೇತೃತ್ವ ವಹಿಸಿದರು.

ನೇರಳಕಟ್ಟೆಯಲ್ಲಿ ಸುಮಾರು 300 ಮಂದಿ ಹಂಚು ಕಾರ್ಮಿಕರು ಹಾಗೂ ಬಡ ರೈತ ಕೃಷಿ ಕೂಲಿಗಾರರು ರಸ್ತೆ ತಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾಂ. ಜೆ.ಬಿ.ಮಹ್ಮದ್, ಶೇಖರ ಮರಕಾಲ, ಪ್ರಭಾಕರ, ಮೂಡೂರ, ಸಂಜು ಮತ್ತು ಅಣ್ಣಪ್ಪ ಶೇರೆಗಾರ್‌ರವರು ನೇತೃತ್ವ ವಹಿಸಿದರು.

ಕೋಣೆಯಲ್ಲಿ ಸುಮಾರು 100 ಮಂದಿ ಬಡ ರೈತ ಕೃಷಿ ಕೂಲಿಗಾರರು, ಹಂಚು ಕಾರ್ಮಿಕರು ಹಾಗೂ ಸ್ಥಳೀಯ ಯುವಕರು ಸೇರಿ ರಸ್ತೆ ತಡೆ ನಡೆಸಿದರು. ಕಾಂ.ಯು.ದಾಸ ಭಂಡಾರಿ, ರಾಮ, ಚಂದ್ರ, ಶಿವರಾಮ ದೇವಾಡಿಗ ಮತ್ತು ಸತೀಶ್ ನೇತೃತ್ವ ವಹಿಸಿದರು.

ಬಸ್ರೂರಿನಲ್ಲಿ ಸುಮಾರು 150 ಮಂದಿ ಹಂಚು ಕಾರ್ಮಿಕರು, ಬಡ ರೈತ ಕೃಷಿ ಕೂಲಿಗಾರರು ರಸ್ತೆ ತಡೆ ಮಾಡಿದರು. ಕಾಂ. ಗೋಪಾಲ ಶೆಟ್ಟಿಗಾರರು, ಎಸ್.ಎ.ನಾಯಕ್, ಭೋಜ ಮತ್ತು ಮಾಲಿಂಗನವರು ನೇತೃತ್ವ ವಹಿಸಿದರು.

ಕಂಡ್ಲೂರಿನಲ್ಲಿ ಸುಮಾರು 150 ಮಂದಿ ಹಂಚು ಕಾರ್ಮಿಕರು ರಸ್ತೆ ತಡೆ ನಡೆಸಿದರು. ಕಾಂ. ಜಯಂತ, ರಾಮ ಹಾಗೂ ಇತರರು ನೇತೃತ್ವ ನೀಡಿದರು.



ಹಾರದ ವಿಮಾನ

ನೆಲ್ಲಿಕಟ್ಟೆಯಲ್ಲಿ ಹಂಚು ಕಾರ್ಮಿಕರು, ಬಡ-ಕೃಷಿ ಕಾರ್ಮಿಕರು ಸುಮಾರು 200 ಮಂದಿ ರಸ್ತೆ ತಡೆ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ಕಾಂ. ಶೀನ ಮರಕಾಲ, ದೋಗು ಕುಲಾಲ, ರಾಘವೇಂದ್ರ ಮತ್ತು ಸಂತೋಷ ಇತರರು ನೇತೃತ್ವ ವಹಿಸಿದರು.

ಗಂಗೊಳ್ಳಿಯಲ್ಲಿ ಸುಮಾರು 200 ಮಂದಿ ಹಂಚು ಕಾರ್ಮಿಕರು ಮತ್ತು ಮೀನು ಕಾರ್ಮಿಕರು ರಸ್ತೆ ತಡೆ ಕಾರ್ಯಕ್ರಮ ನಡೆಸಿದರು. ಲಕ್ಷ್ಮಣ,

ಪುಟ 8 ಕ್ಕೆ



ಮೈಸೂರು...



ಪುಟ 7 ರಿಂದ

ಮಹಾಬಲ ಮತ್ತು ಶೇಖರರವರು ನೇತೃತ್ವ ವಹಿಸಿದರು.

ಮೈಸೂರು

ಸಿಐಟಿಯು ಎಐಟಿಯುಸಿ, ಬ್ಯಾಂಕ್, ವಿಮಾ, ರಾಜ್ಯಸರಕಾರಿ ನೌಕರರ ಸಂಘಟನೆಗಳ ಕರೆಯ ಮೇರೆಗೆ ಎಲ್ಲಾ ಕಡೆ ಮುಷ್ಕರ ನಡೆದಿದ್ದು, ಬೆಳಗ್ಗಿನಿಂದಲೇ ಅಲ್ಲಲ್ಲಿ ಮೆರವಣಿಗೆಗಳು ನಡೆದವು. ಮುಷ್ಕರನಿರತರು ಮಾಡಿದ ಮನವಿಯ ಮೇರೆಗೆ ವ್ಯಾಪಾರ ವಹಿವಾಟುಗಳು ಸ್ಥಗಿತಗೊಂಡವು. ಮಧ್ಯಾಹ್ನದವರೆಗೂ ಬಸ್ಸು ಮತ್ತಿತರ ವಾಹನಗಳು ಚಲಿಸಲಿಲ್ಲ. ನಂತರ ಪುರಭವನದಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ 3000ಕ್ಕೂ ಹೆಚ್ಚು ಕಾರ್ಮಿಕರು, ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷ ಕಾಂ. ಜಯರಾಂ, ಎಐಟಿಯುಸಿ ಮುಖಂಡರಾದ ಹೆಚ್.ಆರ್.ಶೇಷಾದ್ರಿ, ರಾಜ್ಯ ಸರ್ಕಾರಿ ನೌಕರರ ಒಕ್ಕೂಟದಿಂದ ವೆಂಕಟೇಶ್, ಬಿಎಸ್‌ಎನ್ ಎಲ್ ನಿಂದ ಸುಬ್ರಮಣ್ಯ, ಮತ್ತಿತರರು ಮುಖಂಡರು



ಮಾತನಾಡಿದರು.

ಹೊಸದಾಗಿ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿರುವ ನಂಜನಗೂಡಿನಲ್ಲಿ 2000ಕ್ಕೂ ಹೆಚ್ಚು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು. ವ್ಯಾಪಾರ ವಹಿವಾಟುಗಳು ನಿಲ್ಲಿಸಿದ್ದು, ಬಸ್, ವಾಹನಗಳು ಸಂಚರಿಸಲಿಲ್ಲ. ಕೈಗಾರಿಕಾ ಕಾರ್ಮಿಕರ ಜತೆಯಲ್ಲಿ ಅಂಗನವಾಡಿ, ಬಿಸಿಯೂಟ ಕಾರ್ಮಿಕರೂ ಸೇರಿದ್ದರು.

ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಮಾಡಿದ ಮನವಿಯ ಮೇರೆಗೆ ಹೆಗ್ಗಡದೇವನಕೋಟೆಯ ವ್ಯಾಪಾರಸ್ಥರು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳವನ್ನು ವಿರೋಧಿಸಿ, ಅಂಗಡಿ ಮುಂಗಟ್ಟುಗಳನ್ನು ಮುಚ್ಚಿದರು.

ರಾಜ್ಯಾದ್ಯಂತ ಬೃಹತ್ ಹೋರಾಟ

ಗುಲ್ಬರ್ಗಾ

ವಿವಿಧ ಕಾರ್ಮಿಕ, ನೌಕರ ಸಂಘಟನೆಗಳಲ್ಲದೆ ಸಿಪಿಐ(ಎಂ) ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ರಾಜ್ಯ ರೈತ ಸಂಘ, ದಲಿತ ಸೇನೆ ಮತ್ತಿತರರು ಸೇರಿ ನಡೆಸಿದ ಪ್ರತಿಭಟನೆಯು ಜಿಲ್ಲೆಯಾದ್ಯಂತ ವ್ಯಾಪಕವಾಗಿದ್ದು, ವ್ಯಾಪಾರಿ ಸಂಘಟನೆಗಳು ಸಹ ತಮ್ಮ ವ್ಯಾಪಾರವನ್ನು ನಿಲ್ಲಿಸಿ ಪ್ರತಿಭಟನೆಗೆ ಬೆಂಬಲಿಸಿದರು. ರೈತರು ನಡೆಸಿದ ವ್ಯಾಪಕ ರಸ್ತೆ ತಡೆಯ ಪರಿಣಾಮವಾಗಿ ಜಿಲ್ಲೆಯಾದ್ಯಂತ ಹೆಚ್ಚಿನ ಕಡೆಗಳಲ್ಲೂ ಬಸ್ ಮತ್ತಿತರ ವಾಹನಗಳು ಸಂಚರಿಸಲಿಲ್ಲ. ಗುಲ್ಬರ್ಗಾದಲ್ಲಿ ನಡೆದ ಪ್ರತಿಭಟನಾ ರ್‍ಯಾಲಿನಲ್ಲಿ 3500ಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಕೆ.ನೀಲಾ, ಸಿಪಿಐನ ರಾಜ್ಯ ಕಾರ್ಯದರ್ಶಿ ಸಿದ್ದನಗೌಡ ಪಾಟೀಲ್ ಮೊದಲಾದವರು ಮಾತನಾಡಿದ್ದು, ಕೇಂದ್ರ ಸರಕಾರದ ಜನವಿರೋಧಿ ನೀತಿಯ ವಿರುದ್ಧ ಪ್ರತಿಭಟನೆಯನ್ನು ತೀವ್ರಗೊಳಿಸಬೇಕೆಂದು ಕರೆ ನೀಡಿದರು. ಪ್ರತಿಭಟನಾಕಾರರಲ್ಲಿ ಮಹಿಳೆಯರು ಬಹುದೊಡ್ಡ ಸಂಖ್ಯೆಯಲ್ಲಿದ್ದದ್ದು ವಿಶೇಷವಾಗಿತ್ತು.

ಜಿಲ್ಲೆಯ ಚಿಂಚೋಳಿ, ಶಾಪುರ, ಯಾದಗೀರ್, ಸುರುಪುರ, ಅಪಜಲಪುರ ಮತ್ತಿತರ ತಾಲ್ಲೂಕುಗಳಲ್ಲಿ ಕರ್ನಾಟಕ ಪ್ರಾಂತ ರೈತಸಂಘ ಮತ್ತಿತರ ಸಂಘಟನಗಳ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದಿದ್ದು ವ್ಯಾಪಾರ ವಹಿವಾಟು ನಡೆಯಲಿಲ್ಲ. ಸಂಚಾರ ಸ್ತಗಿತಗೊಂಡಿತ್ತು.

ಬ್ಯಾಂಕ್, ಗ್ರಾಮೀಣ ಬ್ಯಾಂಕ್ ವಿಮೆ, ರಾಜ್ಯಸರಕಾರಿ ನೌಕರರು, ಅಂಚೆ ನೌಕರರು ಬಹುತೇಕ ಮುಷ್ಕರದಲ್ಲಿ ಭಾಗವಹಿಸಿದ್ದರು.

ಕೋಲಾರ

ಹೆಚ್ಚು ಕಡಿಮೆ ಜಿಲ್ಲೆಯಾದ್ಯಂತ ಅಂಗಡಿ, ಮುಂಗಟ್ಟುಗಳು ತೆರೆಯಲಿಲ್ಲ. ವಿದ್ಯಾರ್ಥಿಗಳು ಶಾಲಾ, ಕಾಲೇಜುಗಳನ್ನು ಬಹಿಷ್ಕರಿಸಿದರು. ಬಸ್ಸು, ವಾಹನ ಸಂಚಾರಗಳು ವಿರಳವಾಗಿದ್ದವು. ಸಿಪಿಐ(ಎಂ) ಕರ್ನಾಟಕ ಪ್ರಾಂತ ರೈತ ಸಂಘ, ಸಿಐಟಿಯು ಮತ್ತಿತರ ಸಂಘಟನೆಗಳು ನೀಡಿದ ಮುಷ್ಕರ ಹಾಗೂ ಪ್ರತಿಭಟನೆಯ ಕರೆಗೆ ಜಿಲ್ಲೆಯಾದ್ಯಂತ ವ್ಯಾಪಕ ಬೆಂಬಲ ದೊರೆತಿದೆ.

ಕೋಲಾರದಲ್ಲಿ ನಡೆದ ಪ್ರತಿಭಟನೆಯಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್, ಸಿಐಟಿಯು, ಗ್ರಾಮಪಂಚಾಯ್ತಿ ಅಂಗನವಾಡಿ, ಬಿಸಿಯೂಟ, ರೈತಸಂಘಗಳ ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದಾರೆ. ಗೌರಿಬಿದನೂರಿನಲ್ಲಿ 1000 ಜನರ ಪ್ರತಿಭಟನೆ ಬಂದ್ ನಡೆದಿದೆ. ಬಾಗೇಪಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಹ ಬಂದ್ ಸಂಪೂರ್ಣವಾಗಿತ್ತು.

ಚಿಂತಾಮಣಿಯಲ್ಲಿ 25 ಹಾಗೂ ಕೋಲಾರದಲ್ಲಿ ಇಬ್ಬರನ್ನು ಬಂಧಿಸಲಾಗಿದ್ದು, ನಂತರ ಬಿಡುಗಡೆ ಮಾಡಲಾಗಿದೆ. 200-300 ಜನರ ಮೆರವಣಿಗೆ ನಡೆದಿದೆ. ವ್ಯಾಪಾರ ಸಂಚಾರ ಬಂದ್ ಆಗಿದೆ.

ಬ್ಯಾಂಕು, ವಿಮಾನೌಕರ ಸಂಘಟನೆಗಳು ನೀಡಿದ ಮುಷ್ಕರದ ಕರೆ ಸಂಪೂರ್ಣ ಯಶಸ್ವಿಯಾಗಿದ್ದು, ಸರಕಾರಿ ನೌಕರರ ಸಂಘದವರು ಮುಷ್ಕರ ವಿಫಲಗೊಳಿಸಲು ನಡೆಸಿದ ಸಂಚಿನ ನಡುವೆಯೂ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಕರೆಯ ಮೇರೆಗೆ ಸರಕಾರಿ ನೌಕರರು ಮುಷ್ಕರದಲ್ಲಿ



ಭಾಗವಹಿಸಿದ್ದರು. ಕೆ.ಜಿ.ಎಫ್‌ನಲ್ಲಿರುವ ಸಾರ್ವಜನಿಕ ಉದ್ದಿಮೆ ಬಿಇಎಂಎಲ್, ಗ್ರಾಮ ಪಂಚಾಯತಿ ನೌಕರರು, ಅಂಗನವಾಡಿ ಮತ್ತು ಬಿಸಿಯೂಟ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದ್ದರು.

ಬಾಗೇಪಲ್ಲಿಯಲ್ಲಿ 600 ಜನರ ಪ್ರತಿಭಟನಾ ಸಭೆ ನಡೆದಿದ್ದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರು ಮತ್ತು ರಾಜ್ಯಸಮಿತಿ ಸದಸ್ಯ ವೆಂಕಟಸ್ವಾಮಿ ರೆಡ್ಡಿಯವರು ನೇತೃತ್ವ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯ ಹಾಗೂ ರೈತ ಸಂಘದ ಮುಖಂಡ ಕೆ.ಎಂ.ವೆಂಕಟೇಶ್, ಶಿಡ್ಲಘಟ್ಟದಲ್ಲಿ, ಪ್ರತಿಭಟನೆ, ರಸ್ತೆ ತಡೆ ನಡೆದಿದೆ. ಚಿಕ್ಕಬಳ್ಳಾಪುರದಲ್ಲಿ ಗ್ರಾಮ ಪಂಚಾಯ್ತಿ, ಬಿಸಿಯೂಟದ ಹಾಗೂ ಎಸ್‌ಎಫ್‌ಐ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಗುಡಿಬಂಡೆಯಲ್ಲಿ ಬಂದ್ ಯಶಸ್ವಿಯಾಗಿದ್ದು 500 ಜನರ ಪ್ರತಿಭಟನೆ ನಡೆದಿದೆ.

ತುಮಕೂರು

ತುಮಕೂರಿನಲ್ಲಿ ಜಿಲ್ಲೆಯಾದ್ಯಂತ ವ್ಯಾಪಕವಾದ ಪ್ರತಿಭಟನೆಗಳು ನಡೆದಿವೆ. ತುಮಕೂರು ನಗರ ಒಂದರಲ್ಲೇ 5 ಕೇಂದ್ರಗಳಲ್ಲಿ ರಸ್ತೆ ತಡೆಗಳು ನಡೆದಿದ್ದು ಸಾಧಾರಣ ಮೂರು ಸಾವಿರ ಕಾರ್ಯಕರ್ತರು ಭಾಗವಹಿಸಿದ್ದರು ಎಂದು ವರದಿಯಾಗಿದ್ದು ಸಿಐಟಿಯುಗೆ ಸೇರಿದ ಬೀಡಿ, ಮುನಿಸಿಪಲ್ ನೌಕರರು, ಅಂಗನವಾಡಿ, ಪಂಚಾಯತಿ ನೌಕರರಲ್ಲದೆ ಬ್ಯಾಂಕ್, ವಿಮೆ ರಾಜ್ಯ ಮತ್ತು ಕೇಂದ್ರ ಸರಕಾರಿ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು. ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ನಿಲ್ಲಿಸಿದುದು ಮಾತ್ರವಲ್ಲದೆ, ಬಸ್ ಸಂಚಾರ ಸ್ಥಗಿತಗೊಂಡಿತು.

ತುಮಕೂರು ಮಾತ್ರವಲ್ಲದೆ, ಕೊಂಟಗೆರೆ, ತಿಪಟೂರುಗಳಲ್ಲಿಯೂ ವ್ಯಾಪಕ ಬೆಂಬಲ ದೊರೆತಿದ್ದು ಬಂದ್‌ನ ವಾತಾವರಣ ನೆಲೆಸಿತ್ತು. ಚಿಲ್ಲರೆ ವ್ಯಾಪಾರಸ್ಥರೂ ಸಹ ತಮ್ಮ ವಹಿವಾಟುಗಳನ್ನು ನಿಲ್ಲಿಸಿದ್ದರು. ತಿಪಟೂರಿನ ಕೊಬ್ಬರಿ ಮಾರುಕಟ್ಟೆಯಲ್ಲಿ ಹೊಸದಾಗಿ ಸಂಘಟಿತವಾಗುತ್ತಿರುವ 2000ಕ್ಕೂ ಹೆಚ್ಚು ಹಮಾಲಿ ಕಾರ್ಮಿಕರು, ಹಾಗೂ ಈಗಾಗಲೇ ಸಂಘಟಿತರಾಗಿರುವ ಪಂಚಾಯತಿ, ಅಂಗನವಾಡಿ, ಬಿಸಿಯೂಟ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು. ಕುಣಿಗಲ್, ಸಿರಾಗಳಲ್ಲಿ ಬೀಡಿಕಾರ್ಮಿಕರು ಮುಷ್ಕರದ ನೇತೃತ್ವ ವಹಿಸಿದ್ದರೆ, ತುರುವೆಕೆರೆ, ಮಧುಗಿರಿಗಳಲ್ಲೂ ಪ್ರತಿಭಟನೆಗಳು ನಡೆದಿವೆ.


ಕರ್ನಾಟಕ ಪ್ರಾಂತರೈತ ಸಂಘ, ರಾಜ್ಯರೈತಸಂಘದವರೂ ರಸ್ತೆತಡೆ ಕಾರ್ಯಕ್ರಮಗಳಲ್ಲಿ ಸೇರಿದ್ದು, ಜಿಲ್ಲೆಯ 10 ತಾಲ್ಲೂಕುಗಳ ಪೈಕಿ 9 ತಾಲ್ಲೂಕುಗಳಲ್ಲಿ ವಿವಿಧ ರೀತಿಯ ಪ್ರತಿಭಟನೆಗಳು ನಡೆದಿವೆ. ಜಿಲ್ಲೆಯಾದ್ಯಂತ ಒಟ್ಟು 10,000ಕ್ಕೂ ಹೆಚ್ಚು ಮಂದಿ ರಸ್ತೆ ತಡೆ, ರ್‍ಯಾಲಿ ಮೆರವಣಿಗೆ ಮೊದಲಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯ ಹಾಗೂ ತುಮಕೂರು ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್, ಕರ್ನಾಟಕ ಪ್ರಾಂತ ರೈತಸಂಘದ ಮುಖಂಡ ಬಿ.ಉಮೇಶ್, ಡಿವೈಎಫ್‌ಐನ ಸುಬ್ಬಣ್ಣ, ಎಐಟಿಯುಸಿನ ಶಿವಣ್ಣ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬಿಜಾಪುರ

ಕರ್ನಾಟಕ ಪ್ರಾಂತರೈತ ಸಂಘ ಮತ್ತು ವಿವಿಧ ಕಾರ್ಮಿಕ ನೌಕರರ ಸಂಘಟನೆಗಳ ನೇತೃತ್ವದಲ್ಲಿ 3000 ಕ್ಕೂ ಹೆಚ್ಚು ಜನರ ಬೃಹತ್ ಪ್ರತಿಭಟನೆ ನಡೆಯಿತು. ಸಿಪಿಐ(ಎಂ)ನ ರಾಜ್ಯಸಮಿತಿ ಸದಸ್ಯ ಭೀಮಸಿ ಕಲಾದಗಿ ಮತ್ತಿತರರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಜಿಲ್ಲೆಯ ಸಿಂಧಗಿ, ಮೊರಟಗಿ, ಬಸವನಬಾಗೇವಾಡಿ, ಇಂಡಿ, ಮುತ್ತಿಗಿ ಕ್ರಾಸ್ ಮೊದಲಾದ ಕೇಂದ್ರಗಳಲ್ಲಿ ಕರ್ನಾಟಕ ಪ್ರಾಂತರೈತ ಸಂಘ, ಡಿವೈಎಫ್‌ಐ, ಎಸ್‌ಎಫ್‌ಐ ಗ್ರಾಮ ಪಂಚಾಯತಿ ನೌಕರರ ನೇತೃತ್ವದಲ್ಲಿ ರಸ್ತೆ ತಡೆ ನಡೆದಿದ್ದು 2000 ಹೆಚ್ಚು ಜನರು ಭಾಗವಹಿಸಿದ್ದರು. ಇಂಡಿಯಲ್ಲಿ ವಿದ್ಯಾರ್ಥಿಗಳ ರೈಲು ತಡೆ ಕಾರ್ಯಕ್ರಮ ಸಹ ನಡೆದಿದೆ.



ಬೆಂಗಳೂರಿನಲ್ಲಿ ಎಲ್‌ಐಸಿ ನೌಕರರು

ಕೊಪ್ಪಳ

ಕೊಪ್ಪಳ ಜಿಲ್ಲೆಯಲ್ಲಿ ಮುಷ್ಕರ ಕರೆಗೆ ವ್ಯಾಪಕವಾದ ಬೆಂಬಲ ವ್ಯಕ್ತವಾಗಿದೆ. ಗಂಗಾವತಿಯಲ್ಲಿ ಬ್ಯಾಂಕ್ ನೌಕರರು, ಎಲ್‌ಐಸಿ ನೌಕರರು ಸರಕಾರಿ ನೌಕರರ ಒಕ್ಕೂಟದ ಸದಸ್ಯರು, ಅಕ್ಷರ ದಾಸೋಹ ಅಂಗನವಾಡಿ ಕಾರ್ಯಕರ್ತರು, ಗ್ರಾಮ ಪಂಚಾಯತ್ ನೌಕರರು, ಕಟ್ಟಡ ಕಾರ್ಮಿಕರು, ಖಾಸಗಿ ಬಸ್ (ಗುತ್ತಿಗೆ ಆಧಾರಿತ) ಕಾರ್ಮಿಕರು, ಬಜಾರ್ ಹಮಾಲರ ಸಂಘ, ಗಂಜ್ ಹಮಾಲರ ಸಂಘ, ಪ್ರಾಂತ ಕೃಷಿ ಕೂಲಿಕಾರರ ಸಂಘ, ಪ್ರಾಂತ ರೈತ ಸಂಘಗಳಿಗೆ ಸೇರಿದ ಸುಮಾರು 5000 ಜನರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ಕೇಂದ್ರ- ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳನ್ನು ಖಂಡಿಸಿದರು. ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಜನಪರ ನೀತಿ ಜಾರಿಗೊಳಿಸಲು ಒತ್ತಾಯಿಸಿದ್ದು ಪ್ರತಿಭಟನಾಕಾರರ ಮೆರವಣಿಗೆ





ಗುಲ್ಬರ್ಗಾ ಬಂದ್...

ನಂತರ ಸಭೆಯಾಗಿ ಮಾರ್ಪಟ್ಟಿತು. ಸರಕಾರಿ ನೌಕರರ ಒಕ್ಕೂಟದ ಮುಖಂಡ ತಿಮ್ಮಪ್ಪ ವಜ್ರಬಂಡಿ, ಪ್ರಾಂತ ಕೂಲಿಕಾರರ ಸಂಘದ ಪರವಾಗಿ ಬಾಳಪ್ಪ, ಪ್ರಾಂತ ರೈತ ಸಂಘದ ಪರವಾಗಿ ನಾಗರಾಜ್ ಮುಂತಾದವರು ಮಾತನಾಡಿದರು.

ನಗರದ ವರ್ತಕರು, ಹೊಟೆಲ್ ಮಾಲಿಕರು, ಸ್ವಯಂಪ್ರೇರಿತವಾಗಿ ತಮ್ಮ ವ್ಯಾಪಾರ ವಹಿವಾಟನ್ನು ಬಂದ್ ಮಾಡಿದ್ದರು. ಯಾವುದೇ ವಾಹನಗಳು ಕೂಡಾ ಚಲಿಸಲಿಲ್ಲ. ಸಾಮಾನ್ಯ ಜನರಿಂದ ಹೋರಾಟಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಜೆಸಿಟಿಯುನ 16 ಬೇಡಿಕೆಗಳನ್ನು 1 ತಿಂಗಳಿನಿಂದ ತಾಲ್ಲೂಕಿನಾದ್ಯಂತ ಪ್ರಚಾರ ಪ್ರಕ್ಷೋಭೆ ಮಾಡಿದುದರ ಫಲವಾಗಿ ಯಶಸ್ವಿ ಹೋರಾಟ ನಡೆದಿದೆ. ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ನಾಲ್ಕು ಕಡೆ ಕೂಲಿಕಾರ ರೈತ ಸಂಘಟನೆಗಳ ಹಾಗೂ ಹಮಾಲರಿಂದ ರಸ್ತೆ ತಡೆಗಳು ನಡೆದಿವೆ. ಹಮಾಲರ ಜಿಲ್ಲಾ ಸಂಘಟನೆ ಜೆಸಿಟಿಯು ಬೇಡಿಕೆಗಳನ್ನು ಜಿಲ್ಲೆಯಲ್ಲಿ ಹಮಾಲರ ಮಧ್ಯ ಜನರ ಮಧ್ಯೆ ಜೀಪ್-ಜಾಥಾದ ಮೂಲಕ ಪ್ರಚಾರ ನಡೆಸಿತ್ತು.

ಕುಷ್ಟಗಿಯಲ್ಲಿ ಪ್ರಾಂತರೈತ ಸಂಘದ 3 ದಿನಗಳ ಜಾಥಾ ಪ್ರಯುಕ್ತ ಮತ್ತು ಪಂಚಾಯತ್ ನೌಕರರ ಸಂಘದಿಂದ ಮೋಟಾರ್ ಸೈಕಲ್ ಜಾಥಾ. ಅಂಗನವಾಡಿ ಕಾರ್ಯಕರ್ತರ ಸಂಘ ಅಕ್ಷರ ದಾಸೋಹ ಕಾರ್ಯಕರ್ತರು ಸರ್ಕಲ್ ಸಭೆ ನಡೆಸಿ ಪ್ರಚಾರ ಮಾಡಿದ ಪ್ರಯುಕ್ತ 29ರ ಮುಷ್ಕರ ಯಶಸ್ವಿಯಾಯಿತು. 29ರಂದು ಕುಷ್ಟಗಿಯಲ್ಲಿ 600 ಜನರ ಮೆರವಣಿಗೆ ನಡೆದಿದೆ. ನಗರದಲ್ಲಿ ವ್ಯಾಪಾರ ವಹಿವಾಟು ಬಂದ್ ಆಗಿತ್ತು. ಸಾರಿಗೆ ಸಂಚಾರ 4 ಗಂಟೆಯವರೆಗೆ ಬಂದ್ ಆಗಿತ್ತು. ಸರಕಾರಿ ನೌಕರ ಒಕ್ಕೂಟದ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಮೆರವಣಿಗೆಯು ರಾಷ್ಟ್ರೀಯ ಹೆದ್ದಾರಿ 13ರವರೆಗೆ ಬಂದು ನಂತರ 3 ಗಂಟೆಗೆ ರಸ್ತೆ ತಡೆ ನಡೆಸಲಾಯಿತು. ಬಹಿರಂಗ ಸಭೆಯಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ಆರ್.ಕೆ.ದೇಸಾಯಿ. ಅಂಗನವಾಡಿ ಸಂಘದ. ಮುಖಂಡರು ಮಾತನಾಡಿದರು.

ಯಲಬುರ್ಗಾದಲ್ಲಿ ಸರಕಾರಿ ನೌಕರರ ಒಕ್ಕೂಟ ಹಮಾಲರ ಸಂಘಟನೆ ಮತ್ತು ಎಸ್‌ಎಫ್‌ಐ ನೇತೃತ್ವದಲ್ಲಿ ಯಲಬುರ್ಗಾದಲ್ಲಿ ಬಂದ್ ಯಶಸ್ವಿಯಾಗಿದೆ.

ಕೊಪ್ಪಳದಲ್ಲಿ ಡಿವೈಎಫ್‌ಐ ನೇತೃತ್ವದಲ್ಲಿ ಅಂಗನವಾಡಿ, ಅಕ್ಷರದಾಸೋಹ, ಬ್ಯಾಂಕ್ ವಿಮಾ ನೌಕರರು ಮುಂತಾದವರು ಪಾಲ್ಗೊಂಡು ಪ್ರತಿಭಟನೆ ನಡೆದಿದೆ. ಎಐಟಿಯುಸಿ, ರಾಜ್ಯ ರೈತ ಸಂಘಗಳ ಪ್ರತ್ಯೇಕ ಮೆರವಣಿಗೆಯೂ ನಡೆದಿದೆ. ಗಡಿಯಾರ ಚೌಕದಿಂದ ಎಲ್ಲರೂ ಕೂಡಿದ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ನಡೆದಿದೆ.

ಕುಷ್ಟಗಿ ತಾಲ್ಲೂಕಿನ ಹನುಮನಾಳದಲ್ಲಿಯೂ ಬಂದ್ ಯಶಸ್ವಿಯಾಗಿದ್ದು 500 ಜನರು ಪಾಲ್ಗೊಂಡ ಪ್ರತಿಭಟನೆ ನಡೆದಿದೆ. ಪ್ರಾಂತ ರೈತ ಸಂಘ ರಾಜ್ಯ ರೈತ ಸಂಘ ಇಲ್ಲಿ ನೇತೃತ್ವ ವಹಿಸಿತ್ತು.

ರಾಯಚೂರು

ರಾಯಚೂರು ಜಿಲ್ಲೆಯಲ್ಲಿ ಮುಷ್ಕರ ಸಂಪೂರ್ಣ ಬಂದ್ ಆಗಿ ಮಾರ್ಪಟ್ಟಿತ್ತು. ರಾಯಚೂರು ಮಾನ್ವಿ ಸಿಂಧನೂರು ಲಿಂಗಸ್ಗೂರು ತಾಲ್ಲೂಕುಗಳಲ್ಲಿ ಹಾಗೂ ತುರುವಿಹಾಳ, ಜವಳಗೇರಾ, ಉಮಲೂಟಿ, ಜಾಲಹಳ್ಳಿ, ಕುಲ್ಮಿಲ, ಸುಲ್ತಾನ್‌ಪುರ ಕ್ರಾಸ್, ವಂದಳಿ ಕ್ರಾಸ್, ಚಿಂಚೋಳಿ ಕ್ರಾಸ್‌ಗಳಲ್ಲಿ ರಸ್ತಾರೋಖೋಗಳು ನಡೆದಿವೆ. ದೇವದುರ್ಗದಲ್ಲಿ 300 ಜನರ ಮೆರವಣಿಗೆ, ಹಟ್ಟಿಯಲ್ಲಿ 500 ಜನರ ಪ್ರತಿಭಟನಾ ಸಭೆ ನಡೆದಿವೆ. ರಾಯಚೂರು ನಗರದಲ್ಲಿ ಸಾವಿರಾರು ಜನರು ಪಾಲ್ಗೊಂಡ ಬೃಹತ್ ಪ್ರತಿಭಟನೆ ನಡೆದಿದೆ.

ಉತ್ತರಕನ್ನಡ

ಇಡೀ ಜಿಲ್ಲೆಯ ಮುಷ್ಕರಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಕಾರವಾರ ಭಾಗಶ: ಬಂದ್ ಆಗಿದೆ. 400 ಜನರ ಪ್ರತಿಭಟನೆ ಮೆರವಣಿಗೆ ನಡೆದಿದೆ. ಖಾಸಗಿ ಬಸ್ ಟೆಂಪೊ ಮಾಲಿಕರು ಚಾಲಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಸರಕಾರಿ ನೌಕರರ ಒಕ್ಕೂಟ ಬಿಎಸ್‌ಎನ್‌ಎಲ್ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿ ದ್ದಾರೆ. ಹೊನ್ನಾವರ ಪೂರ್ಣ ಬಂದ್ ಆಗಿದೆ. ಪ್ರಾಂತರೈತ ಸಂಘ, ಡಿವೈಎಫ್‌ಐ ನೇತೃತ್ವದಲ್ಲಿ 600ಕ್ಕೆ ಹೆಚ್ಚು ಜನರಿಂದ ರಸ್ತೆ ತಡೆ ನಡೆದಿದೆ. ಭಟ್ಕಳದಲ್ಲಿ 350 ಜನರ ಮೆರವಣಿಗೆ ರಸ್ತೆ ತಡೆ ನಡೆದಿದೆ. 148 ಜನರನ್ನು ಬಂಧಿಸಲಾಗಿದೆ. ಶಿರಾಲಿಯಲ್ಲಿಯೂ ರಸ್ತೆ ತಡೆ ನಡೆದಿದೆ. ಕುಮಟಾದಲ್ಲಿ 350 ಜನರ ಪ್ರತಿಭಟನೆ ಮೆರವಣಿಗೆ ಸಭೆ ನಡೆದಿದೆ. ಸಿದ್ದಾಪುರದಲ್ಲಿ 300 ಜನರ ಮೆರವಣಿಗೆ ನಡೆದಿದೆ ಸಮಾಜವಾದಿ ಪಕ್ಷ (ಎಸ್‌ಪಿ)ದ ಅಧ್ಯಕ್ಷರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸಿದ್ದಾರೆ. ಶಿರಸಿಯಲ್ಲಿ 450 ಜನರ ಮೆರವಣಿಗೆ ನಡೆದಿದೆ. ಸಭೆಯಲ್ಲಿ ಖ್ಯಾತ ಬಂಡಾಯ ಸಾಹಿತಿ ಆರ್.ಬಿ.ಭಂಡಾರಿಯವರು ಪಾಲ್ಗೊಂಡು ಮಾತನಾಡಿದ್ದಾರೆ. ಜೋಯಿಡಾದಲ್ಲಿ 200 ಜನರ ಸಭೆ ಮೆರವಣಿಗೆ ನಡೆದಿದೆ. ಕೆ.ಪಿ.ಆರ್.ಎಸ್, ಸಿಪಿಎಂಗಳಿಂದ ಕಿರುವತ್ತಿ, ಜೋಡಿ ಕಟ್ಟೆಗಳಲ್ಲಿ ಪ್ರತಿಭಟನೆ ನಡೆದಿದೆ. ಯಲ್ಲಾಪುರದಲ್ಲಿ 150 ಜನರು ಹಳಿಯಾಳದಲ್ಲಿ 250 ಜನರ ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ದಾಂಡೇಲಿ ಸಂಪೂರ್ಣ ಬಂದ್ ಆಗಿದೆ. ಡಿವೈಎಫ್‌ಐ ನೇತೃತ್ವದಲ್ಲಿ ರಸ್ತೆತಡೆ ಪ್ರತಿಭಟನೆ ನಡೆದಿದೆ. ಮುಂಡಗೋಡದಲ್ಲಿ 150 ಮರವಣಿಗೆ ನಡೆದಿದೆ. ಅಂಕೋಲಾದಲ್ಲಿಯೂ ರಸ್ತೆ ತಡೆ ನಡೆದಿದೆ. ಅಂಗನವಾಡಿ, ಬಿಸಿ ಊಟದ ನೌಕರರು, ಜಿಲ್ಲೆಯಾದ್ಯಂತ ದೊಡ್ಡ ಪ್ರಮಾಣದಲ್ಲಿ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ. ವಿಮಾ ನೌಕರರೂ, ಡಿವೈಎಫ್‌ಐ, ಪ್ರಾಂತರೈತ ಸಂಘದ, ಸಿಐಟಿಯು ಮುಂಚೂಣಿ ಪಾತ್ರ ವಹಿಸಿವೆ.



ಬೀದರ್‌ನಲ್ಲಿ....

ಹಾವೇರಿ

ಜಿಲ್ಲೆಯ ಕುಮಾರಪಟ್ಟಣ ಕೈಗಾರಿಕಾ ಪ್ರದೇಶದಲ್ಲಿ 1500 ಕಾರ್ಮಿಕರ ಬೃಹತ್ ಪ್ರತಿಭಟನಾ ಮೆರವಣಿಗೆ ಸಭೆ ನಡೆದಿದೆ.

ಗದಗ

ಗಜೇಂದ್ರಗಡದಲ್ಲಿ ವ್ಯಾಪಾರ ವಹಿವಾಟು ಸ್ಥಗಿತವಾಗಿತ್ತು. ಸುಮಾರು 400 ಜನರು ಹೆದ್ದಾರಿ ರಸ್ತೆ ತಡೆ ನಡೆಸಿದ್ದಾರೆ. ಡಿವೈಎಫ್‌ಐ, ಎಸ್‌ಎಫ್‌ಐ, ಪ್ರಾಂತ ಕೂಲಿಕಾರರ ಸಂಘ ಅಲ್ಲದೆ ಕಾಲಕಾಲೇಶ್ವರ ವಾಹನ ಮಾಲೀಕರ ಮತ್ತು ಚಾಲಕರ ಸಂಘ ಚಳುವಳಿಯಲ್ಲಿ ಪಾಲ್ಗೊಂಡಿವೆ. ರೋಣದಲ್ಲಿಯೂ ಪ್ರತಿಭಟನೆ ನಡೆದಿದೆ.



ಸಾರ್ವತ್ರಿಕ ಮುಷ್ಕರಕ್ಕೆ ಅಪೂರ್ವ ಯಶಸ್ಸು.......

ಪುಟ 3 ರಿಂದ

ಹೋರಾಟಕ್ಕಿಳಿಯಬೇಕಾದ ಪರಿಸರವನ್ನು ಸೃಷ್ಟಿಸಿದೆ. ತಿಳುವಳಿಕೆ, ಧೈರ್ಯ ಹಾಗೂ ಸ್ಫೂರ್ತಿಯನ್ನು ನೀಡಿದೆ.

ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳೆಲ್ಲವೂ ಸೇರಿದ ದೇಶದ ಪ್ರಭುತ್ವ ವ್ಯವಸ್ಥೆಯ ಜಾಗತೀಕರಣ ಪರ ನೀತಿಗಳಿಂದಾಗಿ ಹೊಸ ಹೊಸ ವಿಭಾಗಗಳು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಪ್ರವೇಶ, ಎಪಿಎಂಸಿ ಕಾನೂನು ತಿದ್ದುಪಡಿ, ಸೀಟಿ ಬಗೆಗಿನ ತೀರ್ಪು, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮುಷ್ಕರದ ಹಕ್ಕಿನ ಬಗೆಗಿನ ಆಡಳಿತಾತ್ಮಕ ಕ್ರಮಗಳು ಮತ್ತು ತೀರ್ಪುಗಳು ಇತ್ಯಾದಿ ಹೊಸ ಹೊಸ ವಿಭಾಗಗಳು ಪ್ರತಿಭಟನೆಗಿಳಿಯುವಂತೆ ಮಾಡಿದೆ ಅಥವಾ ದುಡಿಯುವ ಜನ ವಿಭಾಗಗಳು ಹೆಚ್ಚು ಜಾಗೃತರಾಗಿ ವಿಸ್ತೃತ ಪ್ರಮಾಣದಲ್ಲಿ ಹೋರಾಟಕ್ಕಿಳಿಯುವಂತೆ ಮಾಡಿದೆ.

ಸಿಪಿಐ(ಎಂ) ಪಕ್ಷದ 18ನೇ ಮಹಾಧಿವೇಶನದ ತೀರ್ಮಾನದ ಮೇರೆಗೆ ಆಹಾರ, ಭೂಮಿ, ಉದ್ಯೋಗಗಳ ಪ್ರಶ್ನೆಗಳ ಮೇಲೆ ರಾಜ್ಯದ್ಯಂತ ನಡೆದ ಎರಡು ಸುತ್ತು ಪ್ರಚಾರಾಂದೋಲನಗಳು - ಸ್ಥಳೀಯ ಪ್ರಚಾರ ಜಾಥಾ, ರಾಜ್ಯ ಮಟ್ಟದ ಪ್ರಚಾರಜಾಥಾಗಳು - ರಾಜ್ಯದ ಜನತೆಯನ್ನು ಆಕರ್ಷಿಸಿ ಸೆ. 29 ರ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿವೆ.

ಇದಕ್ಕೆ ಮೊದಲು ಕಾರ್ಮಿಕರಂಗದಲ್ಲಿ ನಡೆದ ಪ್ರಚಾರಾಂದೋಲನ ಅಸಂಘಟಿತರ ಸಂಘಟನೆ ಹಾಗೂ ಕೈಗಾರಿಕಾ ಕಾರ್ಮಿಕರ ವಿವಿಧ ಹೋರಾಟಗಳು, ರೈತ-ಕೃಷಿಕೂಲಿಕಾರರ ಸಂಘಗಳ ಪ್ರಚಾರಾಂದೋಲನ ಹಾಗೂ ಎಪಿಎಂಸಿ ವರ್ತಕರೊಂದಿಗೆ ನಡೆಸಿದ ಎಪಿಎಂಸಿ ಬಂದ್, ವಿದ್ಯಾರ್ಥಿಗಳ ಆಗಸ್ಟ್ 25 ರ ಶಾಲಾ ಕಾಲೇಜು ಬಹಿಷ್ಕಾರ, ವಿವಿಧ ನಿರುದ್ಯೋಗಿಗಳ ಸಮಸ್ಯೆಗಳನ್ನೆತ್ತಿ ಹೋರಾಟಗಳು ಅಥವಾ ಸ್ವಯಂ ಪ್ರೇರಿತ ಹೋರಾಟಗಳಲ್ಲಿ ಮಧ್ಯಪ್ರವೇಶಗಳು, ಮಹಿಳೆಯರು ಆಹಾರಕ್ಕಾಗಿ ಹಾಗೂ ದೌರ್ಜನ್ಯಗಳ ವಿರುದ್ಧ ನಡೆಸಿದ ಹೋರಾಟಗಳು ಹೀಗೆ ಅನೇಕ ಜನವಿಭಾಗಗಳನ್ನು ಎಚ್ಚರಿಸಿದ್ದು ಹೋರಾಟಕ್ಕೆ ಇಳಿಸಿದ್ದು ಸೆ.29 ರ ಚಳುವಳಿಯ ಬೆನ್ನ ಹಿಂದಿದೆ.

ಸೆ. 29 ರ ಕರೆಯನ್ನು ದಲಿತ, ರೈತ ಹಾಗೂ ವರ್ತಕರ ಸಂಘಗಳ ಜಂಟಿ ಕರೆಯಾಗಿಸಲು ನಡೆಸಿದ ಪ್ರಯತ್ನವು ಅದರಲ್ಲಿ ಎಪಿಎಂಸಿ ವರ್ತಕರ ಸಂಘಗಳು ನೇರವಾಗಿ ಪಕ್ಷದ ಜೊತೆ ಭಾಗವಹಿಸಿರುವುದು ಕೂಡ ಒಂದು ಉತ್ತಮ ಆರಂಭವಾಗಿದೆ.

ಅದೇ ಸಂದರ್ಭದಲ್ಲಿ ಇನ್ನೂ ಆಳುವವರ್ಗದ ಪಕ್ಷಗಳ ಹಿಂದೆ ಇರುವ ಅದರಲ್ಲಿಯೂ ಬಿಜೆಪಿಯ ಹಿಂದೆ ಇರುವ ಆದರೆ ಈ ಆಳುವ ವರ್ಗಗಳ ನೀತಿಗಳಿಂದ ಅತೀವ ಸಂಕಟಕ್ಕೆ ಒಳಗಾಗಿರುವ, ಅವುಗಳ ಬಗ್ಗೆ ಭ್ರಮೆಯನ್ನು ಇನ್ನೂ ಕಳೆದುಕೊಳ್ಳದಿರುವ ವರ್ಗಗಳು, ಜನ ವಿಭಾಗಗಳು ಸೆ. 29 ರ ಕರೆಯಲ್ಲಿ ಭಾಗವಹಿಸಲಿಲ್ಲ.

ಆದರೆ ಜನ ಚಲಿಸುತ್ತಿದ್ದಾರೆ. ಮುಂದೆ ನುಗ್ಗಲು ತಯಾರಾಗುತ್ತಿದ್ದಾರೆ ಎಂಬುದರ ಸಂಕೇತವಾಗಿದೆ ಸೆ.29. ಅವರನ್ನು ಸಂಘಟಿಸುವ ಅವರನ್ನು ಬಾಧಿಸುತ್ತಿರುವ ಸಮಸ್ಯೆಗಳ ವರ್ಗ ಮೂಲವನ್ನು ಅವರ ಗಮನಕ್ಕೆ ತರುವ, ಅರಿವಿನ ಆಳಕ್ಕೆ ಇಳಿಸುವ ಕೆಲಸವನ್ನು, ಸಾಮೂಹಿಕ ಸಂಘಟನೆಗಳನ್ನು ವಿಸ್ತರಿಸುವ ಕೆಲಸವನ್ನು, ಅವರ ನಡುವೆ ಪಕ್ಷವನ್ನು ಕಟ್ಟುವ ಕೆಲಸವನ್ನು ಮಾಡಲು ಪಕ್ಷ ಸಜ್ಜಾಗಬೇಕಾಗಿದೆ.

ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ಅಯ್ಯ !

ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಸಂಬಂಧ ಘೋಷಣೆಯನ್ನು ಈಗಾಗಲೇ ಸಿದ್ಧ ಮಾಡಿಕೊಂಡು ಕಾಯುತ್ತಾ ಕುಳಿತಿದ್ದಾರೆ. ರಾಜ್ಯದಲ್ಲೆಲ್ಲಾ ಪತ್ರಿಕಾಗೋಷ್ಠಿ ನಡೆಸಿ ಇಂಥ ಘೋಷಣೆಯ ಮುನ್ಸೂಚನೆಯನ್ನು ಸಾರುತ್ತಿದ್ದಾರೆ.

ಇತ್ತ ಶಿಕ್ಷಣ ಇಲಾಖೆಯ ಕಾರ್ಯಾಲಯದ ಒಳಗೆ ಪವಾಡವೇ ನಡೆಯುತ್ತಿದೆ. ಹತ್ತಾರು ತರಹದ ಟೇಬಲ್‌ಗಳ ರಚಿಸೋಣವಾಗುತ್ತಿದೆ. ಅಂಕಿ ಸಂಖ್ಯೆಗಳ ಕಸರತ್ತು, 'ಚಿಣ್ಣರ ಅಂಗಳ', 'ಕಲಿನಲಿ', ವಿಶೇಷ ದಾಖಲಾತಿ ಆಂದೋಲನ, ಶಿಕ್ಷಣ ಖಾತ್ರಿ ಯೋಜನೆ ಶಾಲೆಗಳು, ಅಲೆಮಾರಿಗಳು-ವಲಸೆ ಬಂದವರ ಮಕ್ಕಳಿಗಾಗಿ ನಡೆಸುವ ಟೆಂಟ್ ಶಾಲೆ, ಇತ್ಯಾದಿ ಹಲವು ಆಂದೋಲನಗಳು ಹಾಗೂ ಶಾಲಾ ಆರಂಭೋತ್ಸವಗಳು ಎಬ್ಬಿಸಿರುವ ಧೂಳಿನಲ್ಲಿ ರಾಜ್ಯದ ಕಲಿಯುವ ವಯಸ್ಸಿನ ಮಕ್ಕಳೆಲ್ಲಾ ಕಲಿಯಲು ಶಾಲೆಗೆ ಬಂದೇಬಿಟ್ಟಿರುವ ಸುಂದರ ಚಿತ್ರವೊಂದನ್ನು ಕಲ್ಪಿಸಿ-ಚಿತ್ರಿಸಿಕೊಂಡಿರುವ ಶಿಕ್ಷಣ ಸಚಿವರು, ಅಧಿಕಾರಿ ವರ್ಗ ತಮ್ಮ ಸಾಧನೆಗೆ ತಾವೇ ಬೀಗುತ್ತಿದ್ದಾರೆ.

6 ರಿಂದ 14 ರ ವಯೋಮಾನದೊಳಗಿ ರುವ ರಾಜ್ಯದ ಮಕ್ಕಳಲ್ಲಿ ಇನ್ನೂ 28,947 ಮಕ್ಕಳನ್ನು ಮಾತ್ರ ಶಾಲೆ ತರುವುದು ಬಾಕಿ ಇದೆ!!!

ಮಕ್ಕಳನ್ನು ಶಾಲೆಗೆ ತರುವ ವಿವಿಧ ಯೋಜನೆಗಳ ಆರಂಭೋತ್ಸವಗಳು, ವಿವಿಧ ಆಂದೋಲನಗಳ ಭಜಾಭಜಂತ್ರಿ, ಜಾತ್ರೆಗಳು ಮುಗಿದು, ಎದ್ದ ಧೂಳು ಅಡಗಿದ ಮೇಲೆ ವಾಸ್ತವಿಕವಾಗಿ ಏನಾಗುತ್ತಿದೆ ಎಂಬುದನ್ನು ತಣ್ಣಗೆ ಕೂತು ಯೋಚಿಸುವ ವಿವೇಕ ಇರುವವರು ಹಾಗೂ ನಮ್ಮ ಕರ್ನಾಟಕದ ರಾಜ್ಯದ ಸಾಮಾಜಿಕ-ಆರ್ಥಿಕ ವಾಸ್ತವದ ಕನಿಷ್ಠ ಪರಿಚಯ ಇರುವವರು ಇಂತಹ ಅಂಕಿ ಸಂಖ್ಯೆಗಳ ಕಸರತ್ತಿನ ಆತ್ಮವಂಚನೆಗೆ ಶರಣಾಗುವುದು ಸಾಧ್ಯವೇ?

ಸರ್ಕಾರದ ಶಿಕ್ಷಣ ಇಲಾಖೆಯ ಅಂಕಿ ಸಂಖ್ಯೆಗಳೇ ಸಾರುತ್ತಿರುವಂತೆ 2001 ರಲ್ಲಿ ರಾಜ್ಯದಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಸಂಖ್ಯೆ 10,53,744 (ಹತ್ತು ಲಕ್ಷ ಐವತ್ಮೂರು ಸಾವಿರದ ಏಳುನೂರ ನಲ್ವತ್ತನಾಲ್ಕು).

ಆ ನಂತರದಲ್ಲಿ ವರ್ಷವರ್ಷವೂ ನಡೆದಿರುವ ವಿಶೇಷ ಆಂದೋಲನಗಳಿಂದಾಗಿ ಪ್ರತಿವರ್ಷವೂ ಲಕ್ಷಾಂತರ ವಿದ್ಯಾರ್ಥಿಗಳನ್ನು ಶಾಲೆಗೆ ಕರೆತರಲು ಸಾಧ್ಯವಾಗಿದೆ ಎಂಬ ಅಂಕಿಸಂಖ್ಯೆಗಳನ್ನು ಇಲಾಖೆ ನೀಡುತ್ತಿದೆ.

ಶಾಲೆಯ ಹೊರಗಿನ ಮಕ್ಕಳನ್ನು ಶಾಲೆಗೆ ತರಲು ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಹಲವು ಕ್ರಮಗಳನ್ನು ಕೈಗೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ಅಥವಾ ಮನೆಗಳಿಂದ 1 ಕಿ.ಮಿ. ವ್ಯಾಪ್ತಿಯೊಳಗೆ ಪ್ರಾಥಮಿಕ ಶಾಲೆಯನ್ನು ಒದಗಿಸುವುದು, ಕೇವಲ 10 ಮಕ್ಕಳಿದ್ದರೂ ಒಂದು ಶಾಲೆ ತೆರೆಯುವುದು, 10 ಕ್ಕಿಂತ ಕಡಿಮೆ ಮಕ್ಕಳಿರುವ ಕಡೆಗಳಲ್ಲಿ ಶಿಕ್ಷಣ ಖಾತ್ರಿ ಯೋಜನೆಯ ಶಿಕ್ಷಣ ಕೇಂದ್ರವನ್ನು ತೆರೆಯುವುದು, 8ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲೆಗೆ ತಂದು ಇಂತಹ ಶಾಲೆಗಳನ್ನು ಗ್ರಾಮಗಳಿಂದ ಕನಿಷ್ಠ ಮೂರು ಕಿ.ಮಿ. ವ್ಯಾಪ್ತಿಯೊಳಗೆ ತೆರೆಯುವುದು, ಇಂತಹ-ಶಿಕ್ಷಣವನ್ನು ವಿಸ್ತರಿಸುವ ಹಲವು ಕೆಲಸವನ್ನು ಸರ್ಕಾರ ಕೈಗೊಂಡಿರುವುದು ನಿಜವೇ ಆಗಿದೆ.

ವರ್ಷ	ಶಾಲೆಗೆ ತಂದ ಮಕ್ಕಳ ಸಂಖ್ಯೆ	ಹೊರಗೆ ಉಳಿದ ಮಕ್ಕಳ ಸಂಖ್ಯೆ
2000-01	-	10,53,744
2001-02	3,40,000	6,63,000
2002-03	2,50,000	4,06,000
2003-04	1,25,000	2,81,000
2004-05	1,21,000	1,60,000
	(1,05,037) ಹೊಸಸಮೀಕ್ಷೆ	
2005-06	76,090	28,947
2006-07	(ಗುರಿ) 28,947	00000

ಇನ್ನೇನು ಸ್ವರ್ಗಕ್ಕೆ ಮೂರೇ ಗೇಣು! ಕರ್ನಾಟಕ ರಾಜ್ಯವು ಶಾಲೆಯಿಂದ ಹೊರಗಿದ್ದ 'ಕಲಿಯುವ ವಯಸ್ಸಿನ' ಎಲ್ಲ ಮಕ್ಕಳನ್ನು ಶಾಲೆಗೆ ತರುವಲ್ಲಿ ಯಶಸ್ವಿಯಾಗಿಬಿಟ್ಟಿದೆ!! ಶಾಲೆಯ ಬೇಲಿಯ ಪಕ್ಕ - ಅಲ್ಲಿ ಇಲ್ಲಿ ಗೋಲಿ ಆಡುತ್ತಿರುವ ಬಾಕಿ ಉಳಿದ ಚೂರುಪಾರು ಮಕ್ಕಳನ್ನು ಹೇಗಾದರೂ ಶಾಲೆಗೆ ದಬ್ಬಿಬಿಟ್ಟರೆ ಮುಗಿದೇ ಹೋಯ್ತು. ಕಲಿಯುವ ವಯಸ್ಸಿನ ಮಕ್ಕಳೆಲ್ಲಾ 'ಶಾಲೆಯೊಳಗೆ ಇರುವ' ಮಾದರಿ ರಾಜ್ಯ ಕರ್ನಾಟಕ ಎಂದು ಘೋಷಿಸಿಯೇ ಬಿಡಬಹುದು.



ಸುಪ್ರೀಂಕೋರ್ಟ್‌ನ ನಿರ್ದೇಶನದ ಪರಿಣಾಮವಾಗಿಯೇ ಆಗಲಿ ರಾಜ್ಯದಲ್ಲಿ ಜಾರಿಯಾಗಿರುವ ಬಿಸಿ ಊಟದ ಯೋಜನೆಯು ಸಹ ಸಾಕಷ್ಟು ಸಕಾರಾತ್ಮಕ ಪರಿಣಾಮ ಬೀರಿ ಶಾಲಾ ಮಕ್ಕಳ ಹಾಜರಾತಿಯಲ್ಲಿ ಸುಧಾರಣೆಯಾಗಿ ರುವುದು ನಿಜ. 'ಕಲಿ-ನಲಿ', 'ಚಿಣ್ಣರ ಅಂಗಳ' ಇಂತಹ ಕೆಲವು ಯೋಜನೆಗಳೂ ಸಹ ತಮ್ಮ ಸೀಮಿತ ಪರಿಣಾಮ ಬೀರಿರುವ ಸಾಧ್ಯತೆ ಇವೆ.

ಇಷ್ಟಾದರೂ ಸಹ ಈ ಯೋಜನೆಗಳು ರಾಜ್ಯದ ಎಲ್ಲ ಮಕ್ಕಳನ್ನು ಶಾಲೆಗೆ ತರುವಲ್ಲಿ ಯಶಸ್ವಿಯಾಗಿವೆ ಎಂದು ಭಾವಿಸುವುದು ಸಾಧ್ಯವೇ ಇಲ್ಲ. ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣವಾದ ನಿಜವಾದ ಅಂಶಗಳೇನೆಂಬ ನಮ್ಮ ಸಮಾಜದ ಕ್ರೂರ ವಾಸ್ತವನ್ನಾಧರಿಸದ ಯಾವುದೇ ಯೋಜನೆ ಹೇಗೆ ತಾನೆ ಯಶಸ್ವಿಯಾಗಬಲ್ಲದು?



ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ಅಯ್ಯ?

ಶೈಕ್ಷಣಿಕ ವರ್ಷದ ಆರಂಭದಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಜನಗಣನೆ ನಡೆಸುವುದು. ಆ ನಂತರ ಮನೆ ಮನೆಗೆ ತೆರಳಿ ಪೋಷಕರ ಮನವೊಲಿಸಿ, ಜಾಗೃತಿ ಮೂಡಿಸುವುದು, ಮಕ್ಕಳನ್ನು ಶಾಲೆಗೆ ತರುವ ನಿಟ್ಟಿನಲ್ಲಿ ಸರ್ಕಾರದ ಒಂದು ಪ್ರಮುಖ ಯೋಜನೆ. ಅಂದರೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ಬಗೆಗೆ ತಂದೆ-ತಾಯಿ-ಪೋಷಕರಿಗೆ ಸರಿಯಾದ ತಿಳುವಳಿಕೆಯಿಲ್ಲದಿ ರುವುದೇ ಮಕ್ಕಳು ಶಾಲೆಗೆ ಬರದಿರಲು ಪ್ರಮುಖ ಕಾರಣ ಎಂಬುದೇ ಈ ಬಗ್ಗೆ ಸರ್ಕಾರದ ಮೂಲಭೂತ ಗ್ರಹಿಕೆ! ಶಾಲೆ ಹತ್ತಿರದಲ್ಲಿಲ್ಲದಿ ರುವುದರಿಂದ ಶಾಲೆಗೆ ಬರುತ್ತಿಲ್ಲವೆಂಬುದು ಸರ್ಕಾರದ ಮತ್ತೊಂದು ಪ್ರಮುಖ ಗ್ರಹಿಕೆ.

ಕೂಲಿಗಳ ಗೋಳು ಕೇಳಬಲ್ಲುದೇ ಆಳುವವರ ಕಿವಿಗೆ

ಸರ್ಕಾರದ ಸಮೀಕ್ಷೆ - ಜನಗಣತಿಗಳಲ್ಲಿ ಸತ್ಯ ಮರೆ ಮಾಚಲ್ಪಟ್ಟಿದೆ. ಅರ್ಧ ಸತ್ಯಗಳು, ಪೂರ್ಣ ಸುಳ್ಳುಗಳು ಅಲ್ಲಿ ಮನೆ ಮಾಡಿವೆ. ಶಾಲೆಗಳಿಂದ ಹೊರಗುಳಿದ ಮಕ್ಕಳ ಸಂಖ್ಯೆ ಸರ್ಕಾರದ ದಾಖಲೆಗಿಂತಲೂ ಭಾರಿ ಅಗಾಧವಾಗಿದೆ. ಸಮೀಕ್ಷೆಯ ದಾಖಲೆಗೆ ಸಿಗದೆ ದಣಿಗಳ ಹಟ್ಟಿಗಳಲ್ಲಿ, ದನದ ಕೊಟ್ಟಿಗೆಗಳಲ್ಲಿ ಜೀತ ಮಾಡುವ ಮಕ್ಕಳ ಸಂಖ್ಯೆ ಎಷ್ಟು? ಎಲ್ಲಿದೆ ಈ ಬಗ್ಗೆ ಸರ್ಕಾರದ ದಾಖಲೆ. ಹೋಟೆಲು, ಸೈಕಲ್ ಶಾಪು, ಕಲ್ಲುಗಣಿ, ಹೊಲಗದ್ದೆ, ಅಂಗಡಿಗಳಲ್ಲಿ- ಶ್ರೀಮಂತರು, ಅನುಕೂಲಸ್ಥರ ಮನೆ-ಮಹಲುಗಳಲ್ಲಿ ಕೂಲಿ ಮಾಡುವ ಕೂಲಿಕಾರರ-ಬಾಲಕಾರ್ಮಿಕರ ಬಗೆಗೆ ಎಲ್ಲಿದೆ ಸರ್ಕಾರದ ಸಮೀಕ್ಷೆ.

ಶಾಲೆಗಳಲ್ಲಿ ಉಳಿದವರೆಷ್ಟು?

ಸರ್ಕಾರದ ಪ್ರಚಾರ - ನೋಂದಣಿ ಆಂದೋಲನದ ತಂಡಗಳ ಕೈಗೆ ಸಿಕ್ಕು, ಶಾಲೆಗೆ ಬಂದು ದಾಖಲಾದವರಲ್ಲಿ ಎಷ್ಟು ಜನ ನಿರಂತರವಾಗಿ ಶಾಲೆಗೆ ಬರುತ್ತಿದ್ದಾರೆಂಬ ಬಗ್ಗೆ ಎಲ್ಲಿದೆ ಸರ್ಕಾರದ ವಿಮರ್ಶೆ. ವಿಶೇಷ ದಾಖಲಾತಿ ಆಂದೋಲನ ಒಂದು ಕಡೆ ಇರಲಿ ಸಾಮಾನ್ಯವಾಗಿ ದಾಖಲಾಗುವ 'ಮುಖ್ಯ ಪ್ರವಾಹ'(Main Streem) ವಿದ್ಯಾರ್ಥಿಗಳಲ್ಲೇ ಹಾಜರಾತಿ ಎಷ್ಟಿದೆ.? ದೊಡ್ಡ ಪ್ರಮಾಣದಲ್ಲಿ ಶಾಲೆಗೆ ಗೈರು ಹಾಜರಾಗುವ ಈ ಮಕ್ಕಳು ಹೀಗೆ ಶಾಲೆಗೆ ದಾಖಲಾಗಿಯೂ ಶಾಲೆಯಿಂದ ಹೊರಗುಳಿಯಲು ಕಾರಣವೇನು? ಸರ್ಕಾರಿ ದಾಖಲೆಗಳಲ್ಲಿ 'ಹಾಜರಾಗುವ' ಈ ಮಕ್ಕಳು ಶಾಲೆಯಿಂದ ಮಾಯವಾಗಿರಲು ಕಾರಣವೇನು?

ಗಂಜಿ ಕಾಣದವರು ಮುಂಜಿ ಮಾಡಬಲ್ಲರೆ

ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ಸುಮಾರು 62 ಲಕ್ಷ ಕೃಷಿ ಕೂಲಿಕಾರರಿದ್ದಾರೆ. ಇವರಲ್ಲಿ ದೊಡ್ಡ ಸಂಖ್ಯೆಯ ಜನರಿಗೆ ತನ್ನದೆನ್ನುವ ಒಂದು ತುಂಡು ಭೂಮಿಯೂ ಗತಿ ಇಲ್ಲ. ಹೈದರಾಬಾದ್ ಕರ್ನಾಟಕ- ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಈ ಸಮಸ್ಯೆಗಳು ಬಹಳ ಗಂಭೀರವಾಗಿದೆ. (ಈ ಜಿಲ್ಲೆಗಳಲ್ಲೇ ಅತಿಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ) ಭೂಮಾಲಿಕರ - ದೊಡ್ಡ ರೈತರ ಭೂಮಿಯಲ್ಲಿ ಕೂಲಿನಾಲಿ ಮಾಡಿದರೆ ಮಾತ್ರವೇ ಇವರಿಗೆ ಗಂಜಿ. ಗಂಜಿಯನ್ನೇ ಕಾಣದೆ ಕಂಗಾಲಾಗಿರುವ ಈ ಕೂಲಿಕಾರರ ಪೋಷಕರು ತಮ್ಮ ಮಕ್ಕಳಿಗೆ ಮುಂಜಿ ಮಾಡಿ 'ಸಾಲಿ' ಕಲಿಸಬಲ್ಲರೇ?

ಇವರ ಮಕ್ಕಳೇ ಶಾಲೆಯಿಂದ ಹೊರಗಿರುವವರು. ಈ ಹಸುಕಂದಗಳೇ ಕಂಡವರ ಕುರಿ, ದನ ಮೇಯಿಸುತ್ತಾ, ಕಾಡು-ಮೇಡು ಅಲೆಯುವವರು. ಅಪ್ಪ, ಅಮ್ಮನೊಂದಿಗೆ ಕೂಲಿಗೆ ಹೋಗುವವರು. ಇವರೇ-ಮನೆ ಮಂದಿಯೆಲ್ಲಾ ದುಡಿಮೆಗೆ ಹೋದಾಗ ತಮಗಿಂತ ಚಿಕ್ಕ ಕೂಸುಗಳನ್ನು ಜೋಲಿ ತೂಗಿ - ಜೋಗುಳ ಹಾಡುವ ಹೆಣ್ಣು ಮಕ್ಕಳು, ಇವರೆ ಒಲೆ ಅಟ್ಟಿ, ರೊಟ್ಟಿ ತಟ್ಟಿ, ಮಡಕೆ ಮಸಿ ತಿಕ್ಕುವವರು. ಬೀದಿ ಬೀದಿಯಲ್ಲಿ ಸಗಣಿ ಹೆಕ್ಕುವವರು. ಇಂತಹ ಕೂಲಿಗಳ ಮಕ್ಕಳೇ ನಗರ, ಪಟ್ಟಣಗಳಲ್ಲಿ ಚಿಂದಿ ಆಯುವವರು, ಬಸ್ಸು, ಕಾರು, ಮೋಟಾರು ತೊಳೆಯುವವರು.

ಎಲ್ಲಿದೆ ಸಮೀಕ್ಷೆ ಇವರ ಬಗ್ಗೆ? ಸರ್ಕಾರಿ ಸಮೀಕ್ಷೆಯೆಂಬ ತತಾನುತೂತಿನ ಜರಡಿಯ ಕಿಂಡಿಗಳಲ್ಲಿ ತೂರಿ ಬಂದ ಬೆವರಿನ ನೆಂಟರ ಬಗ್ಗೆ?

ಲಕ್ಷ ಲಕ್ಷ ಸಂಖ್ಯೆಯ ಇಂತಹ ಮಕ್ಕಳ ಅಪ್ಪ ಅಮ್ಮಂದಿರ ಬದುಕಿನಲ್ಲಿ ಬದಲಾವಣೆ ಬಾರದೇ ನಿಜಕ್ಕೂ ಈ ಮಕ್ಕಳು ಶಾಲೆಗೆ ಬಂದಾವೇ? ಬಂದರೂ ಶಾಲೆಯಲ್ಲಿ ನಿಂದಾವೇ? ಇಲ್ಲ, ಬಹುತೇಕ ಇಲ್ಲ.

ಕೇರಳ ರಾಜ್ಯದಲ್ಲಿ ಸಾಕ್ಷರತೆ ಮತ್ತು ಶಿಕ್ಷಣದ ವಿಸ್ತರಣೆಯಲ್ಲಿ ಆಗಿರುವ ಗಣನೀಯ ಪ್ರಗತಿಗೆ ಕಾರಣವಾದ ಅಂಶಗಳಲ್ಲಿ ಅಲ್ಲಿ ಪರಿಣಾಮಕಾರಿಯಾಗಿ ಜಾರಿ ಮಾಡಲಾಗಿರುವ ಭೂ ಸುಧಾರಣೆ ಅತ್ಯಂತ ಮುಖ್ಯವಾದದ್ದು. ಅಷ್ಟೇಕೆ ನಮ್ಮ ರಾಜ್ಯದ ಕರಾವಳಿ ಜಿಲ್ಲೆಗಳು ಸಾಕ್ಷರತೆ ಮತ್ತು ಶಿಕ್ಷಣದ ವಿಸ್ತರಣೆಯಲ್ಲಿ ಮುಂದೆ ಇರುವುದಕ್ಕೂ ಸಹ ರಾಜ್ಯದ ಇತರ ಭಾಗಗಳಿಗಿಂತ ಪರಿಣಾಮಕಾರಿಯಾಗಿ ಬಡವರಿಗೆ ಇಲ್ಲಿ ಭೂಮಿ ಹಂಚಿಕೆಯಾಗಿರುವುದೇ ಕಾರಣ.

ಭೂಮಿ ಇಲ್ಲದ ಕೃಷಿ ಕೂಲಿಕಾರರಿಗೆ ಭೂಮಿ ಹಂಚುವ 'ಭೂಸುಧಾರಣೆ'ಯ ಸೊಲ್ಲನ್ನೇ ಎತ್ತದೇ ಎಲ್ಲ ಮಕ್ಕಳನ್ನು ಶಾಲೆಗೆ ತಂದೆವೆನ್ನುವ ಸರ್ಕಾರದ ಈ 'ಗಾರುಡಿ'ಯನ್ನು ಯಾವ ಕುರುಡರೂ ಒಪ್ಪಲಾರರು.

ಸರ್ಕಾರದ 'ಕಲಿ-ನಲಿ' ಎನ್ನುವ ಕಾರ್ಯಕ್ರಮ ಶಿಕ್ಷಣದಲ್ಲಿ ಆಸಕ್ತಿ ಕಳೆದುಕೊಂಡ ಕಾರಣಕ್ಕೆ ಶಾಲೆ ಬಿಟ್ಟ ಮಕ್ಕಳ ಒಂದು ಸಣ್ಣ ವಿಭಾಗವನ್ನು ಶಾಲೆಗೆ ತರಬಲ್ಲದೇನೋ. ಆದರೆ ಬದುಕಿನ ಭಾರವೆಂಬ ಬಂಡೆಗಲ್ಲಿನಡಿ ಸಿಲುಕಿರುವ ಮಕ್ಕಳನ್ನು ಶಾಲೆಗೆ ತರಬೇಕಾದರೆ ಸರ್ಕಾರದಿಂದ ಭಿನ್ನ ಕ್ರಮವೇ ಬೇಕಾಗಿದೆ. ಮಂತ್ರಕ್ಕೆ ಮಾವಿನ ಕಾಯಿ ಉದುರಲಾರದು. ಕಲ್ಲು ಬೀಸಬೇಕು ಅಲ್ಲವೇ?

ಕಲ್ಯಾಣ ರಾಜ್ಯದ ನಾಶದ ಹುನ್ನಾರದ ವಿರುದ್ಧ ಮತ

ಜರ್ಮನ್ ಚುನಾವಣೆಗಳು

ಜರ್ಮನ್ ಚುನಾವಣೆಗಳು ಬಹುಶಃ ಮೊದಲ ಬಾರಿಗೆ ಬಹಳ ಆಶ್ಚರ್ಯಕರ ಫಲಿತಾಂಶ ಕೊಟ್ಟಿವೆ. ಹೆಚ್ಚು ಕಡಿಮೆ ಎರಡು ರಾಜಕೀಯ ಮೈತ್ರಿಕೂಟಗಳ ನಡುವೆ ಹೊಯ್ದಾಡುತ್ತಿದ್ದ ಜರ್ಮನ್ ಮತದಾರ ಎರಡು ಮೈತ್ರಿಕೂಟಗಳನ್ನೂ ಸೋಲಿಸಿದ್ದಾನೆ. ಯಾರು ಸರ್ಕಾರ ರಚಿಸಿದರೂ, ಸೋತವರದ್ದೇ ಸರ್ಕಾರ. ನಿಜವಾದ ಅರ್ಥದಲ್ಲಿ ಗೆದ್ದ ಪಕ್ಷ ಹಲವು ಎಡಪಕ್ಷ-ಶಕ್ತಿಗಳು ಕೂಡಿ ಹುಟ್ಟಿದ ಎಡಪಕ್ಷ, ಜರ್ಮನಿಯ ಪ್ರಸಿದ್ಧ ಕಲ್ಯಾಣ ರಾಜ್ಯವನ್ನು ಬಿಚ್ಚಿ ಬಿಸಾಕುವ ಎರಡೂ ಮೈತ್ರಿಕೂಟಗಳ ಹುನ್ನಾರದ ವಿರುದ್ಧ ಜರ್ಮನ್ ಮತದಾರ ದನಿ ಎತ್ತಿದ್ದಾನೆ. ಸಾಮಾಜಿಕ ಕಲ್ಯಾಣ ವೆಚ್ಚವನ್ನು ಕಡಿತ ಮಾಡುತ್ತಾ ಕಲ್ಯಾಣ ರಾಜ್ಯವನ್ನು ಬಿಚ್ಚಿ ಬಿಸಾಡುವುದರ ವಿರುದ್ಧ ದೃಢ ಹೋರಾಟ ನಡೆಸುವ ಎಡಪಕ್ಷಗಳ ಶಕ್ತಿಗಳ ಹೊಸ ಪಕ್ಷವನ್ನು ಮೂರನೇ ಪಕ್ಷವಾಗಿ ಸ್ವಾಗತಿಸಿದ್ದಾನೆ. ಜರ್ಮನಿಗೆ ಮಾತ್ರವಲ್ಲ, ಇಡೀ ಜಗತ್ತಿನ ದುಡಿಯುವ ಜನತೆಗೆ ಮಹತ್ವದ ಸಕಾರಾತ್ಮಕ ಬೆಳವಣಿಗೆ ಇದು.

ಜರ್ಮನಿಯ ಆಳುವ ಸೋಶಿಯಲ್ ಡೆಮಾಕ್ರಾಟ್-ಗ್ರೀನ್ ಪಕ್ಷದ ಮೈತ್ರಿಕೂಟ ಅವಧಿ ಮುಗಿಯುವ ಒಂದು ವರ್ಷ ಮೊದಲೇ ಚುನಾವಣೆಗಳನ್ನು ಏರ್ಪಡಿಸಿತ್ತು. ಕಳೆದ ಚುನಾವಣೆಯಲ್ಲಿ ಅಮೆರಿಕ ಇರಾಕ್ ಯುದ್ಧದ ವಿರುದ್ಧ ನಿಲುವು ತೆಗೆದುಕೊಂಡು ಜಯಗಳಿಸಿದ ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ ಯಥಾಪ್ರಕಾರ ತನ್ನ ಬಣ್ಣ ಬದಲಾಯಿಸಿತ್ತು. ಚುನಾವಣೆ ಗೆಲ್ಲಲು ನಿರುದ್ಯೋಗದ ವಿರುದ್ಧ, ಸಾಮಾಜಿಕ ಕಲ್ಯಾಣ ಯೋಜನೆ ಕಾಪಾಡುವ ಬಗ್ಗೆ ಮಾತಾಡಿದ್ದು, ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ ಜರ್ಮನಿಯ ಆಳುವವರ್ಗಗಳ - ಶ್ರೀಮಂತರ ಪರ ನೀತಿಗಳನ್ನೇ ಮುಂದುವರೆಸಿತ್ತು. ಈ ನೀತಿಗಳ ವಿರುದ್ಧ ಕಳೆದ ನಾಲ್ಕು ವರ್ಷಗಳಲ್ಲಿ ಸಾರ್ವತ್ರಿಕ ಮುಷ್ಕರ ಸೇರಿದಂತೆ ವ್ಯಾಪಕ ಚಳುವಳಿಗಳು ನಡೆದಿವೆ. ಆಳುವ ಸೋಶಿಯಲ್ - ಡೆಮಾಕ್ರೆಟಿಕ್ ಪಕ್ಷ ಬೆಂಬಲಿಸುವ ಕೇಂದ್ರೀಯ ಟ್ರೇಡ್‌ಯೂನಿಯನ್‌ನ ಅಂಗ ಯೂನಿಯನ್‌ಗಳು ಈ ಚಳುವಳಿಗಳಲ್ಲಿ ಮುಂಚೂಣಿಯಲ್ಲಿದ್ದವು. ಈ ಟ್ರೇಡ್ ಯೂನಿಯನ್‌ನ ದೊಡ್ಡ ವಿಭಾಗಕ್ಕೆ ಆ ಪಕ್ಷದ ನಾಯಕತ್ವದ ಬಗ್ಗೆ ಭ್ರಮನಿರಸನವಾಗಿತ್ತು. ಈ ವ್ಯಾಪಕ ಅತೃಪ್ತಿ ತಮ್ಮನ್ನು ಒಂದು ವರ್ಷದೊಳಗೆ ನುಂಗಿಬಿಡಬಹುದು ಎಂಬ ಭಯದಿಂದ ಮೈತ್ರಿಕೂಟ ಒಂದು ವರ್ಷ ಮೊದಲೇ ಚುನಾವಣೆ ನಡೆಸಿತು. ಎದುರಾಳಿಗಳಿಗೆ ಸಮಯ ಕೊಡದೇ, ತಾವು ಅದರ ಪ್ರಯೋಜನ ಪಡೆಯಬಹುದು ಎಂದು ಅವರ ಲೆಕ್ಕಾಚಾರವಾಗಿತ್ತು.


ಎಲ್ಲರನ್ನು ಪೆಚ್ಚು ಮಾಡಿದ ಜರ್ಮನರು

ಆದರೆ ಆಳುವ ಮೈತ್ರಿಕೂಟವನ್ನು ಜರ್ಮನ್ ಜನ ಪೆಚ್ಚಾಗುವಂತೆ ಮಾಡಿದ್ದಾರೆ. ಮಾತ್ರವಲ್ಲ, ಆಳುವ ಮೈತ್ರಿಕೂಟದ ವಿರುದ್ಧದ ಅತೃಪ್ತಿ ಬಳಸಿ ತಾವು ಭಾರಿ ಬಹುಮತ ಪಡೆಯಬಹುದು ಎಂದು ಕನಸು ಕಂಡಿದ್ದ ಬಲಪಂಥೀಯ ಮೈತ್ರಿಕೂಟವನ್ನೂ ಪೆಚ್ಚು ಮಾಡಿದ್ದಾರೆ. ಬೇರೆ ಬೇರೆ ಭಾಗಗಳಲ್ಲಿ ಜರ್ಮನಿಯ 'ಕಲ್ಯಾಣರಾಜ್ಯ'ದ ಸಾಮಾಜಿಕ ಕಲ್ಯಾಣ ಯೋಜನೆ ಕಡಿತಗೊಳಿಸುವ ನೀತಿಗಳನ್ನು ಹೊಂದಿರುವ ಎರಡೂ ಮೈತ್ರಿಕೂಟಗಳಿಗೆ ಇದು ಜರ್ಮನ್ ಮತದಾರನ ಸ್ಪಷ್ಟ ಎಚ್ಚರಿಕೆ. ಇದರ ಜತೆಗೆ ಎಲ್ಲಾ ಮಾಧ್ಯಮ ಪಂಡಿತರ, ಆಳುವ ವರ್ಗಗಳ ಜ್ಯೋತಿಷಿಗಳ ಭವಿಷ್ಯಗಳೆಲ್ಲಾ ಬುರುಡೆ ಎಂದು ಸಾಬೀತು ಮಾಡಿದ್ದಾರೆ. ಜರ್ಮನಿಯ ಉಳ್ಳವರ ಮತ್ತು ಸಾಮ್ರಾಜ್ಯಶಾಹಿ ಮಾಧ್ಯಮಗಳು ವಿರೋಧಿ ಬಲಪಂಥೀಯ ಮೈತ್ರಿಕೂಟ ಜಯಭೇರಿ ಹೊಡೆಯುವುದು ಎಂದು ಭವಿಷ್ಯ ನುಡಿದಿದ್ದರು. ಬಲಪಂಥೀಯ ಮೈತ್ರಿಕೂಟದ ನಾಯಕಿ ಎಂಜಿಲ್ ಮಾರ್ಕೆಲ್ ಜರ್ಮನಿಯ ಮೊದಲ ಮಹಿಳಾ ಛಾನ್ಸಲರ್ ಎಂದು ಘೋಷಿಸಿಬಿಟ್ಟಿದ್ದರು.

ಇಮ್ಮಡಿ ಮತಗಳಿಸಿದ ಎಡಪಕ್ಷ


ಜರ್ಮನಿಯ ಎರಡು ಪ್ರಮುಖ ಪಕ್ಷಗಳು ಶೇಕಡಾ ಮತಗಳಿಕೆ ಮತ್ತು ಸೀಟುಗಳು ಎರಡರಲ್ಲೂ ನಷ್ಟ ಅನುಭವಿಸಿವೆ. ಎರಡು ಸಣ್ಣ ಪಕ್ಷಗಳಾದ FDP(ಫ್ರೀ ಡೆಮಾಕ್ರೆಟಿಕ್ ಪಾರ್ಟಿ) ಮತ್ತು ಎಡಪಕ್ಷ - PDS (ಪಾರ್ಟಿ ಆಫ್ ಡೆಮಾಕ್ರಟಿಕ್ ಸೋಶಲಿಸ್ಟ್) ಶೇಕಡಾ ಮತಗಳಿಕೆ ಮತ್ತು ಸೀಟುಗಳು ಎರಡರಲ್ಲೂ ಹೆಚ್ಚಳ ಸಾಧಿಸಿವೆ. ಎಡಪಕ್ಷ -PDS ಅತ್ಯಂತ ಹೆಚ್ಚಿನ ಹೆಚ್ಚಳ ಸಾಧಿಸಿದೆ. ಕಳೆದ ಚುನಾವಣೆಯಲ್ಲಿ ಶೇಕಡಾ 4 ರಿಂದ ಶೇಕಡಾ 8.7 (ಎರಡು ಪಟ್ಟಿಗಿಂತಲೂ ಹೆಚ್ಚು) ಕ್ಕೆ ಜಿಗಿದಿದೆ. ಕೇವಲ ಎರಡು ಸೀಟಿನಿಂದ 54 ಸೀಟಿಗೆ ಜಿಗಿದಿದೆ. ಜರ್ಮನ್ ಚುನಾವಣೆ ನಿಯಮಗಳ ಪ್ರಕಾರ ಪಾರ್ಲಿಮೆಂಟಿನ ಒಂದಷ್ಟು ಸೀಟುಗಳು ಮತಗಳಿಕೆಗೆ ಅನುಪಾತದಲ್ಲಿ ಇರುತ್ತವೆ. ಇನ್ನೊಂದಿಷ್ಟು ಸೀಟುಗಳಿಗೆ ನೇರ ಚುನಾವಣೆ ಆಗುತ್ತದೆ. ಸೀಟು ಗಳಿಸಲು ಕನಿಷ್ಟ ಶೇಕಡಾ 5 ಮತಗಳಿಕೆ ಇರಬೇಕು. ಆ ಲಕ್ಷ್ಮಣ ರೇಖೆಯನ್ನು ಬಂಡವಾಳಶಾಹಿ ಜರ್ಮನಿ(ಹಿಂದಿನ ಪಶ್ಚಿಮ ಜರ್ಮನಿ ಅಥವಾ ಈಗಿನ ಐಕ್ಯ ಜರ್ಮನಿ)ಯ ನೈಜ ಎಡಪಕ್ಷ ದಾಟುತ್ತಿರುವುದು ಇದೇ ಮೊದಲು. ಆದ್ದರಿಂದ ಇದು ಚಾರಿತ್ರಿಕ ಘಟನೆ. ಬೀದಿಗಳಲ್ಲಿ, ಫ್ಯಾಕ್ಟರಿಗಳಲ್ಲಿ, ಜನತೆಯಲ್ಲಿ ಸಾಕಷ್ಟು ಬೆಂಬಲ ಹೊಂದಿರುವ ಎಡಶಕ್ತಿಗಳಿಗೆ ಪಾರ್ಲಿಮೆಂಟಿನಲ್ಲಿ ಮೊದಲ ಬಾರಿಗೆ ತಕ್ಕ ಪ್ರಾತಿನಿಧ್ಯ ದೊರಕಿದೆ. ಮಾತ್ರವಲ್ಲ ಜರ್ಮನಿಯ ಹತ್ತು ಪ್ರಾಂತ್ಯಗಳಲ್ಲಿ ಆರು ಪ್ರಾಂತ್ಯಗಳಲ್ಲಿ ಎಡಪಕ್ಷ ಶೇಕಡಾ 5 ರ ಈ ಲಕ್ಷ್ಮಣರೇಖೆ ದಾಟಿದೆ. ಮೂರು ನೇರ ಸೀಟುಗಳನ್ನು ಗೆದ್ದಿದೆ. ಹಿಂದಿನ ಪೂರ್ವ ಜರ್ಮನಿಯಲ್ಲಿ 30 ಸೀಟುಗಳನ್ನು ಮತ್ತು ಪಶ್ಚಿಮ ಜರ್ಮನಿ 24 ಸೀಟುಗಳನ್ನು ಗೆದ್ದು, ಪಶ್ಚಿಮದಲ್ಲಿ ಎಡಪಂಥೀಯ ಬೆಂಬಲ ಇಲ್ಲ ಎನ್ನುವ ಅಪವಾದ ಅಳಿಸಿ ಹಾಕಿದೆ.


ಸೋಶಿಯಲ್ ಡೆಮಾಕ್ರಟಿಕ್ ಪಕ್ಷ ನಮ್ಮ ಕಾಂಗ್ರೆಸ್-ಸಮಾಜವಾದಿ ಪಕ್ಷಗಳಂತೆ 'ಸಮಾಜವಾದ'ದ ಹೆಸರು ಹೇಳುತ್ತಾ ಆಳುವ ಬಂಡವಾಳಶಾಹಿ ವರ್ಗ ಸೇವೆ ಮಾಡುವ ಪಕ್ಷ. ವಿರೋಧ ಪಕ್ಷದಲ್ಲಿದ್ದಾಗ ಕಾರ್ಮಿಕರ-ಜನಸಾಮಾನ್ಯರ ಬಗ್ಗೆ ದನಿ ಎತ್ತುತ್ತಾ ಆಳುವ ಪಕ್ಷವಾದಾಗ ಬಂಡವಾಳಶಾಹಿ ನೀತಿಗಳಿಗೆ ಬದ್ಧವಾಗಿರುವ ಪಕ್ಷ. ಜನತೆಗೆ ಈ ಪಕ್ಷದ ಬಗ್ಗೆ ಭ್ರಮನಿರಸನವಾಗುತ್ತ ಬಂದಿತ್ತು. ಅದರ ಚರಿತ್ರೆಯಲ್ಲೇ ಅತ್ಯಂತ ಕಡಿಮೆ ಮತಗಳಿಕೆಗೆ ಇಳಿದಿದೆ. ಹಿಂದಿನ ಚುನಾವಣೆಗಳ ಮತಗಳಿಕೆಯಲ್ಲಿ ಶೇಕಡಾ 4.2 ರಷ್ಟು ಮತ್ತು 29 ಸೀಟುಗಳನ್ನು ಕಳೆದುಕೊಂಡಿದೆ.ನೈಜ ಎಡಪಕ್ಷವೊಂದರ ಉದಯ, ಅದು ಸ್ಪಷ್ಟವಾಗಿ ಮತದಾನದಲ್ಲಿ ವ್ಯಕ್ತವಾಗಿದೆ.


ಎಡ ಪಕ್ಷದ ಮುಖಂಡರು

ಭಾರಿ ಬಹುಮತಗಳಿಸುವ ಕನಸು ಕಂಡಿದ್ದ ಬಲಪಂಥೀಯ ಮೈತ್ರಿಕೂಟದ CDU/CSU (ಕ್ರಿಶ್ಚಿಯನ್ ಡೆಮಾಕ್ರಾಟಿಕ್ ಯೂನಿಯನ್/ ಕ್ರಿಶ್ಚಿಯನ್ ಸೋಶಿಯಲ್ ಯೂನಿಯನ್) ಕೂಡಾ ಮೊದಲ ಸ್ಥಾನದಲ್ಲಿದ್ದರೂ ಕಳೆದ ಚುನಾವಣೆಗಳಿಗಿಂತ ಮತಗಳಿಕೆಯಲ್ಲಿ ಶೇಕಡಾ 3.3 ಮತ್ತು 23 ಸೀಟುಗಳನ್ನು ಕಳೆದುಕೊಂಡಿದೆ. ಶೇಕಡಾ 35.2 ಮತ ಮತ್ತು 225(ಒಟ್ಟು 613 ರಲ್ಲಿ) ಸೀಟುಗಳನ್ನು ಗಳಿಸಿದೆ.

ಎರಡೂ ಮೈತ್ರಿಕೂಟದ ಸಣ್ಣ ಪಕ್ಷಗಳಾದ FDP (ಫ್ರೀ ಡೆಮಾಕ್ರಾಟಿಕ್ ಪಾರ್ಟಿ) ಮತ್ತು ಗ್ರೀನ್ ಪಕ್ಷಗಳು ಜಾಣ್ಮೆಯಿಂದ ನಡೆಸಿದ ಚುನಾವಣಾ ಪ್ರಚಾರದಿಂದ ತಮ್ಮ ಮೈತ್ರಿಕೂಟದ ಹಿರಿಯಣ್ಣ ಪಕ್ಷಗಳ ವಿರುದ್ಧ ಜನರ ಆಕ್ರೋಶದಿಂದ ತಪ್ಪಿಸಿಕೊಂಡವು. ಗ್ರೀನ್ ಪಕ್ಷ ಅಧಿಕಾರದಲ್ಲಿದ್ದರೂ ಶೇಕಡಾ 8.1 ಮತ ಗಳಿಕೆ ಮತ್ತು 51 ಸೀಟು ಗಳಿಸಿ ತನ್ನ ಸ್ಥಾನ (ಮಾನ) ಉಳಿಸಿಕೊಂಡಿದೆ. FDP ಶೇಕಡಾ 9.8 ಮತ ಮತ್ತು 61 ಸೀಟುಗಳಿಸಿ, ಶೇಕಡಾ 2.4 ಮತಗಳಿಕೆ ಮತ್ತು 14 ಸೀಟುಗಳ ಹೆಚ್ಚಳ ಸಾಧಿಸಿದೆ. CDU/CSU ವಿರುದ್ಧದ ಪ್ರತಿಭಟನಾ ಮತಗಳು FDP ಗೆ ಬಂದಂತಿದೆ. ಎಡಪಕ್ಷ ಗ್ರೀನ್ ಪಕ್ಷವನ್ನು ಮೀರಿಸಿದೆ, ಈಗ ಗ್ರೀನ್ ಪಕ್ಷ ಜರ್ಮನ್ ಪಾರ್ಲಿಮೆಂಟಿನಲ್ಲಿ ಅತಿ ಸಣ್ಣ ಪಕ್ಷವಾಗಿದೆ.


ಹಾಲಿ ಛಾನ್ಸಲರ್


ಬಲಪಂಥೀಯ ನಾಯಕಿ ಎಂಜಿಲ್

ಅಂಕಿ-ಸಂಖ್ಯೆ ದೃಷ್ಟಿಯಿಂದ ಅಲ್ಲದಿದ್ದರೂ ನೈಜ ಎಡಪಕ್ಷವೊಂದು ರಾಷ್ಟ್ರೀಯ ಮಟ್ಟದಲ್ಲಿ ಪಾರ್ಲಿಮೆಂಟಿನಲ್ಲಿ ಹೊರಗೂ ರಾಜಕೀಯವಾಗಿ ಉದಯಿಸಿರುವುದು ಅತ್ಯಂತ ಮಹತ್ವದ ಘಟನೆ. ಜಗತ್ತಿನಲ್ಲೇ ಅಭಿವೃದ್ಧಿ ದೇಶಗಳ ಸಾಲಿಗೆ ಸೇರಿದ, ಯುರೋಪಿನ ಅತಿದೊಡ್ಡ ಆರ್ಥಿಕವಾದ ಜರ್ಮನಿಯಲ್ಲಿ ಈ ಬೆಳವಣಿಗೆ ಸಕಾರಾತ್ಮಕವಾದದ್ದು. PDS ಹಿಂದಿನ ಪೂರ್ವ ಜರ್ಮನಿಯ ಆಳುವ ಸಮಾಜವಾದಿ ಪಕ್ಷ ಕೆಲವು ಇತರ ಪೂರ್ವ ಯುರೋ ಪಕ್ಷಗಳಂತೆ ಬಂಡವಾಳಶಾಹಿ-ನೀತಿಗಳನ್ನು ಅನುಸರಿಸುತ್ತಿಲ್ಲ. ಜರ್ಮನಿಯ ಜನತೆ ದಶಕಗಳ ಹೋರಾಟದಿಂದ ಗಳಿಸಿದ ಸಾಮಾಜಿಕ-ಆರ್ಥಿಕ-ರಾಜಕೀಯ ಹಕ್ಕುಗಳ ಸವಲತ್ತುಗಳನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ತೊಡಗಿದೆ. ಹಿಂದಿನ ಆಳುವ ಪಕ್ಷವಾದ SPD ಯು ದೊಡ್ಡ ಪ್ರಮಾಣದಲ್ಲಿ ಸದಸ್ಯರು - ಕಾರ್ಯಕರ್ತರು - ನಾಯಕರನ್ನು ಆಕರ್ಷಿಸಿ ಹೊಸ ಎಡಪಕ್ಷ ರಚಿಸುವುದರಲ್ಲಿ ಮಿಂಚಿನವೇಗ, ಚಾಕಚಕ್ಯತೆ ಪ್ರದರ್ಶಿಸಿತು. ಇಂತಹ ಶಕ್ತಿಗಳು ರಚಿಸಿದ WASG (Election Alternater for Employment and Social Justice - ಉದ್ಯೋಗ ಮತ್ತು ಸಾಮಾಜಿಕ ನ್ಯಾಯಕ್ಕೆ ಚುನಾವಣೆ ವೇದಿಕೆ) ಜತೆ ರಾಜಕೀಯ ಮೈತ್ರಿ ಸಾಧಿಸಿತು. ಐಕ್ಯಪಕ್ಷ ಸಹ ರಚಿಸಿತು.SDP - ಗ್ರೀನ್ ಸರ್ಕಾರ ಮಿಂಚಿನ ಚುನಾವಣೆ ನಡೆಯುತ್ತದೆ ಎಂದು ಗೊತ್ತಾದ ಕೂಡಲೇ ಎಲ್ಲಾ ಎಡ ಶಕ್ತಿಗಳನ್ನು ಒಗ್ಗೂಡಿಸಿ ತನ್ನ ಪಕ್ಷದ ಹೆಸರು ಅದಕ್ಕೆ ಬಿಟ್ಟುಕೊಟ್ಟು ರಾಜಕೀಯ ಪ್ರೌಢಿಮೆ ಪ್ರದರ್ಶಿಸಿದೆ. ಜಗತ್ತಿನ ದುಡಿಯುವ ಜನತೆ ಎಡಪಕ್ಷ - PDS ಹೀಗೆ ಬೆಳೆಯಲಿ. ಸಮಾಜವಾದಕ್ಕೆ ಜಗತ್ತಿನ ಜನತೆಯ ಹೋರಾಟದ ಮುಂಚೂಣಿಯಲ್ಲಿ ಬರಲಿ - ಎಂದು ಹಾರೈಸಬೇಕಾಗಿದೆ.

○

'ಚಾರಿತ್ರಿಕ ಬದಲಾವಣೆಗೆ ಮುನ್ನಡೆಯೋಣ' ಎಡಪಕ್ಷ PDS

ಎಡಪಕ್ಷ - PDS ನ 9ನೇ ಮಹಾಧಿವೇಶನ ಡಿಸೆಂಬರ್ 10-11 ರಂದು ನಡೆಯಲಿದೆ. ಅಲ್ಲಿ ಪಕ್ಷದ ಮುಂದಿನ ಬೆಳವಣಿಗೆಗೆ ರಾಜಕೀಯ ಮತ್ತು ಸಂಘಟನಾ ಪ್ರಶ್ನೆಗಳನ್ನು ಚರ್ಚಿಸಲಿದೆ. WASG ಮತ್ತು ಎಡಪಕ್ಷ - PDS ನ ಐಕ್ಯತೆಯ ಕ್ರಮಗಳ ಬಗೆಗೂ ಚರ್ಚೆ ನಡೆಯಲಿದೆ. ಹೊಸ ಪಕ್ಷ ಸುಧಾರಿತ ಕಮ್ಯುನಿಸ್ಟರು, ಎಡ ಸೋಶಿಯಲ್ ಡೆಮಾಕ್ರಟರು, ಟ್ರೇಡ್ ಯೂನಿಯನ್ ನಾಯಕರು, ಜಾಗತೀಕರಣ ವಿರೋಧಿಗಳು ಮತ್ತು ಪೂರ್ವ ಮತ್ತು ಪಶ್ಚಿಮ ಜರ್ಮನಿಯ ಸಕ್ರಿಯವಾಗಿರುವ ಎಲ್ಲಾ ಎಡಪಂಥೀಯರನ್ನು ಒಗ್ಗೂಡಿಸಿ ವಿವಿಧ ದೃಷ್ಟಿಕೋನಗಳಿಗೆ ಅವಕಾಶ ಕೊಡುವ ಬಹುಮುಖೀ ಪಕ್ಷವಾಗಿರುತ್ತದೆ. ಈ ಚಾರಿತ್ರಿಕ ಪ್ರಕ್ರಿಯೆ ಜರ್ಮನಿಯ ಗಡಿಗಳಾಚೆಗೂ ಆಸಕ್ತಿ ಕೆರಳಿಸುವಂತಹುದು ಎಂದು ಪಕ್ಷ ತಿಳಿದಿದೆ.

- ಜರ್ಮನ್ ಚುನಾವಣೆಗಳ ನಂತರ ಎಡಪಕ್ಷ-PDS ಸೆಪ್ಟೆಂಬರ್ 20 ರಂದು ನೀಡಿದ ಹೇಳಿಕೆಯಿಂದ


‘ಪಿ.ರಾಮಚಂದ್ರರಾವ್ ಒಂದು ನೆನಪು’

ಅವಿಭಜಿತ ದ.ಕ. ಜಿಲ್ಲೆಯಲ್ಲಿ ‘ಮಾಷ್ಟು’ ಎಂದು ಹೃದಯಾಳದಿಂದ ಕರೆಯಿಸಿಕೊಳ್ಳುತ್ತಿದ್ದ ಪಿ.ರಾಮಚಂದ್ರ ರಾವ್‌ರವರ ಸಂಸ್ಮರಣಾ ದಿನಾಚರಣೆಯು ಸೆ. 18 ರಂದು ಪಕ್ಷದ ಮಂಗಳೂರು ನಗರ ಸಮಿತಿ ಆಶ್ರಯದಲ್ಲಿ ನಗರ ಸಮಿತಿ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಪಕ್ಷದ ಸದಸ್ಯರು, ಹಿತೈಷಿಗಳು ಮತ್ತು ಅಭಿಮಾನಿಗಳು ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದ್ದ ಈ ಸಂಸ್ಮರಣಾ ಕಾರ್ಯಕ್ರಮದಲ್ಲಿ ಮತ್ತೆ ಪ್ರೀತಿಯ ‘ಮಾಸ್ಟು’ ನೆನಪಿನಂಗಳದಲ್ಲಿ ಚಲನಶೀಲರಾಗಿದ್ದರು. ಅತಿಥಿಗಳು ಮಾಸ್ಟು ಅವರ ವ್ಯಕ್ತಿತ್ವವನ್ನು ವಿವರಿಸುತ್ತಿದ್ದಾಗ ಸಭಿಕರೆಲ್ಲರೂ ತಾವೂ ಆ ಅನುಭವವನ್ನು ಅನುಭವಿಸಿದ್ದೇವೆ ಎಂದು ಹೇಳುತ್ತಾ ತಮ್ಮದೇ ಆದ ವಿಶಿಷ್ಟ ಅನುಭವಗಳನ್ನು ವಿವರಿಸುತ್ತಿದ್ದರು. ಎಲ್ಲರೂ ರೋಮಾಂಚನ ಗೊಳ್ಳುವ ರೀತಿಯಲ್ಲಿ ಮುಖ್ಯಅತಿಥಿಗಳಾದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವ, ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಮತ್ತು ಅವರ ಒಡನಾಡಿ ಬಿಎಸ್‌ಎನ್‌ಎಲ್ ನೌಕರರ ಸಂಘದ ಮಾಜಿ ಮುಂದಾಳು ಬಿ.ನಾರಾಯಣ ರಾವ್‌ರವರು ಮಾಸ್ಟುರವರ ಪ್ರತಿರೂಪವನ್ನು ತಂದು ಸಭೆಯ ಮುಂದಿರಿಸಿದರು.

ಪ್ರಾರಂಭದಲ್ಲಿ ಬಿ.ಮಾಧವರವರು ಮಾರ್ಕ್ಸ್‌ವಾದಿ ರಾಜಕೀಯ ಸಿದ್ಧಾಂತವನ್ನು ಸರಳವಾದ ರೂಪದಲ್ಲಿ ಜನಸಾಮಾನ್ಯರ ದಿನನಿತ್ಯದ ಅನುಭವದ ಉದಾಹರಣೆಗಳೊಂದಿಗೆ ಕಲಿಸುವುದರಲ್ಲಿ ರಾಜ್ಯದಲ್ಲೇ ಪ್ರಥಮರು ಎಂದು ಹೇಳುವ ಮೂಲಕ ರಾಮಚಂದ್ರರಾಯರ ವ್ಯಕ್ತಿತ್ವದ ವಿಶ್ಲೇಷಣೆ ನಡೆಸಿದರು. ‘ಗೊತ್ತಿರುವ ವಿಷಯದಿಂದ ಗೊತ್ತಿಲ್ಲದಿರುವ ವಿಷಯವನ್ನು’ ಕಾರ್ಯಕರ್ತರಿಗೆ ತಿಳಿಹೇಳುವ ಕಲೆ ವಿಶಿಷ್ಟವಾದುದು ಎಂದು ಹೇಳಿದರು.

ನಂತರ ಮಾತನಾಡಿದ ಬಿ.ನಾರಾಯಣ ರಾವ್‌ರವರು ಅವರ ವ್ಯಕ್ತಿತ್ವವನ್ನು ಮತ್ತು ಬಿಎಸ್‌ಎನ್‌ಎಲ್ ನೌಕರರ ಸಂಘಟನೆಯನ್ನು ಕಟ್ಟಿ ಬೆಳೆಸಲು ಅವರು ನೀಡಿದ ಸಹಾಯ ಸಹಕಾರಗಳನ್ನು ವಿಶ್ಲೇಷಿಸಿದರು. ಅವರ ಸರಳ ನಡೆನುಡಿ, ಉಡುಗೆ ತೊಡುಗೆ ಮತ್ತು ಕೈಯಲ್ಲಿರುವ ಪುಸ್ತಕಗಳ ಕಟ್ಟಿನಿಂದ ಅವರ ವ್ಯಕ್ತಿ ಚಿತ್ರಣ ನಮ್ಮ ಮನಸ್ಸಿಗೆ ಆಗಾಗ ಬರುತ್ತಿದೆ ಎಂದು ಭಾವಪರವಶರಾಗಿ ಹೇಳಿದರು.

ಪಿ.ರಾಮಚಂದ್ರರಾಯರೊಂದಿಗೆ ದೀರ್ಘಕಾಲ ಹೋರಾಟದ ಸಂಗಾತಿಯಾಗಿ ಬೆಳೆದ ಬಗೆಯನ್ನು



ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್‌ರವರು ಎಳೆಎಳೆಯಾಗಿ ವಿವರಿಸಿದರು. 1952 ರಿಂದ 1998 ರ ಅವರ ಮರಣದ ಸಮಯದವರೆಗೂ ಅವರಿಂದ ಕಲಿತ ಅನುಭವ ಮತ್ತು ಅವರ ವಿಶಿಷ್ಟ ವ್ಯಕ್ತಿತ್ವದ ವಿವಿಧ ಮುಖಗಳನ್ನು ಸಭಿಕರ ಮುಂದೆ ಬಿಡಿಸಿಟ್ಟರು. ಸ್ವಾತಂತ್ರ್ಯ ಹೋರಾಟದ ಘಟನೆಯನ್ನು ವಿಶ್ಲೇಷಿಸಿದಾಗ, ಕಷ್ಟದಲ್ಲಿರುವ ಸಂಗಾತಿಗಳಿಗೆ ಬೆನ್ನುತಟ್ಟಿ ಪ್ರೋತ್ಸಾಹಿಸಿ ಸಹಾಯ ಸಹಕಾರ ನೀಡುವ ರಾಮಚಂದ್ರರಾಯರನ್ನು ವಿವರಿಸುವಾಗ ಸಂಗಾತಿಗಳಿಗೆ ಸ್ವತಃ ಅನುಭವದ ಘಟನೆಯ ನೆನಪುಗಳು ಮರುಕಳಿಸುತ್ತಿದ್ದವು. ರಾಮಚಂದ್ರರಾಯರು ವ್ಯಕ್ತಿಯಲ್ಲ ಬದಲಾಗಿ ಅವರು ಶಕ್ತಿ ಎಂದು ಹೇಳಿ ಅವರು ಅವರೊಂದಿಗೆ ದೆಹಲಿಯ ಪಕ್ಷದ ಕೇಂದ್ರ ಸಮಿತಿ ಸಭೆಗೆ ಹೋಗುವ ಮೊದಲು ರೈತ ಸಂಘಟನೆಗೆ ಸಂಬಂಧಿಸಿ ಆಡಿದ ಮಾತುಗಳನ್ನು ಕೇಳಿಸಿಕೊಂಡ ಎಲ್ಲರ ಕಣ್ಣನಲ್ಲೂ ಬಾಷ್ಪಾಂಜಲಿ ಬರಿಸಿದವು.

ಅಧ್ಯಕ್ಷತೆ ವಹಿಸಿದ ಜೆ.ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ ಹೋರಾಟಗಳ ಈ ಅವಧಿಯಲ್ಲಿ ರಾಮಚಂದ್ರರಾಯರು ಇದ್ದಿದ್ದರೆ ಜಿಲ್ಲೆಯ ಚರಿತ್ರೆಯೇ ಬದಲಾಗಬಹುದಿತ್ತು’ ಎಂದು ಹೇಳಿದರು. ಪ್ರತಿವರ್ಷ ನಗರ ಸಮಿತಿಯು ಅವರ ಸಂಸ್ಮರಣಾ ಕಾರ್ಯಕ್ರಮವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವುದೆಂದು ಹೇಳಿದರು.

ವಕೀಲರ ಸಂಘದ ಜಿಲ್ಲಾಧ್ಯಕ್ಷರಾದ ಯಶವಂತ ಮರೋಳಿಯವರು ಸ್ವರಚಿತ ಹೋರಾಟದ ಹಾಡಿನೊಂದಿಗೆ ರಾಮಚಂದ್ರರಾಯರಿಗೆ ಶ್ರದ್ಧಾಂಜಲಿ ಅರ್ಪಿಸಿ ಕಾರ್ಯಕ್ರಮಕ್ಕೆ ವಿಶಿಷ್ಟ ಮೆರಗು ತಂದರು. ಮಂಗಳೂರು ಮಹಾನಗರ ಪಾಲಿಕೆಯ ಬಜಾಲ್ ಜಪ್ಪಿನಮೊಗ್ರು ರಸ್ತೆಗೆ ಪಿ.ರಾಮಚಂದ್ರರಾವ್ ರಸ್ತೆ ಎಂದು ನಾಮಕರಣ ಮಾಡಬೇಕೆಂದು ನಗರ ಪಾಲಿಕೆಯನ್ನು ಒತ್ತಾಯಿಸುವ ನಿರ್ಣಯವನ್ನು ಕೃಷ್ಣಪ್ಪ ಕೊಂಚಾಡಿ ಮಂಡಿಸಿದರು.

ಕೆ.ಯಾದವಶೆಟ್ಟಿ ಸ್ವಾಗತಿಸಿ, ವಸಂತ ಆಚಾರಿ ಧನ್ಯವಾದ ಅರ್ಪಿಸಿದರು.

ವರದಿ- **ಕೃಷ್ಣಪ್ಪ ಕೊಂಚಾಡಿ**

ಮೂಲಭೂತವಾದಿಗಳ ಉಡುಪು ಸಂಹಿತೆ ಖಂಡನಾರ್ಹ

ಅಮೇರಿಕಾ ಓಪನ್ ಟೆನಿಸ್ ಚಾಂಪಿಯನ್‌ಷಿಪ್ ಮಹಿಳೆಯರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತಿನವರೆಗೆ ಬಂದು ಭಾರತದ ಹೆಮ್ಮೆಯನ್ನು ಮೆರೆದ ಸಾನಿಯ ಮಿರ್ಜಾ ಎಲ್ಲರ ಅಭಿನಂದನೆಗೆ ಪಾತ್ರರು. ಈ ಹೆಮ್ಮೆಯ ಕುವರಿಯನ್ನು ಅಭಿನಂದಿಸುವ ಬದಲು ಮುಸಲ್ಮಾನ ಸಮುದಾಯದ ಮೂಲಭೂತವಾದೀ ಮೌಲಾನಾರೊಬ್ಬರು ಖಾಸಗೀ ಟಿ.ವಿ.ಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಕ್ರೀಡೆಯಲ್ಲಿ ತುಂಡು ಬಟ್ಟೆ ತೊಡುವುದರ ವಿರುದ್ಧ ಫತ್ವಾ ಹೊರಡಿಸಬೇಕು ಎಂದು ಹೇಳಿರುವುದನ್ನು ಖಂಡಿಸಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಯಾವುದೇ ಮೂಲಭೂತವಾದ ಎಂದಿಗೂ ಪ್ರಗತಿ ವಿರೋಧವೆಂಬುದು ಮತ್ತೊಮ್ಮೆ ಇದರಿಂದ ಸಾಬೀತಾಗಿದೆ ಎಂದಿದೆ.

ಬೀಸುತ್ತಿರುವ ಸಾಮಾಜಿಕ ಬದಲಾವಣೆಯ ಗಾಳಿಗೆ ತೆರೆದುಕೊಳ್ಳುತ್ತಿರುವ ಮುಸ್ಲಿಂ ಮಹಿಳೆಯರ ಮೇಲೆ ಮೂಲಭೂತವಾದಿಗಳ ಧಾಳಿ ನಿರಂತರವಾಗಿ ನಡೆಯುತ್ತಲೇ ಇದೆ. ಇತ್ತೀಚೆಗೆ ಇಮ್ರಾನಾ ಪ್ರಕರಣದಲ್ಲಿ ಆಕೆಯ ಗಂಡನು ಅತ್ಯಾಚಾರಿ ಮಾವನ ಮಗನಾಗಿರುವುದರಿಂದ ಆತನನ್ನು ಆಕೆ ಮಗನೆಂದು ಪರಿಗಣಿಸಬೇಕೆಂದು ಫತ್ವಾ ಹೊರಡಿಸಿ ತೀವ್ರ ಖಂಡನೆಗೆ ಒಳಗಾದ ಬೆನ್ನಲ್ಲೇ ಮತ್ತೆ ಇಂತಹ ಮಾತುಗಳು ಬಂದಿವೆ. ಧರ್ಮದ ಕಪಿಮುಷ್ಟಿಯಲ್ಲಿ ಮಹಿಳೆಯರನ್ನು ಹಿಡಿದಿಡುವ, ಆ ಮೂಲಕ ತಮ್ಮ ಪ್ರಾಬಲ್ಯವನ್ನು ಮೆರೆಸುವ ಧಾರ್ಮಿಕ ಮೂಲಭೂತವಾದ ಸದಾ ಖಂಡನೀಯ. ಸಾನಿಯ ಮಿರ್ಜಾ ಕೇವಲ ಮುಸ್ಲಿಂ ಸಮುದಾಯದ ಪ್ರತಿನಿಧಿಯಷ್ಟೇ ಅಲ್ಲ ಆಕೆ ಭಾರತೀಯ ಪ್ರತಿನಿಧಿಯೆಂಬುದನ್ನು ಪ್ರತಿಪಾದಿಸುತ್ತಲೇ ಇಂತಹ ಬೆದರಿಕೆಗಳಿಗೆ ಜಗ್ಗದೇ ಆಕೆ ಪ್ರಗತಿಪಥದಲ್ಲಿ ಮುಂದೆ ಸಾಗಬೇಕೆಂಬುದು ನಮ್ಮ ಆಶಯ ಮತ್ತು ಇಂತಹ ಪ್ರತಿಗಾಮಿ ಧೋರಣೆಗಳನ್ನು ಎಲ್ಲ ಪ್ರಗತಿಪರರೂ ಖಂಡಿಸಬೇಕು. ಅದರಲ್ಲಿಯೂ ಈ ಮೇಲಿನ ‘ಫತ್ವಾ’ದಂತಹ ಮಾತುಗಳನ್ನು ಮುಸ್ಲಿಂ ಸಮುದಾಯದ ಪ್ರಗತಿಪರ ಚಿಂತಕರು ಒಕ್ಕೊರಲಿನಿಂದ ಖಂಡಿಸಬೇಕು. ಧರ್ಮದ ಹೆಸರಿನಲ್ಲಿ ಕಟ್ಟುಪಾಡು ವಿಧಿಸುವುದು, ಆ ಮೂಲಕ ಮಾನವ ಹಕ್ಕುಗಳನ್ನು ಉಲ್ಲಂಘಿಸುವುದನ್ನು ವಿರೋಧಿಸಬೇಕು.



ಮಣ್ಣು ಮಾರಾಟಕ್ಕಿದೆ !

ಕಪ್ಪು, ಕೆಂಪು, ಮಳಲು ಮಸಾರಿ
ಬಣ್ಣ ಬಣ್ಣದ ಮಣ್ಣು
ಫಲವತ್ತಾದ ಈ ನೆಲದ ಮಣ್ಣು
ಮಾರಾಟಕ್ಕಿದೆ ಬನ್ನಿ ಸ್ವಾಮಿ.
ಮಲ್ಲಿಗೆ ಸೇವಂತಿಗೆ ಹೂ
ಬೆಳೆಯುವ ಮಣ್ಣು
ಹಲಸು, ಮಾವಿನ ರುಚಿ
ತುಂಬಿದ ಮಣ್ಣು
ಮಾರಾಟಕ್ಕಿದೆ ಬನ್ನಿ
ಕೊಂಡು ಕೊಳ್ಳಿ!

ಗೋಧಿ ಬೆಳೆಯುವ
ಸಮೃದ್ಧ ಮಣ್ಣು
ಭತ್ತದ ಗದ್ದೆಯ
ಕೆಸರಿನ ಮಣ್ಣು
ಶ್ರೀಗಂಧ ಬೆಳೆಯುವ
ಕರುನಾಡಿನ ಮಣ್ಣು
ಮಾರಾಟಕ್ಕಿದೆ ಬನ್ನಿ
ಕೊಂಡು ಕೊಳ್ಳಿ!

ತೆಂಗು, ಕಂಗು ಬೆಳೆಯುವ ಮಣ್ಣು
ರಬ್ಬರ್, ಕಾಫಿ ಬೆಳೆಯುವ ಮಣ್ಣು
ಬೆಲ್ಲದ ಸಿಹಿ ರುಚಿಯ
ಈ ನೆಲದ ಮಣ್ಣು
ಮಾರಾಟಕ್ಕಿದೆ ಬನ್ನಿ
ಕೊಂಡುಕೊಳ್ಳಿ!

ಕಾರ್ಗಿಲ್ ಧಣಿಗಳೇ ಬನ್ನಿ
ಹೋಂಡಾದೊಡೆಯರೇ ಬನ್ನಿ
ಅಗ್ಗವಾಗಿದೆ ಮಣ್ಣು
ಬನ್ನಿ ಕೊಂಡುಕೊಳ್ಳಿ!

ತುಂಗಭದ್ರೆಯ ದಂಡೆಯ ಮಣ್ಣು
ಕೃಷ್ಣ ಕಾವೇರಿ ನದಿಗಳ ಮಣ್ಣು
ಪಶ್ಚಿಮ ಘಟ್ಟದ
ಕಪ್ಪಾದ ಮಣ್ಣು
ಯಾವುದು ಬೇಕು
ಬನ್ನಿ ಕೊಂಡುಕೊಳ್ಳಿ!

ಶ್ವೇತ ಭವನದ
ದೊರೆಗಳೇ ಬನ್ನಿ
ಟೋಕಿಯೋ ಬರ್ಲಿನ್
ಸರದಾರರೇ ಬನ್ನಿ
ತೊಲಗಿದ ಬಿಳಿಯರೇ
ಮತ್ತೇ ಬನ್ನಿ
ಡಂಕಲ್-ಅಂಕಲ್
ನೀವೂ ಬನ್ನಿ
ತೆರೆದಿದೆ ಬಾಗಿಲು ನಿಮಗಾಗಿ
ಉದಾರೀಕರಣದ ಸಲುವಾಗಿ

ಖನಿಜ ತುಂಬಿದ
ಸಾಲು ಗುಡ್ಡಗಳು ಬೇಕೆ
ಗಂಗಾನದಿಯ ಬಯಲದು ಬೇಕೆ
ಹಿಮಾಲಯದ ತಪ್ಪಲು ಬೇಕೆ
ಕಾಶ್ಮೀರದ ಸೇಬು ತೋಟವು ಬೇಕೆ
ಕೊಡುವೆವು ನಾವು ಕೇಳಿದ ಬೆಲೆಗೆ
ಪೇಟೆಂಟ್ ಕೂಡ
ಕೊಡುವೆವು ನಾವು
ಆಕಳು ಜೊತೆಗೆ ಕರು
ಮಣ್ಣಿನ ಜೊತೆಗೆ
ಈ ಮಣ್ಣ ಮಕ್ಕಳು
ತಪ್ಪದೇ ಕೊಡುವೆವು
ಬನ್ನಿ ಕೊಂಡುಕೊಳ್ಳಿ!

ಇದು ಪುಣ್ಯ ಭೂಮಿ ಸ್ವಾಮೀ.
ಮುಟ್ಟಿದ್ದೆಲ್ಲಾ ಚಿನ್ನ
ಮುಚ್ಚು ಮರೆಯಿಲ್ಲದ
ಮುಕ್ತ ವ್ಯಾಪಾರ
ಬನ್ನಿ ಇಂದೇ ಬನ್ನಿ
ಗೋಲ್‌ಗುಂಬಜ್, ತಾಜ್‌ಮಹಲ್
ಸ್ಯಾಂಪಲ್ ಬೇಕೋ
ಬೀಸೋ ಗಾಳಿ ಬೇಕೋ
ಹಾಸೋ ಸೆರಗು ಬೇಕೋ
ಯಾವುದು ಬೇಕು ಬನ್ನಿ
ಬಂದು ಒಮ್ಮೆ ಕೊಂಡು ನೋಡಿ!

- ಹುಲಿಕಟ್ಟಿ ಚನ್ನಬಸಪ್ಪ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಿಮ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH